ಸಂಪುಟ 3, ಸಂಚಿಕೆ 3

ಆಗಸ್ಟ್ 1-15, 2022

ಉಚಿತ ವಿತರಣೆಗಾಗಿ

# ನ್ಯೂ ಇಂಡಿಯಾ ಸಮಾಚಾರ




Follow us @NISPIBIndia

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

## ಸಂಪ್ರದಾಯದಲ್ಲಿ ಬೇರೂರಿರುವ

# ಅಭಿವೃದ್ಧಿ ಮತ್ತು ಪರಂಪರೆ


ಸ್ವಾತಂತ್ರ್ಯದ 75 ನೇ ವರ್ಷವನ್ನು ಅಮೃತ ಮಹೋತ್ಸವದ ರೂಪದಲ್ಲಿ ಆಚರಿಸುತ್ತಿರುವ ರಾಷ್ಟ್ರವು ಸುವರ್ಣಯುಗದತ್ತ ಸಾಗುತ್ತಿದೆ. ಶ್ರೀಮಂತ ಪರಂಪರೆ ಮತ್ತು ತ್ವರಿತ ಅಭಿವೃದ್ಧಿಯು ಭಾರತವನ್ನು ಜಗತ್ತಿನ ಹೊಸ ಭರವಸೆಯನ್ನಾಗಿ ಮಾಡಿದೆ.



# ತ್ರಿವರ್ಣ ಧ್ವಜದ ವಿನ್ಯಾಸಕರಿಗೆ ರಾಷ್ಟ್ರವು ಚಿರಋಣಿಯಾಗಿದೆ...

ಭಾರತದ ರಾಷ್ಟ್ರೀಯ ಧ್ವಜ – ತ್ರಿವರ್ಣ ಧ್ವಜ. ರಾಷ್ಟ್ರಧ್ವಜವು ಮೂರು ಬಣ್ಣಗಳಿಂದ ರೂಪುಗೊಂಡಿರುವ ರಾಷ್ಟ್ರಧ್ವಜವು ಭಾರತದ ಹೆಮ್ಮೆ ಮತ್ತು ಘನತೆಯಾಗಿದೆ. ಇದು 130 ಕೋಟಿ ಭಾರತೀಯರ ಧೈರ್ಯ, ಶೌರ್ಯ, ಹೆಮ್ಮೆ, ಆಕಾಂಕ್ಷೆಗಳು ಮತ್ತು ಗೌರವದ ಸಂಕೇತವಾಗಿದೆ. ಧ್ವಜದ ಆರಂಭಿಕ ರೂಪ ಇಂದಿನಂತಿರಲಿಲ್ಲ. ಇದು ಕಾಲಕಾಲಕ್ಕೆ ಅನೇಕ ಬದಲಾವಣೆಗಳನ್ನು ಕಂಡಿದೆ. ಇಂದು ನಾವು ಕಾಣುತ್ತಿರುವ ನಮ್ಮ ತ್ರಿವರ್ಣ ಧ್ವಜದ ಮೂಲ ರೂಪದ ರೂವಾರಿ ಪಿಂಗಲಿ ವೆಂಕಯ್ಯನವರು. 2 ಆಗಸ್ಟ್ 1876 ರಂದು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಸಮೀಪದ ಹಳ್ಳಿಯಲ್ಲಿ ಜನಿಸಿದ ಪಿಂಗಲಿ ವೆಂಕಯ್ಯ ಅವರಿಗೆ ರಾಷ್ಟ್ರಧ್ವಜವನ್ನು ರೂಪಿಸುವ ಜವಾಬ್ದಾರಿಯನ್ನು ಮಹಾತ್ಮ ಗಾಂಧಿಯವರು ವಹಿಸಿದ್ದರು. 1921 ರಲ್ಲಿ ವೆಂಕಯ್ಯನವರು ಧ್ವಜವನ್ನು ಸಿದ್ಧಪಡಿಸಿದರು. 1931 ರಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಭಾರತದ ರಾಷ್ಟ್ರಧ್ವಜವನ್ನು ಅದರ ಮೂಲ ರೂಪದಲ್ಲಿ 22 ಜುಲೈ 1947 ರಂದು ಅಳವಡಿಸಿಕೊಳ್ಳಲಾಯಿತು.

## ತ್ರಿವರ್ಣ ಧ್ವಜದ ಅಭಿವೃದ್ಧಿಯ ಪಯಣ






ಆಂಧ್ರಪ್ರದೇಶವು ವೀರರು ಮತ್ತು ದೇಶಭಕ್ತರ ನಾಡು. ದೇಶದ ರಾಷ್ಟ್ರಧ್ವಜವನ್ನು ಸಿದ್ಧಪಡಿಸಿದ ಪಿಂಗಲಿ ವೆಂಕಯ್ಯ ಅವರಂತಹ ಸ್ವಾತಂತ್ರ್ಯ ಹೋರಾಟಗಾರರು ಇಲ್ಲಿದ್ದರು. ಕನ್ನೆಗಂಟಿ ಹನುಮಂತು, ಕಂದುಕುರಿ ವೀರೇಶಲಿಂಗಂ ಪಂತುಲು ಮತ್ತು ಪೊಟ್ಟಿ ಶ್ರೀರಾಮುಲು ಮುಂತಾದ ಸ್ವಾತಂತ್ರ್ಯ ಹೋರಾಟಗಾರರ ನಾಡು ಇದು.

-ನರೇಂದ್ರ ಮೋದಿ. ಪ್ರಧಾನ ಮಂತ್ರಿ

# ನ್ಯೂ ಇಂಡಿಯಾ ಸಮಾಚಾರ

**ಸಂಪುಟ 3, ಸಂಚಿಕೆ 3 ಆಗಸ್ಟ್ 1-15, 2022**



ಸಂಪಾದಕರು

**ಜೈದೀಪ್ ಭಟ್ನಾಗರ್**

ಪ್ರಧಾನ ಮಹಾನಿರ್ದೇಶಕರು,

ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋ, ನವದೆಹಲಿ

ಹಿರಿಯ ಸಲಹಾ ಸಂಪಾದಕರು

**ಸಂತೋಷ್ ಕುಮಾರ್**

ಹಿರಿಯ ಸಹಾಯಕ ಸಲಹಾ ಸಂಪಾದಕರು

**ವಿಭೋರ್ ಶರ್ಮಾ**

ಸಹಾಯಕ ಸಲಹಾ ಸಂಪಾದಕರು

**ಅಖಿಲೇಶ್ ಕುಮಾರ್**

**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು

**ಸುಮಿತ್ ಕುಮಾರ್** (ಇಂಗ್ಲಿಷ್)

**ಜಯ್ ಪ್ರಕಾಶ್ ಗುಪ್ತಾ** (ಇಂಗ್ಲಿಷ್)

**ಅನಿಲ್ ಪಟೇಲ್** (ಗುಜರಾತಿ),

**ನದೀಮ್ ಅಹ್ಮದ್** (ಉರ್ದು),

**ಪಾಲ್‌ಮಿ ರಕ್ಷಿತ್** (ಬಂಗಾಳಿ)

**ಹರಿಹರ ಪಂಡಾ** (ಒಡಿಯಾ)

ಹಿರಿಯ ವಿನ್ಯಾಸಕರು

**ಶ್ಯಾಮ್ ಶಂಕರ್ ತಿವಾರಿ**

**ರವೀಂದ್ರ ಕುಮಾರ್ ಶರ್ಮಾ**

ವಿನ್ಯಾಸಕರು

**ದಿವ್ಯಾ ತಲ್ವಾರ್, ಅಭಯ್ ಗುಪ್ತಾ**




13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ

https://newindiasamachar.pib.gov.in/news.aspx

**ನ್ಯೂ ಇಂಡಿಯಾ ಸಮಾಚಾರ್ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:**

https://newindiasamachar.pib.gov.in/archive.aspx


**Follow @NISPIBIndia on Twitter for regular updates on 'New India Samachar'**

# ಒಳಪುಟಗಳಲ್ಲಿ

**ಅಮೃತ ಮಹೋತ್ಸವದಿಂದ ಸುವರ್ಣ ಯುಗದೆಡೆಗೆ....**










**ಮುಖಪುಟ ಲೇಖನ**

75 ವರ್ಷಗಳ ಸ್ವಾತಂತ್ರ್ಯ ಪೂರೈಸಿದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಅಮೃತೋತ್ಸವವನ್ನು ಸಾರ್ವಜನಿಕ ಸಹಭಾಗಿತ್ವದಲ್ಲಿ ಸಂಕಲ್ಪವನ್ನಾಗಿ ಪರಿವರ್ತಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಹೇಗೆ ಚಾಲನೆ ನೀಡಿದರು ಎಂಬುದನ್ನು ತಿಳಿಯೋಣ | 16-36

**ಭವಿಷ್ಯದೊಂದಿಗೆ ಭೂತಕಾಲದ ಜೋಡಣೆ**



ಪ್ರಧಾನಮಂತ್ರಿ ಸಂಗ್ರಹಾಲಯವು 7 ದಶಕಗಳಿಗಿಂತಲೂ ಹೆಚ್ಚಿನ ಶ್ರೀಮಂತ ಭಾರತೀಯ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. | 38-42

**ನನ್ನ ಗೆಳೆಯ! ಶಿಂಜೋ ಅಬೆ...**



ಜಪಾನ್‌ನ ಮಾಜಿ ಪ್ರಧಾನಿ ಪದ್ಮವಿಭೂಷಣ ಶಿಂಜೋ ಅಬೆ ಅವರ ನಿಧನಕ್ಕೆ ಪ್ರಧಾನಮಂತ್ರಿಯವರ ಸಂತಾಪ ಸಂದೇಶ. | 51-52

**ಸುದ್ದಿ ತುಣುಕುಗಳು** | 4-5

**ರಾಷ್ಟ್ರಪಿತ ಇವರನ್ನು 'ರಾಷ್ಟ್ರಕವಿ' ಎಂದು ಕರೆದರು.**

ಈ ಬಾರಿ ವ್ಯಕ್ತಿತ್ವ ವಿಭಾಗದಲ್ಲಿ ಮೈಥಿಲಿ ಶರಣ್ ಗುಪ್ತ್ ಬಗೆಗಿನ ಲೇಖನವನ್ನು ಓದಿ | 6-7

**ಅಭಿವೃದ್ಧಿಯ ಹೊಸ ಯುಗ**

ಜಮ್ಮು ಮತ್ತು ಕಾಶ್ಮೀರ: ಬದಲಾವಣೆಯ 3 ವರ್ಷಗಳು | 8-11

**ನಮಃ ಶಿವಾಯ**

ದೇವಘರ್ ವಿಮಾನ ನಿಲ್ದಾಣದ ಜೊತೆಗೆ ಜಾರ್ಖಂಡ್ ಗೆ ಅನೇಕ ಯೋಜನೆಗಳು | 12-13

**ಸೆಮಿಕಂಡಕ್ಟರ್ ಚಿಪ್ ತಯಾರಿಕೆಯ ಕೇಂದ್ರವಾಗಲಿರುವ ಗುಜರಾತ್**

ಗಾಂಧಿನಗರದಲ್ಲಿ ಡಿಜಿಟಲ್ ಇಂಡಿಯಾ ಸಪ್ತಾಹ ಆಯೋಜನೆ | 14-15

**ಮುನ್ನೆಚ್ಚರಿಕೆಯ ಡೋಸ್ ಜೊತೆಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಆದ್ಯತೆ**

ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ | 37

**ಸೇರ್ಪಡೆ... ತಳವರ್ಗದವರ ಅಭಿವೃದ್ಧಿಯ ಹಾದಿ**

ಅರುಣ್ ಜೇಟ್ಲಿ ಸ್ಮಾರಕ ಉಪನ್ಯಾಸದಲ್ಲಿ ಪ್ರಧಾನಿ ಮೋದಿ ಭಾಷಣ | 45-46

**ಅಭಿವೃದ್ಧಿಗೆ ಮತ್ತೊಂದು ಆಯಾಮ**

ಪ್ರಧಾನಿಯವರಿಂದ ಬುಂದೇಲ್ಖಂಡ್ ಎಕ್ಸ್‌ಪ್ರೆಸ್ ವೇಗಳ ಉದ್ಘಾಟನೆ | 47-48

**ಕೌಶಲ್ಯದಿಂದ ಉದ್ಯೋಗದವರೆಗೆ...**

ಪ್ರಧಾನ ಮಂತ್ರಿ ದಕ್ಷ್ ಯೋಜನೆಯ ಯಶಸ್ವಿ ಒಂದು ವರ್ಷ | 49-50



**ಮುದ್ರಣ ಮತ್ತು ಪ್ರಕಟಣೆ: ಸತ್ಯೇಂದ್ರ ಪ್ರಕಾಶ್,** ಪ್ರಧಾನ ಮಹಾನಿರ್ದೇಶಕರು, ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್ ಪರವಾಗಿ.
**ಮುದ್ರಣಾಲಯ** : ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್, ಎಫ್‌ಬಿಡಿ-ಒನ್ ಕಾರ್ಪೊರೇಟ್ ಪಾರ್ಕ್, 10ನೇ ಮಹಡಿ, ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003. **ಸಂಪರ್ಕ ವಿಳಾಸ :** ಕೊಠಡಿ ಸಂಖ್ಯೆ 278, ಬ್ಯೂರೋ ಆಫ್ ಔಟ್ ರೀಚ್ ಕಮ್ಯೂನಿಕೇಷನ್ 2ನೇ ಮಹಡಿ, ಸೂಚನಾ ಭವನ, ನವದೆಹಲಿ -110003. **ಇ-ಮೇಲ್ :** response-nis@pib.gov.in, **ಆರ್‌ಎನ್‌ಐ ನಂ. :** DELKAN/2020/78828

# ಸಂಪಾದಕೀಯ

ಶುಭಾಶಯಗಳು!

**"उत्सवेन बिना यस्मात् स्थापनम् निष्फलम् भवेत्"** ಅಂದರೆ, ಆಚರಣೆಯಿಲ್ಲದೆ ಯಾವುದೇ ಪ್ರಯತ್ನ, ಯಾವುದೇ ಸಂಕಲ್ಪ ಯಶಸ್ವಿಯಾಗುವುದಿಲ್ಲ. ಸಂಕಲ್ಪವು ಹಬ್ಬದ ರೂಪವನ್ನು ಪಡೆದಾಗ ಲಕ್ಷಾಂತರ ಮತ್ತು ಕೋಟ್ಯಂತರ ಸಂಕಲ್ಪಗಳು ಅದಕ್ಕೆ ಸೇರಿದಾಗ, ಅವರ ಶಕ್ತಿಯು ನೂರ್ಮಡಿಯಾಗುತ್ತದೆ. ಆಜಾದಿ ಕಾ ಅಮೃತ ಮಹೋತ್ಸವವು ಜನ ಭಾಗೀದಾರಿಯನ್ನು ಅಂದರೆ "ಎಲ್ಲರ ಪಾಲ್ಗೊಳ್ಳುವಿಕೆ" ಯನ್ನು ಉತ್ತೇಜಿಸುತ್ತದೆ. ಇದು ಯಾವುದೇ ಉತ್ಸವದ ಚೈತನ್ಯದ ಸೆಲೆಯಾಗಿದೆ. ಈ ಸ್ಫೂರ್ತಿಯೊಂದಿಗೆ, ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಅಭಿವೃದ್ಧಿ ಪಯಣಕ್ಕೆ ಉತ್ತೇಜನ ನೀಡುವ ಮತ್ತು ಭಾರತದ ಸುವರ್ಣಯುಗದ ಕನಸನ್ನು ನನಸಾಗಿಸುವ ಮಹತ್ವಾಕಾಂಕ್ಷೆಯ ಗುರಿಯೊಂದಿಗೆ ಸ್ವಾತಂತ್ರ್ಯದ 75 ನೇ ವರ್ಷಕ್ಕೆ ಅಮೃತ ಮಹೋತ್ಸವ ಎಂದು ಕರೆದರು. ಒಂದು ಮಗು ಸ್ವಾತಂತ್ರ್ಯ ಚಳವಳಿಯ ಹೋರಾಟದ ಉತ್ಸಾಹವನ್ನು ಮೈಗೂಡಿಸಿಕೊಂಡರೆ, ಆತ ತನ್ನ ಜೀವನದುದ್ದಕ್ಕೂ ಭಾರತದ ಅಭಿವೃದ್ಧಿಯ ಉದ್ದೇಶಕ್ಕಾಗಿ ಮುಡಿಪಾಗಿರುತ್ತಾನೆ.

ಭಾರತ ಸರ್ಕಾರವು ನಮ್ಮ ಮಹಾನ್ ರಾಷ್ಟ್ರದ 75 ವರ್ಷಗಳ ಸ್ವಾತಂತ್ರ್ಯದ ಪಯಣವನ್ನು ಒಂದು ವಿಶಿಷ್ಟ ಹೆಗ್ಗುರುತಾಗಿ ಮಾಡಿದೆ ಮತ್ತು ಮುಂದಿನ 25 ವರ್ಷಗಳಲ್ಲಿ ಅಂದರೆ 2047 ರವರೆಗೆ ವಿವಿಧ ಯೋಜನೆಗಳಿಗೆ ರೂಪ ನೀಡಲು ಹೊಸ ಉಪಕ್ರಮಗಳು, ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳನ್ನು ರೂಪಿಸಿದೆ. 2047 ರಲ್ಲಿ ಭಾರತವು ಸ್ವಾತಂತ್ರ್ಯದ ಶತಮಾನೋತ್ಸವವನ್ನು ಆಚರಿಸುವಾಗ, ಅದು ಪ್ರತಿಯೊಂದು ಅಂಶದಲ್ಲಿಯೂ ತನ್ನನ್ನು ವಿಶ್ವದ ಅಗ್ರ ರಾಷ್ಟ್ರವೆಂದು ಪರಿಗಣಿಸುತ್ತದೆ. ಮುಂದಿನ 25 ವರ್ಷಗಳ ಅಮೃತ ಕಾಲದೊಂದಿಗೆ ಅಮೃತ ಯಾತ್ರೆ ಆರಂಭಿಸಲಾಗಿದೆ. ಈ ಅವಿಶ್ರಾಂತ ಪಯಣದಲ್ಲಿ, ಭಾರತವು ಸ್ವಾವಲಂಬನೆಯ ಹೊಸ ಮಾನದಂಡಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಅಭಿವೃದ್ಧಿ ಪಯಣವು ಈಗಾಗಲೇ ನಾಳಿನ ನವ ಭಾರತಕ್ಕೆ ಶ್ರೀಮಂತ ಮತ್ತು ವೈಭವದ ಪರಂಪರೆಯ ಗುರುತು ಮೂಡಿಸಿದೆ.

ಈ ಆಗಸ್ಟ್ 15 ರಂದು, ನಾವು ಅಮೃತ ಮಹೋತ್ಸವದ 75 ವಾರಗಳನ್ನು ಪೂರ್ಣಗೊಳಿಸಿದಾಗ, ಈ ಸ್ವಾತಂತ್ರ್ಯೋತ್ಸವವನ್ನು ಅಮೃತ ಸಂಕಲ್ಪದ ಅವಧಿಯನ್ನಾಗಿ ಮಾಡಲು ಭಾರತವು ಪ್ರತಿಯೊಬ್ಬರ ಭಾಗವಹಿಸುವಿಕೆಯನ್ನು ಹೇಗೆ ಉತ್ತೇಜಿಸಿತು ಎಂಬುದು ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ಸಂಚಿಕೆಯ ಮುಖಪುಟ ಲೇಖನವಾಗಿದೆ.

ಈ ಸಂಚಿಕೆಯಲ್ಲಿ ರಾಷ್ಟ್ರಕವಿ ಮತ್ತು ಮೇರು ಸಾಹಿತಿ ಮೈಥಿಲಿ ಶರಣ್ ಗುಪ್ತ ಮತ್ತು ಪ್ರಧಾನಮಂತ್ರಿ ಸಂಗ್ರಹಾಲಯದ ಬಗೆಗಿನ ಲೇಖನಗಳಿವೆ. ಅದರೊಂದಿಗೆ 370 ನೇ ವಿಧಿಯನ್ನು ರದ್ದುಪಡಿಸಿದ ನಂತರ ಕಳೆದ ಮೂರು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಅಭಿವೃದ್ಧಿಯ ಹೊಸ ಯುಗ, ವಿಭಜನ್ ವಿಭಿಷಿಕ ಸ್ಮೃತಿ ದಿವಸ್ ಮತ್ತು ಪ್ರಧಾನ ಮಂತ್ರಿಯವರು ರಾಷ್ಟ್ರಕ್ಕೆ ಸಮರ್ಪಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಲೇಖನಗಳನ್ನು ಓದಬಹುದು.

75 ವರ್ಷಗಳ ಸ್ವಾತಂತ್ರ್ಯ, ಏಕತೆ, ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವವನ್ನು ಆಚರಿಸೋಣ.

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ
ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/
ಡೌನ್‌ಲೋಡ್ ಮಾಡಿ.
**https://newindiasamachar.pib.gov.in/**

(ಜೈದೀಪ್ ಭಟ್ನಾಗರ್)

# ಅಂಚೆ ಪೆಟ್ಟಿಗೆ




ನಾನು ನ್ಯೂ ಇಂಡಿಯಾ ಸಮಾಚಾರವನ್ನು ನಿಯಮಿತವಾಗಿ ಓದುತ್ತಿದ್ದೇನೆ. ಕ್ರಮಬದ್ಧವಾದ ಮತ್ತು ಅತ್ಯುತ್ತಮವಾದ ಲೇಖನಗಳನ್ನು ಓದುವ ಮೂಲಕ ನಾವು ನಮ್ಮ ಬರವಣಿಗೆಯ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಐತಿಹಾಸಿಕ ಮತ್ತು ವಿದೇಶಿ ಸಂಬಂಧಗಳ ವಿವಿಧ ಆಯಾಮಗಳಲ್ಲಿ ಪ್ರಸ್ತುತ ವಿದ್ಯಮಾನಗಳ ಜ್ಞಾನ ಪತ್ರಿಕೆಯ ಮೂಲಕ ಲಭ್ಯವಾಗುತ್ತಿದೆ.

**ಹನ್ವಂತ್ ಸಿಂಗ್ ರಾಥೋಡ್**
**hanwantsinghrathore0@gmail.com**

ವಿಶ್ವದಲ್ಲಿಯೇ ಅತಿ ಹೆಚ್ಚು ಯುವಜನತೆಯನ್ನು ಹೊಂದಿರುವ ಭಾರತವು ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರ ಕ್ರಿಯಾಶೀಲ ನಾಯಕತ್ವದಲ್ಲಿ ಕೌಶಲ್ಯ ಅಭಿವೃದ್ಧಿಗೆ ಹೊಸ ದಿಕ್ಕನ್ನು ನೀಡಿದೆ. ರಾಷ್ಟ್ರದ ಯುವಕರು ತಮ್ಮ ಕೌಶಲ್ಯವನ್ನು ಸುಧಾರಿಸಿಕೊಳ್ಳುವ ಮೂಲಕ ಅಭಿವೃದ್ಧಿ ಮತ್ತು ಪ್ರಗತಿಯ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಸ್ಕಿಲ್ ಇಂಡಿಯಾ ಮಿಷನ್ ಏಳು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಅದರ ಸಂಪೂರ್ಣ ಪಯಣವನ್ನು ಸಂಪಾದಕೀಯ ತಂಡವು ಮುಖಪುಟ ಲೇಖನದ ರೂಪದಲ್ಲಿ ಜುಲೈ 1-15 ರ ಸಂಚಿಕೆಯಲ್ಲಿ ಸುಂದರವಾಗಿ ಪ್ರಕಟಿಸಿದೆ. ರಕ್ಷಣಾ ವಲಯದಲ್ಲಿ ನೇಮಕಾತಿಗೆ ದಾರಿ ತೆರೆಯುವ ಹೊಸ ವ್ಯವಸ್ಥೆಗೆ ಸಂಪುಟದ ಅಂಗೀಕಾರ, ಅಮೃತ್ ಮಹೋತ್ಸವ, ಕೋವಿಡ್ ವಿರುದ್ಧ ಸಮರ ಮತ್ತು ಪ್ರಧಾನಿ ಮೋದಿಯವರ ವಿವಿಧ ಅಭಿವೃದ್ಧಿ ಯೋಜನೆಗಳ ಉಡುಗೊರೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ, ಇದಕ್ಕಾಗಿ ಸಂಪೂರ್ಣ ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

**ಚೌಧರಿ ಶಕ್ತಿ ಸಿಂಗ್**
shaktisinghadv@gmail.com

ಮೊದಲ ಬಾರಿಗೆ ನ್ಯೂ ಇಂಡಿಯಾ ಸಮಾಚಾರವನ್ನು ಓದುವ ಅವಕಾಶ ಸಿಕ್ಕಿತು. ಇದು ಉತ್ತಮ ಮತ್ತು ವಿಶಿಷ್ಟವಾದ ಶೈಲಿಯನ್ನು ಹೊಂದಿದೆ. ಇಡೀ ಸಂಚಿಕೆಯಲ್ಲಿ ಒಂದೇ ಒಂದು ಲೇಖನವೂ ಅಸಾಂದರ್ಭಿಕವಾಗಿಲ್ಲ. ಪತ್ರಿಕೆಯ ಸಂಪಾದನೆ ಚೆನ್ನಾಗಿದೆ. ಈ ಪತ್ರಿಕೆಯು ಹೆಚ್ಚಿನ ಮೆಚ್ಚುಗೆಯನ್ನು ಪಡೆಯುತ್ತದೆ ಎಂದು ನನಗೆ ಖಾತ್ರಿಯಿದೆ. ದಯವಿಟ್ಟು ಇದೇ ಗುಣಮಟ್ಟವನ್ನು ಕಾಪಾಡಿಕೊಳ್ಳಿ.

**ವಿನಯ್ ಥಟ್ಟೆ**
**vinay.thattey@gmail.com**

ಜುಲೈ 1-15 ರ ನ್ಯೂ ಇಂಡಿಯಾ ಸಮಾಚಾರ್ ಸಂಚಿಕೆಯನ್ನು ತಲುಪಿದೆ. ಇದು ಉತ್ತಮ ಪತ್ರಿಕೆ ಮತ್ತು ನಾನು ಇಡೀ ಪತ್ರಿಕೆಯನ್ನು ಓದಿದ್ದೇನೆ. ಈ ಸಂಚಿಕೆಯಲ್ಲಿನ ಕೌಶಲ್ಯ ಅಭಿವೃದ್ಧಿಯನ್ನು ಕೇಂದ್ರೀಕರಿಸಿದ ಮುಖಪುಟ ಲೇಖನ ನನಗೆ ಇಷ್ಟವಾಯಿತು. ಇದರೊಂದಿಗೆ ಆಜಾದಿ ಕಾ ಅಮೃತ ಮಹೋತ್ಸವ ವಿಭಾಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕಥನವು ಹೊಸ ಶಕ್ತಿ ತುಂಬಿದೆ. ಡಿಜಿಟಲ್ ಇಂಡಿಯಾ ಸೇರಿದಂತೆ ಪತ್ರಿಕೆಯ ಎಲ್ಲಾ ಲೇಖನಗಳು ಅತ್ಯುತ್ತಮವಾಗಿದ್ದವು.

**ಸುರಭಿ ಸ್ನೇಹಾ**
**snehasurabhi5@gmail.com**

**FOLLOW US @NISPIBIndia**


**ಸಂಪರ್ಕ ವಿಳಾಸ:** ಕೊಠಡಿ ಸಂಖ್ಯೆ–278, ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್,
2 ನೇ ಮಹಡಿ, ಸೂಚನಾ ಭವನ, ನವದೆಹಲಿ -110003
**ಇ-ಮೇಲ್:** response-nis@pib.gov.in



ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಆಟಿಕೆಗಳು

# ಫಲಪ್ರದವಾದ ಪ್ರಧಾನಿ ಮೋದಿಯವರ ಮನವಿ, ಭಾರತೀಯ ಆಟಿಕೆಗಳ ರಫ್ತು ಶೇ.61 ರಷ್ಟು ಹೆಚ್ಚಳ

ಆಗಸ್ಟ್ 2020 ರಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ "ಮನ್ ಕಿ ಬಾತ್" ಕಾರ್ಯಕ್ರಮದಲ್ಲಿ "ಜಗತ್ತಿನಲ್ಲಿ ಆಟಿಕೆ ಉದ್ಯಮವು ಸುಮಾರು 7 ಲಕ್ಷ ಕೋಟಿ ರೂಪಾಯಿಗಳ ಮೌಲ್ಯದ್ದಾಗಿದೆ ಮತ್ತು ಇದರಲ್ಲಿ ಭಾರತದ ಪಾಲು ತುಂಬಾ ಸಣ್ಣದು. ಇಂತಹ ಅಗಾಧವಾದ ಪರಂಪರೆ, ಸಂಪ್ರದಾಯ, ವೈವಿಧ್ಯ, ಯುವಜನತೆ ಇರುವ ನಮ್ಮ ದೇಶದ ಪಾಲು ತೀರಾ ಕಡಿಮೆಯಾಗಿದೆ. ಅದು ಒಳ್ಳೆಯದಲ್ಲ. ಇದನ್ನು ನಾವೆಲ್ಲರೂ ಒಟ್ಟಾಗಿ ಮುನ್ನಡೆಸಬೇಕು" ಎಂದು ಜನರಲ್ಲಿ ಮನವಿ ಮಾಡಿದರು. ಪ್ರಧಾನಿಯವರ ಈ ಮನವಿಯೊಂದಿಗೆ, ಆಟಿಕೆ ವಲಯದಲ್ಲಿ ಭಾರತದ ಸ್ವಾವಲಂಬನೆಯ ಹೊಸ ಕಥೆ ಆರಂಭವಾಗಿದೆ.

ತಿಂಗಳ ಅವಧಿಯ ಟಾಯ್ಕ್ಯಾಥಾನ್, ದೇಶದ ಮೊದಲ ಆಟಿಕೆ ಮೇಳ, 100 ಪ್ರತಿಶತ ವಿದೇಶಿ ಹೂಡಿಕೆಗೆ ಅನುಮತಿ, ವಿದೇಶಿ ಆಟಿಕೆಗಳ ಆಮದಿನ ಮೇಲೆ ಟಾಯ್ ಕ್ಲಸ್ಟರ್ ಕಡ್ಡಾಯ ಪ್ರಮಾಣೀಕರಣ, ಭಾರತೀಯ ಆಟಿಕೆಗಳಲ್ಲಿ ನಾವೀನ್ಯತೆ ಮತ್ತು ಡಿಜಿಟಲ್ ಗೇಮಿಂಗ್ ವಲಯದಲ್ಲಿ ಹೊಸ ಆರಂಭ. ಈ ಉಪಕ್ರಮಗಳ ಪರಿಣಾಮಗಳು ಈಗ ಗೋಚರಿಸುತ್ತಿವೆ. 2018-19ರಲ್ಲಿ 371 ಮಿಲಿಯನ್ ಡಾಲರ್ ಮೌಲ್ಯದ ಆಟಿಕೆಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಾಗಿತ್ತು, ಆದರೆ 2021-22ರಲ್ಲಿ ಇದು ಶೇ.70 ರಷ್ಟು ಕುಸಿದು 110 ಮಿಲಿಯನ್ ಡಾಲರ್‌ಗೆ ಕಡಿಮೆಯಾಗಿದೆ. 2018-19 ರಲ್ಲಿ ಸಾಗರೋತ್ತರ ಮಾರುಕಟ್ಟೆಗಳಿಗೆ ಭಾರತೀಯ ಆಟಿಕೆಗಳ ರಫ್ತು 202 ಮಿಲಿಯನ್ ಆಗಿತ್ತು, 2021-22 ರಲ್ಲಿ ಶೇ.61 ರಷ್ಟು ಬೆಳವಣಿಗೆಯೊಂದಿಗೆ 326 ಮಿಲಿಯನ್ ಡಾಲರ್‌ಗೆ ತಲುಪಿತು.

# ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ [ಎಐ] ಆಧಾರಿತ 75 ಉತ್ಪನ್ನಗಳನ್ನು ಪ್ರಾರಂಭಿಸಲಾಗಿದೆ

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ಆಧಾರಿತ ರಕ್ಷಣಾ ಉತ್ಪನ್ನಗಳು ಭವಿಷ್ಯದ ಯುದ್ಧಗಳಲ್ಲಿ ನಿರ್ಣಾಯಕವಾಗಿರುತ್ತವೆ. ಇದನ್ನು ಗಮನದಲ್ಲಿಟ್ಟುಕೊಂಡು, ರಕ್ಷಣಾ ವಲಯದಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅನ್ನು ಉತ್ತೇಜಿಸುವ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಲು 2018 ರಲ್ಲಿ ಎಐ ಕಾರ್ಯಪಡೆಯನ್ನು ರಚಿಸಲಾಯಿತು. ರಕ್ಷಣಾ ವಲಯದಲ್ಲಿ ಸ್ವಾವಲಂಬನೆಗಾಗಿ ಭಾರತದಲ್ಲಿ ಉತ್ಪಾದನೆಗೆ ಆದ್ಯತೆ ನೀಡಲಾಯಿತು. ನಂತರ ನಾವೀನ್ಯತೆಯನ್ನು ಉತ್ತೇಜಿಸಲು ಸ್ಟಾರ್ಟ್‌ಅಪ್‌ಗಳು ಮತ್ತು ವಿದೇಶಿ ಹೂಡಿಕೆಗೆ ಅವಕಾಶಗಳನ್ನು ತೆರೆಯಲಾಯಿತು. ಇದರ ಪರಿಣಾಮವಾಗಿ ಭಾರತೀಯ ರಕ್ಷಣಾ ಉತ್ಪನ್ನಗಳ ರಫ್ತು ಹೆಚ್ಚುತ್ತಿರುವಾಗಲೇ ಸೇನೆಯ ಅತ್ಯಾಧುನಿಕ ಉಪಕರಣಗಳ ಅಗತ್ಯಗಳೂ ಈಡೇರಿವೆ. 2021-22 ರ ಆರ್ಥಿಕ ವರ್ಷದಲ್ಲಿ ರಕ್ಷಣಾ ರಫ್ತುಗಳು 13,000 ಕೋಟಿ ರೂ.ಗಳನ್ನು ದಾಟಿದೆ. ಇದರಲ್ಲಿ ಶೇ.70ರಷ್ಟು ಕೊಡುಗೆ ಖಾಸಗಿ ವಲಯದಿಂದ ಬಂದಿದ್ದು, ಉಳಿದ ಶೇ.30 ಸಾರ್ವಜನಿಕ ವಲಯದ್ದಾಗಿದೆ. ಜುಲೈ 11 ರಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ಹೊಂದಿದ 75 ಉತ್ಪನ್ನಗಳು ಅಥವಾ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದರು. ಸ್ವಾಯತ್ತ/ ಮಾನವರಹಿತ/ ರೊಬೊಟಿಕ್ಸ್ ವ್ಯವಸ್ಥೆಗಳಲ್ಲಿ ಎಐ ಪ್ಲಾಟ್‌ಫಾರ್ಮ್ ಆಟೊಮೇಷನ್, ಬ್ಲಾಕ್ ಚೈನ್ - ಆಧಾರಿತ ಆಟೋಮೇಷನ್, ಕಮಾಂಡ್, ಕಂಟ್ರೋಲ್, ಕಮ್ಯುನಿಕೇಷನ್ಸ್, ಕಂಪ್ಯೂಟರ್ ಮತ್ತು ಗುಪ್ತಚರ, ಕಣ್ಗಾವಲು ಮತ್ತು ವಿಚಕ್ಷಣ, ಸೈಬರ್ ಭದ್ರತೆ, ಮಾನವ ನಡವಳಿಕೆಯ ವಿಶ್ಲೇಷಣೆ, ಗುಪ್ತಚರ ಮೇಲ್ವಿಚಾರಣೆ ವ್ಯವಸ್ಥೆಗಳು, ಮಾರಕ ಶಸ್ತ್ರಾಸ್ತ್ರ ವ್ಯವಸ್ಥೆಗಳು ಮತ್ತು ಲಾಜಿಸ್ಟಿಕ್ಸ್ ಮತ್ತು ಪೂರೈಕೆ ಸರಪಳಿ ನಿರ್ವಹಣೆ ಉತ್ಪನ್ನಗಳು ಮತ್ತು ವ್ಯವಸ್ಥೆಗಳು ಇವುಗಳಲ್ಲಿ ಸೇರಿವೆ.



## ಹೊಸ ಸಂಸತ್ ಭವನದ ಮೇಲೆ ರಾಷ್ಟ್ರೀಯ ಲಾಂಛನ ಅಶೋಕ ಸ್ತಂಭ ಅನಾವರಣ

ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿದೆ ಮತ್ತು ಸಂಸತ್ತು ಅದರ ದೇವಾಲಯವಾಗಿದೆ. ಹೊಸ ಸಂಸತ್ ಭವನ ಮತ್ತು ಸೆಂಟ್ರಲ್ ವಿಸ್ಟಾ ಯೋಜನೆಯ ರೂಪುರೇಷೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ರೂಪಿಸಿದರು. ಇದರ ನಿರ್ಮಾಣವು ನವ ಮತ್ತು ಸ್ವಾವಲಂಬಿ ಭಾರತದ ಮೂಲಭೂತ ಚಿಂತನೆಯ ಪ್ರತಿಬಿಂಬವಾಗಿ ಪ್ರಾರಂಭವಾಯಿತು. ಜುಲೈ 11 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಹೊಸ ಕಟ್ಟಡದ ಮೇಲ್ಭಾಗದಲ್ಲಿ ಸ್ಥಾಪಿಸಲಾಗಿರುವ ಭಾರತದ ರಾಷ್ಟ್ರೀಯ ಲಾಂಛನವಾದ ಅಶೋಕ ಸ್ತಂಭವನ್ನು ಅನಾವರಣಗೊಳಿಸಿದರು. ಈ ರಾಷ್ಟ್ರೀಯ ಲಾಂಛನವನ್ನು ಕಂಚಿನಿಂದ ಮಾಡಲಾಗಿದೆ. ಇದು 21 ಅಡಿ ಎತ್ತರ, 9500 ಕೆಜಿ ತೂಕ ಮತ್ತು 3.3 ರಿಂದ 4.3 ಮೀಟರ್ ವ್ಯಾಸವನ್ನು ಹೊಂದಿದೆ. ನವ ಭಾರತದ ಆಶಯಗಳು ಹೊಸ ಸಂಸತ್ ಭವನದಿಂದ ಸಾಕಾರಗೊಂಡರೆ, ಈ ರಾಷ್ಟ್ರೀಯ ಲಾಂಛನವು ಭಾರತದ ಏಕತೆ, ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಲು ನಮ್ಮನ್ನು ಪ್ರೇರೇಪಿಸುತ್ತದೆ.

## ಭಾರತದಲ್ಲಿ ಸಿಹಿ ಕ್ರಾಂತಿ: ಅಗ್ರ 10 ಜೇನು ಉತ್ಪಾದಕ ರಾಷ್ಟ್ರಗಳಲ್ಲಿ ಭಾರತ

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶದ ರೈತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಾಂಪ್ರದಾಯಿಕ ಕೃಷಿಯ ಜೊತೆಗೆ ಇನ್ನೂ ಅನೇಕ ಕೃಷಿ ಉತ್ಪನ್ನಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಅವುಗಳಲ್ಲಿ ಜೇನು ಉತ್ಪಾದನೆಯು ಒಂದಾಗಿದ್ದು, ಇದು ರೈತರಿಗೆ ಉದ್ಯೋಗವನ್ನು ಒದಗಿಸುವುದು ಮಾತ್ರವಲ್ಲದೆ ಅವರು ತಮ್ಮ ಜೇನುತುಪ್ಪವನ್ನು ವಿದೇಶಕ್ಕೆ ರಫ್ತು ಮಾಡಲು ಅನುವು ಮಾಡಿಕೊಡುತ್ತದೆ. ವಾಸ್ತವವಾಗಿ, ಜೇನು ಮತ್ತು ಅದರ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಬೇಡಿಕೆಯು ಗಣನೀಯವಾಗಿ ಹೆಚ್ಚಿದೆ, ದೇಶದ ಉತ್ಪಾದನೆಯ ಸುಮಾರು ಅರ್ಧದಷ್ಟು ಪ್ರಮಾಣ ಪ್ರತಿ ವರ್ಷ ರಫ್ತಾಗುತ್ತದೆ. ದೇಶದಲ್ಲಿ 'ಸಿಹಿ ಕ್ರಾಂತಿ'ಯನ್ನು ಉತ್ತೇಜಿಸುವ ಪ್ರಯತ್ನಗಳ ಪರಿಣಾಮವಾಗಿ, ಜೇನು ರಫ್ತು 2013 ರಲ್ಲಿದ್ದ 124 ಕೋಟಿ ರೂ.ಗಳಿಂದ 2022 ರಲ್ಲಿ 309 ಕೋಟಿ ರೂ.ಗೆ ಹೆಚ್ಚಿತು, ಈ ಅವಧಿಯಲ್ಲಿ ಜೇನು ರಫ್ತಿನಲ್ಲಿ ಶೇಕಡಾ 149 ರಷ್ಟು ಹೆಚ್ಚಳವಾಗಿದೆ. ಈಗ ಭಾರತವು ವಿಶ್ವದ ಒಂಬತ್ತನೇ ಅತಿ ದೊಡ್ಡ ಜೇನು ರಫ್ತುದಾರ ರಾಷ್ಟ್ರವಾಗಿದೆ.

## ಸ್ಟಾರ್ಟ್‌ಅಪ್ ಶ್ರೇಯಾಂಕದಲ್ಲಿ ಗುಜರಾತ್ ಮತ್ತು ಕರ್ನಾಟಕ ಮೊದಲ ಸ್ಥಾನದಲ್ಲಿವೆ

ಮೇಕ್ ಇನ್ ಇಂಡಿಯಾ ಮತ್ತು ಸ್ವಾವಲಂಬಿ ಭಾರತದಂತಹ ಅಭಿಯಾನಗಳನ್ನು ಕೆಲವು ವರ್ಷಗಳ ಹಿಂದೆ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಆದ್ದರಿಂದ ಸ್ಟಾರ್ಟ್‌ಅಪ್ ಎಂಬ ಪದವೇ ಜನಸಾಮಾನ್ಯರ ಶಬ್ದಕೋಶದಲ್ಲಿ ಇರಲಿಲ್ಲ. ಕಳೆದ ಎಂಟು ವರ್ಷಗಳಲ್ಲಿ ಭಾರತವು ವಿಶ್ವದ ಸ್ಟಾರ್ಟಪ್ ರಾಜಧಾನಿಯಾಗಿ ಹೊರಹೊಮ್ಮಿದೆ. ಭಾರತವು ಈಗ 73079 ಸ್ಟಾರ್ಟ್‌ಅಪ್ಗಳು ಮತ್ತು 101 ಯುನಿಕಾರ್ನ್‌ಗಳೊಂದಿಗೆ ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಾಗಿದೆ. ರಾಜ್ಯಗಳಲ್ಲಿ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸಲು 2018 ರಲ್ಲಿ ಶ್ರೇಯಾಂಕವನ್ನು ಪ್ರಾರಂಭಿಸಲಾಯಿತು. 2021 ರಲ್ಲಿ ಸ್ಟಾರ್ಟ್‌ಅಪ್‌ಗಳ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಗಿದೆ. ಈ ಪಟ್ಟಿಯಲ್ಲಿ ಗುಜರಾತ್ ಮತ್ತು ಕರ್ನಾಟಕ ಮೊದಲ ಸ್ಥಾನದಲ್ಲಿವೆ. ಸ್ಟಾರ್ಟ್‌ಅಪ್ ಇಂಡಿಯಾ ವೆಬ್‌ಸೈಟ್ ಪ್ರಕಾರ, ಗುಜರಾತ್‌ನಲ್ಲಿ 14,200 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳನ್ನು ನೋಂದಾಯಿಸಲಾಗಿದೆ. ಇದು ದೇಶದ ಎಲ್ಲಾ ಸ್ಟಾರ್ಟ್‌ಅಪ್‌ಗಳಲ್ಲಿ 6.70 ಪ್ರತಿಶತವಾಗಿದೆ. ಕೇಂದ್ರಾಡಳಿತ ಪ್ರದೇಶಗಳು ಮತ್ತು ಈಶಾನ್ಯ ರಾಜ್ಯಗಳ ವಿಭಾಗದಲ್ಲಿ ಮೇಘಾಲಯ ಅಗ್ರಸ್ಥಾನದಲ್ಲಿದೆ. ಶ್ರೇಯಾಂಕವನ್ನು ಸಾಂಸ್ಥಿಕ ಸಹಯೋಗ, ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವುದು, ಮಾರುಕಟ್ಟೆ ಪ್ರವೇಶ, ಇನ್‌ಕ್ಯುಬೇಷನ್ ಸಹಯೋಗ, ಹಣಕಾಸು ಬೆಂಬಲ ಮತ್ತು ಮಾರ್ಗದರ್ಶನದಂತಹ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನೀಡಲಾಗುತ್ತದೆ. ಸಂಪೂರ್ಣ ಶ್ರೇಯಾಂಕ ಪಟ್ಟಿಯು ಇಲ್ಲಿ ಲಭ್ಯವಿದೆ **https://www.pib.gov.in/PressReleasePage.aspx? PRID=1839259.** ■

# ಮಹಾತ್ಮಾ ಗಾಂಧಿ ಅವರನ್ನು 'ರಾಷ್ಟ್ರಕವಿ' ಎಂದು ಕರೆದರು



**ಜನನ: 3 ಆಗಸ್ಟ್ 1886, ಮರಣ: 12 ಡಿಸೆಂಬರ್ 1964**

ಮೈಥಿಲಿ ಶರಣ್ ಗುಪ್ತ ... ಮಿನುಗು ತಾರೆ, ಹಿಂದಿ ಸಾಹಿತ್ಯದಲ್ಲಿ ಗೌರವಾನ್ವಿತ ವ್ಯಕ್ತಿ. ಅವರ ಬರವಣಿಗೆ ನಾಗರಿಕರನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರೇರೇಪಿಸಿತು. ಮಹಾತ್ಮ ಗಾಂಧಿ ಅವರಿಗೆ ರಾಷ್ಟ್ರಕವಿ ಎಂಬ ಬಿರುದು ನೀಡಿ ಗೌರವಿಸಿದರು. ಮಹಾಕವಿ ಮೈಥಿಲಿ ಶರಣ್ ಗುಪ್ತ ಅವರ 136ನೇ ಜನ್ಮದಿನದಂದು ಅವರಿಗೆ ಗೌರವಪೂರ್ವಕ ನಮನಗಳು.

ಝಾನ್ಸಿ ಜಿಲ್ಲೆಯ ಚಿರ್ಗಾಂವ್ ಪಟ್ಟಣವು ಇಂದು ಕೋಟ್ಯಂತರ ಹಿಂದಿ ಪ್ರೇಮಿಗಳ ಪವಿತ್ರ ತಾಣವಾಗಿದೆ. ಅಲ್ಲಿ ಮೈಥಿಲಿ ಶರಣ್ ಗುಪ್ತ ಅವರು ತಮ್ಮ ಕ್ರಿಯಾಶೀಲ ಬರವಣಿಗೆಯಿಂದ ಸ್ವಾತಂತ್ರ್ಯ ಚಳವಳಿಗೆ ಸ್ಫೂರ್ತಿ ನೀಡಿದರು. ರಾಷ್ಟ್ರಕವಿ ಮೈಥಿಲಿ ಶರಣ್ ಗುಪ್ತ ಅವರು 3 ಆಗಸ್ಟ್ 1886 ರಂದು ಇಲ್ಲಿ ಜನಿಸಿದರು. ಅವರು ಸೇಠ್ ರಾಮಚರಣ್ ಕನಕ್ನೆ ಮತ್ತು ಕೌಶಲ್ಯ ಬಾಯಿ ದಂಪತಿಯ ಮೂರನೇ ಮಗು. ಅವರ ತಂದೆ ರಾಮ ಭಕ್ತರು ಮತ್ತು ಕಾವ್ಯ ಪ್ರೇಮಿ. ಶಾಲೆಯಲ್ಲಿ ಕ್ರೀಡೆಗಳ ಮೇಲೆ ಹೆಚ್ಚು ಗಮನಹರಿಸಿದ್ದರಿಂದ ಮೈಥಿಲಿ ಶರಣ್ ಗುಪ್ತ ಅವರ ಅಧ್ಯಯನವು ಅಪೂರ್ಣವಾಯಿತು. ಇಂತಹ ಪರಿಸ್ಥಿತಿಯಲ್ಲಿ ಶಾಲೆಯ ಬದಲು ಮನೆಯಲ್ಲೇ ಖಾಸಗಿ ಶಿಕ್ಷಕರೊಬ್ಬರ ಮೂಲಕ ಹಿಂದಿ, ಸಂಸ್ಕೃತ, ಇಂಗ್ಲಿಷ್, ಬಂಗಾಳಿ ಭಾಷೆಯ ಜ್ಞಾನ ಪಡೆದರು. “ನಾನೇಕೆ ಓದಬೇಕು. ನಾನು ಓದಲು ಹುಟ್ಟಿಲ್ಲ. ಜನರು ನನ್ನನ್ನು ಓದುತ್ತಾರೆ” ಎಂದು ಅವರು ಒಮ್ಮೆ ಹೇಳಿದ್ದರು. ಅವರು ಬಾಲ್ಯದಲ್ಲಿ ಹೇಳಿದ ಈ ಮಾತುಗಳು ಅವರ ಜೀವನದ ಕೊನೆಯ ಭಾಗದಲ್ಲಿ ನಿಜವಾಯಿತು.

**'ರಸಿಕೇಂದ್ರ'ದಿಂದ ಮೈಥಿಲಿ ಶರಣ್ ಗುಪ್ತರವರೆಗೆ ಪಯಣ**

ಅದು ಬ್ರಜ್ ಭಾಷಾ ಸಾಹಿತ್ಯದಲ್ಲಿ, ವಿಶೇಷವಾಗಿ ಕಾವ್ಯದಲ್ಲಿ ಪ್ರಾಬಲ್ಯ ಸಾಧಿಸಿದ ದಿನಗಳು. ಆಗ ಖಾರಿ ಬೋಲಿಯ ನಾಯಕ ಪಂಡಿತ್ ಮಹಾವೀರ ಪ್ರಸಾದ್ ದ್ವಿವೇದಿ ಹಿಂದಿ ಭಾಷೆಗೆ ಸಂಬಂಧಿಸಿದಂತೆ ದೇಶಾದ್ಯಂತ ಚಳವಳಿ ನಡೆಸುತ್ತಿದ್ದರು. ಮಹಾವೀರ ಪ್ರಸಾದ್ ದ್ವಿವೇದಿ ಅವರು ಝಾನ್ಸಿ ರೈಲ್ವೇಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅಲ್ಲಿಂದ ನಗ್ರಿಪ್ರಚಾರಣಿ ಸಭಾ ಪ್ರಕಟಿಸಿದ ಸರಸ್ವತಿ ಪತ್ರಿಕೆಯ ಸಂಪಾದನೆಯ ಜವಾಬ್ದಾರಿಯನ್ನೂ ಅವರು ಹೊತ್ತಿದ್ದರು. ಸರಸ್ವತಿ ಪತ್ರಿಕೆಯನ್ನು ಅಲಹಾಬಾದ್‌ನಿಂದ (ಈಗಿನ ಪ್ರಯಾಗ್‌ರಾಜ್) ಪ್ರಕಟಿಸಲಾಗುತ್ತಿತ್ತು, ಯಾವುದೇ ಬರಹಗಾರನಿಗೆ ಸರಸ್ವತಿಯಲ್ಲಿ ತನ್ನ ಸಾಹಿತ್ಯವು ಪ್ರಕಟವಾಗುವುದು ಗೌರವವಾಗಿತ್ತು. ಒಂದು ದಿನ ಮೈಥಿಲಿ ಶರಣ್ ಗುಪ್ತ ಧೈರ್ಯದಿಂದ ಮಹಾವೀರ ಪ್ರಸಾದ್ ಅವರನ್ನು ಭೇಟಿ ಮಾಡಲು ಹೋದರು, ಅಲ್ಲಿ ಇಬ್ಬರ ನಡುವೆ ಆಸಕ್ತಿದಾಯಕ ಸಂಭಾಷಣೆ ನಡೆಯಿತು. ಗುಪ್ತ ಹೇಳಿದರು - ನನ್ನ ಹೆಸರು ಮೈಥಿಲಿ ಶರಣ್ ಗುಪ್ತ, ನಾನು ಕವನ ಬರೆಯುತ್ತೇನೆ ಮತ್ತು ನೀವು ನನ್ನ ಕವನಗಳನ್ನು ಸರಸ್ವತಿಯಲ್ಲಿ ಪ್ರಕಟಿಸಬೇಕೆಂದು ನಾನು ಬಯಸುತ್ತೇನೆ. ಇದಕ್ಕೆ ಪ್ರತಿಕ್ರಿಯಿಸಿದ ಮಹಾವೀರ ಪ್ರಸಾದ್ ದ್ವಿವೇದಿ- ಅನೇಕ ಜನರು ತಮ್ಮ ಬರಹಗಳನ್ನು ಸರಸ್ವತಿ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಬಯಸುತ್ತಾರೆ. ಆದರೆ ಎಲ್ಲರಿಗೂ ಅವಕಾಶ ಸಿಗುವುದಿಲ್ಲ, ಅಲ್ಲದೇ ನೀವು ಬ್ರಜ್ ಭಾಷೆಯಲ್ಲಿ ಬರೆಯುತ್ತೀರಿ. ನಾವು ಖಾರಿ ಬೋಲಿಯಲ್ಲಿ ಮಾತ್ರ ಲೇಖನಗಳನ್ನು ಮುದ್ರಿಸುತ್ತೇವೆ

ಎಂದರು. ಇದಕ್ಕೆ ಮೈಥಿಲಿ ಶರಣ್ ಗುಪ್ತತ ಅವರು - ನನಗೆ ಪ್ರಕಟಿಸುವ ಭರವಸೆ ಸಿಕ್ಕರೆ, ನಾನು ಖಾರಿ ಭಾಷೆಯಲ್ಲಿಯೇ ಕವನ ಬರೆಯುತ್ತೇನೆ, ನನ್ನ ರಚನೆಗಳನ್ನು ರಸಿಕೇಂದ್ರ ಹೆಸರಿನಲ್ಲಿ ಕಳುಹಿಸುತ್ತೇನೆ ಎಂದರು. ಅದು ಪ್ರಕಟವಾಗಲು ಯೋಗ್ಯವಾಗಿದ್ದರೆ, ಖಂಡಿತವಾಗಿಯೂ ಪ್ರಕಟವಾಗುತ್ತದೆ. ಕವಿತೆಯನ್ನು ಯಾವುದೇ ಕಾವ್ಯನಾಮದ ಬದಲು ನಿಜವಾದ ಹೆಸರಿನಲ್ಲಿ ಕಳುಹಿಸಬೇಕು ಎಂದು ಮೈಥಿಲಿ ಶರಣ್ ಗುಪ್ತ ಅವರಿಗೆ ತಿಳಿಸಲಾಯಿತು. ಮಹಾವೀರ್ ಪ್ರಸಾದ್ ದ್ವಿವೇದಿಯವರು ಕೇಳಿದಾಗ, ಮೊದಲ ಬಾರಿಗೆ ಮೈಥಿಲಿ ಶರಣ್ ಗುಪ್ತ ಅವರು ಖಾರಿ ಬೋಲಿಯಲ್ಲಿ ಹೇಮಂತ ಎಂಬ ಶೀರ್ಷಿಕೆಯ ಕವನವನ್ನು ಬರೆದರು, ಅದನ್ನು ಮಹಾವೀರ ಪ್ರಸಾದ್ ದ್ವಿವೇದಿ ಅವರು ಕೆಲವು ಮಾರ್ಪಾಡುಗಳನ್ನು ಮಾಡಿ ಸರಸ್ವತಿಯಲ್ಲಿ ಪ್ರಕಟಿಸಿದರು. ಹೇಮಂತ ಪ್ರಕಟಣೆಯ ನಂತರ, ಅವರ ಸಾಹಿತ್ಯವು ಸರಸ್ವತಿಯಲ್ಲಿ ನಿಯಮಿತವಾಗಿ ಪ್ರಕಟವಾಯಿತು. ಹಿಂದಿಯ ಬೆಳವಣಿಗೆಯ ಉದ್ದೇಶಕ್ಕಾಗಿ ಅವರು ಸಲ್ಲಿಸಿದ ಸೇವೆಯಿಂದಾಗಿ ಅವರು ದದ್ದಾ ಎಂದು ಜನಪ್ರಿಯರಾದರು.

**ಹಿಂದಿ ಭಾಷೆಗೆ ದದ್ದಾ ಅವರ ಸಮರ್ಪಣಾ ಸೇವೆ**

1905 ಮತ್ತು 1925 ರ ನಡುವೆ ಮೈಥಿಲಿ ಶರಣ್ ಗುಪ್ತ ಅವರ ಕವನಗಳು ಸರಸ್ವತಿಯಲ್ಲಿ ಪ್ರಕಟವಾಗುತ್ತಲೇ ಇದ್ದವು. ಅವರ ಮೊದಲ ಕವನ, ಹೇಮಂತದಿಂದ ಜಯದ್ರಥ, ಭಾರತ ಭಾರತಿ ಮತ್ತು ಸಾಕೇತ್ ಎಲ್ಲಾ ಕವನಗಳು ಪುಸ್ತಕ ರೂಪದಲ್ಲಿ ಪ್ರಕಟವಾಗುವ ಮೊದಲು ಸರಸ್ವತಿಯಲ್ಲಿ ಪ್ರಕಟವಾದವು. ಮಹಾವೀರ ಪ್ರಸಾದ್ ಮತ್ತು ಸರಸ್ವತಿ ಪತ್ರಿಕೆಯೊಂದಿಗಿನ ಅವರ ಬಾಂಧವ್ಯದ ಬಗ್ಗೆ, ಗುಪ್ತ ಅವರು ಸಾಕೇತ್‌ಗೆ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ - ಮಹಾವೀರನ ಪ್ರಸಾದರು ಸಿಗದಿದ್ದರೆ, ತುಳಸಿದಾಸರು ಸಹ ಮಾನಸ-ನಾದವನ್ನು ಹೇಗೆ ಮಾಡುತ್ತಿದ್ದರು?. ಮೈಥಿಲಿ ಶರಣ್ ಗುಪ್ತ ಅವರ ಎಲ್ಲಾ ಸಂಯೋಜನೆಗಳು ಕಾಲಾತೀತವಾಗಿದ್ದರೂ, 1910 ರಲ್ಲಿ ಬಂದ ರಂಗ್ ಮೇ ಭಾಂಗ್ ಕವಿತೆಯಲ್ಲಿ ಶಕ್ತಿ ಮತ್ತು ಉತ್ಸಾಹ ತುಂಬಿದೆ. 1921 ರಲ್ಲಿ, ಮಹಾವೀರ್ ಪ್ರಸಾದ್ ದ್ವಿವೇದಿ ಸಂಪಾದಕ ಹುದ್ದೆಗೆ ರಾಜೀನಾಮೆ ನೀಡಿದರು, ಮೈಥಿಲಿ ಶರಣ್ ಗುಪ್ತ ಅವರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಬಹಿರಂಗವಾಗಿ ಬರೆಯಲು ಪ್ರಾರಂಭಿಸಿದರು.

**ಇವತ್ತಿನ ಚಿತ್ತೋರಿನ ಹೆಸರು ಕೇಳಿದರೆ ಮನಸ್ಸಿನಲ್ಲಿ ಒಂದಿಷ್ಟು ಮಾಯಾಲೋಕ ತೆರೆಯುತ್ತದೆ.**

ರಂಗ್ ಮೇ ಭಾಂಗ್ ನಂತರ ಜಯದ್ರಥ-ವಧ್ ಬಂದಿತು. 1905 ರಲ್ಲಿ ಬಂಗಾಳದ ವಿಭಜನೆಯ ಬಗ್ಗೆ ಅವರು ಜಯದ್ರಥ-ವಧ್ ಮೂಲಕ ತಮ್ಮ ಅಳಲನ್ನು ವ್ಯಕ್ತಪಡಿಸಿದರು.

**ಓದುಗರೇ! ಮೊಧಲು ಎಲ್ಲೆಲ್ಲೂ 'ಜೈ ಜಾನಕಿ ಜೀವನ' ಮೊಳಗಲಿ. ನಂತರ ಪೂರ್ವಜರ ನಮ್ರತೆಯ ಬೋಧನೆಗಳು ಅಲೆಗಳಾಗಿ ಹರಿಯಲಿ. ಶೋಕ, ದುಃಖಗಳು ಬಂದಾಗಲೆಲ್ಲಾ ತಾಳ್ಮೆಯಿಂದ ಸಹಿಸಿಕೊಳ್ಳಿ. ಯಶಸ್ಸು ಏಕೆ ಬರುವುದಿಲ್ಲ? ಕರ್ತವ್ಯದ ಹಾದಿಯಲ್ಲಿ ದೃಢವಾಗಿರಿ. ಹಕ್ಕನ್ನು ಕಳೆದುಕೊಳ್ಳುವುದು,ಮತ್ತು ಅದನ್ನು ಸದ್ದಿಲ್ಲದೆ ಒಪ್ಪಿಕೊಳ್ಳುವುದು ದೊಡ್ಡ ದುಷ್ಕೃತ್ಯ. ದುಷ್ಕೃತ್ಯಕ್ಕೆ ಸಹೋದರರನ್ನು ಶಿಕ್ಷಿಸುವುದೂ ಧರ್ಮವೇ.**

ಜಯದ್ರಥ-ವಧ್ ನಂತರ ಮೈಥಿಲಿ ಶರಣ್ ಗುಪ್ತ ಅವರು ಜನಪ್ರಿಯತೆಯ ಉತ್ತುಂಗದಲ್ಲಿದ್ದರು, ಆದರೆ 1914 ರಲ್ಲಿ ಭಾರತ ಭಾರತಿ ಅವರನ್ನು ದೇಶದ ಅಗ್ರ ಕವಿಗಳಲ್ಲಿ ಸ್ಥಾನ ಪಡೆಯುವಂತೆ ಮಾಡಿತು. ಭಾರತ ಭಾರತಿಯ ಜನಪ್ರಿಯತೆ ಎಷ್ಟಿತ್ತೆಂದರೆ ಎಲ್ಲಾ ಪ್ರತಿಗಳು ತಕ್ಷಣವೇ ಮಾರಾಟವಾದವು ಮತ್ತು 2 ತಿಂಗಳೊಳಗೆ ಎರಡನೇ ಆವೃತ್ತಿಯನ್ನು ಪ್ರಕಟಿಸಬೇಕಾಯಿತು. ರಾಷ್ಟ್ರೀಯ ಚಳುವಳಿಗಳು, ಶಿಕ್ಷಣ ಸಂಸ್ಥೆಗಳು ಮತ್ತು ಬೆಳಗಿನ ಪ್ರಾರ್ಥನೆಗಳಲ್ಲಿ ಭಾರತ ಭಾರತಿಯನ್ನು ಹಾಡಲಾಯಿತು. ಹಳ್ಳಿಗಳ ಅನಕ್ಷರಸ್ಥರೂ ಅದನ್ನು ಕೇಳಿ ಬಾಯಿಪಾಠ ಮಾಡಿಕೊಂಡಿದ್ದರು. ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳಿಯ ನಂತರ, ನಾಗ್ಪುರದಲ್ಲಿ ಧ್ವಜ ಸತ್ಯಾಗ್ರಹ ನಡೆದಾಗ, ಎಲ್ಲಾ ಸತ್ಯಾಗ್ರಹಿಗಳು ಭಾರತ ಭಾರತಿ ಗೀತೆಗಳನ್ನು ಹಾಡುತ್ತಾ ಮೆರವಣಿಗೆಯಲ್ಲಿ ಸತ್ಯಾಗ್ರಹ ಮಾಡಿದರು. ಬ್ರಿಟಿಷ್ ಸರ್ಕಾರ ಭಾರತ ಭಾರತಿಯನ್ನು ನಿಷೇಧಿಸಿತು ಮತ್ತು ಎಲ್ಲಾ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು. ಭಾರತ ಭಾರತಿ ಇಂದಿಗೂ ಸಾಹಿತ್ಯ ಲೋಕದಲ್ಲಿ ಸಾಂಸ್ಕೃತಿಕ ಪುನರುಜ್ಜೀವನದ ಐತಿಹಾಸಿಕ ದಾಖಲೆಯಾಗಿದೆ.

**मानस भवन में आर्यजन जिसकी उतारें आरतीं। भगवान्! भारतवर्ष में गूंजे हमारी भारती।।**
**हो भद्रभावोद्भाविनी वह भारती हे भवगते। सीतापते! सीतापते!! गीतामते! गीतामते!!**

1914 ರಲ್ಲಿ, ಶಕುಂತಲಾ ಮತ್ತು ಎರಡು ವರ್ಷಗಳ ನಂತರ ಕಿಸಾನ್ ಎಂಬ ಕವನ ಸಂಕಲನವನ್ನು ಪ್ರಕಟಿಸಲಾಯಿತು. ಭಾರತದ ರೈತರ ಸಂಕಷ್ಟದ ಚಿತ್ರಣವನ್ನು ಇದರಲ್ಲಿ ನೈಜವಾಗಿ ಚಿತ್ರಿಸಲಾಗಿದೆ. 1933 ರಲ್ಲಿ ಅವರು ದ್ವಾಪರ್ ಮತ್ತು ಸಿದ್ಧರಾಜ್ ಮುಂತಾದ ಪೌರಾಣಿಕ ಮತ್ತು ಐತಿಹಾಸಿಕ ಕವನ ಸಂಕಲನಗಳನ್ನು ಪ್ರಕಟಿಸಿದರು.

ಅವರು ಸುಮಾರು 10 ಸಾವಿರ ಸಾಲುಗಳ ಕಥೆಗಳು, ಕಾದಂಬರಿಗಳು, ಕವನಗಳು, ಪ್ರಬಂಧಗಳು, ಆತ್ಮಚರಿತ್ರೆಯ ಆಯ್ದ ಭಾಗಗಳು ಮತ್ತು ಮಹಾಕಾವ್ಯಗಳನ್ನು ಬರೆದಿದ್ದಾರೆ. ಈ ಮಧ್ಯೆ, ಅವರು 50 ವರ್ಷಗಳನ್ನು ಪೂರೈಸಿದರು. ಮೈಥಿಲಿ ಶರಣ್ ಗುಪ್ತ ಅವರ 50ನೇ ಹುಟ್ಟುಹಬ್ಬವನ್ನು ದೇಶಾದ್ಯಂತ ಬನಾರಸ್ ನಿಂದ ಚಿರ್ಗಾಂವ್ ವರೆಗೆ ಸಾಹಿತ್ಯ ಪ್ರೇಮಿಗಳು ಅದ್ದೂರಿಯಾಗಿ ಆಚರಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮೈಥಿಲಿ ಶರಣ್ ಗುಪ್ತ ಅವರಿಗೆ ರಾಷ್ಟ್ರಕವಿ ಬಿರುದು ನೀಡಿ ಗೌರವಿಸಿದರು. ಅಂದಿನಿಂದ ಮೈಥಿಲಿ ಶರಣ್ ಗುಪ್ತ ಅವರನ್ನು ರಾಷ್ಟ್ರಕವಿಯೆಂದೇ ಗುರುತಿಸಲಾಗಿದೆ. 1937 ರಲ್ಲಿ ಹಿಂದಿ ಸಾಹಿತ್ಯ ಸಮ್ಮೇಳನದಲ್ಲಿ ಸಾಕೇತ್‌ಗಾಗಿ ಅವರಿಗೆ ಹೆಚ್ಚು ಗೌರವದ ಹಿಂದಿ ಪ್ರಶಸ್ತಿಯನ್ನು ನೀಡಲಾಯಿತು. 1954 ರಲ್ಲಿ ಅವರಿಗೆ ಪದ್ಮಭೂಷಣವನ್ನು ನೀಡಲಾಯಿತು. ಕೊರೊನಾ ಅವಧಿಯಲ್ಲಿ ಲಭ್ಯವಿರುವ ಅವಕಾಶಗಳ ಬಗ್ಗೆ ರಾಜ್ಯಸಭೆಯಲ್ಲಿ ಮಾತನಾಡುವಾಗ ಪ್ರಧಾನಿ ನರೇಂದ್ರ ಮೋದಿಯವರು ಮೈಥಿಲಿ ಶರಣ್ ಗುಪ್ತ ಅವರ ಕವನವನ್ನು ಉಲ್ಲೇಖಿಸಿದ್ದರು. "ನಾನು ಅವಕಾಶಗಳ ಬಗ್ಗೆ ಚರ್ಚಿಸುವಾಗ, ಮೈಥಿಲಿ ಶರಣ್ ಗುಪ್ತ ಅವರ ಕವಿತೆಯನ್ನು ಓದಲು ಬಯಸುತ್ತೇನೆ. ಅವರು ಹೇಳಿದ್ದರು ಅವಕಾಶವು ನಿಮಗಾಗಿ ಕಾಯುತ್ತಿದೆ, ಆದರೂ ನೀವು ಮೌನವಾಗಿದ್ದೀರಿ, ನಿಮ್ಮ ಕಾರ್ಯಕ್ಷೇತ್ರವು ದೊಡ್ಡದಾಗಿದೆ, ಕ್ಷಣ ಕ್ಷಣವೂ ಅಮೂಲ್ಯವಾದುದು, ಓ ಭಾರತವೇ, ಎದ್ದೇಳು, ಕಣ್ಣು ತೆರೆ, ಇದನ್ನು ಮೈಥಿಲಿ ಶರಣ್ ಗುಪ್ತ ಅವರು ಬರೆದಿದ್ದಾರೆ. ಆದರೆ, 21ನೇ ಶತಮಾನದ ಆರಂಭದಲ್ಲಿ ಅವರು ಬರೆದಿದ್ದರೆ ಏನು ಬರೆಯುತ್ತಿದ್ದರು? ಅವರು ಹೀಗೆ ಬರೆಯತ್ತಿದ್ದರು ಎಂದು ನಾನು ಊಹಿಸುತ್ತೇನೆ – "ಅವಕಾಶವು ನಿಮಗಾಗಿ ಕಾಯುತ್ತಿದೆ, ನೀವು ಆತ್ಮವಿಶ್ವಾಸದಿಂದ ತುಂಬಿದ್ದೀರಿ, ಪ್ರತಿ ಅಡಚಣೆಯನ್ನು, ಪ್ರತಿ ನಿರ್ಬಂಧವನ್ನು ಮುರಿಯಿರಿ, ಓ ಭಾರತವೇ, ಸ್ವಾವಲಂಬನೆಯ ಹಾದಿಯಲ್ಲಿ ಮುಂದೆ ಸಾಗು." ■



## ಜಮ್ಮು - ಕಾಶ್ಮೀರ ಮತ್ತು ಲಡಾಖ್

# ಅಭಿವೃದ್ಧಿಯ ಹೊಸ ಯುಗ

**ಮೂರು ವರ್ಷಗಳ ಹಿಂದೆ, ಆಗಸ್ಟ್ 5 ರಂದು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರವು ಅಭಿವೃದ್ಧಿಯ ಓಟದಲ್ಲಿ ದಶಕಗಳಿಂದ ಹಿಂದುಳಿದಿದ್ದ ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್‌ನಿಂದ 370 ನೇ ವಿಧಿಯನ್ನು ರದ್ದುಪಡಿಸಿದಾಗ 'ಏಕ್ ಭಾರತ, ಶ್ರೇಷ್ಠ ಭಾರತ' ಪರಿಕಲ್ಪನೆಯನ್ನು ಮತ್ತಷ್ಟು ಬಲಪಡಿಸಲಾಯಿತು. ಕಳೆದ ಮೂರು ವರ್ಷಗಳಲ್ಲಿ, ಈ ಪ್ರದೇಶವು ದೇಶದ ಇತರ ಭಾಗಗಳೊಂದಿಗೆ ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ಪ್ರಗತಿ ಸಾಧಿಸಿದೆ ಮತ್ತು ರಾಷ್ಟ್ರದಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್‌ನಲ್ಲಿ ಅಭಿವೃದ್ಧಿಯ ಹೊಸ ಅರುಣೋದಯವು ಗೋಚರಿಸುತ್ತಿದೆ.**

ಜಮ್ಮು ಮತ್ತು ಕಾಶ್ಮೀರದಲ್ಲಿ ಅಭಿವೃದ್ಧಿಯ ಹೊಸ ಯುಗ ಪ್ರಾರಂಭವಾಗಿದೆ ಮತ್ತು ಅದು ಅಭಿವೃದ್ಧಿ-ಶಾಂತಿಯ ಪಥದಲ್ಲಿ ವೇಗವಾಗಿ ಸಾಗುತ್ತಿದೆ. 370 ಮತ್ತು 35ಎ ವಿಧಿಗಳನ್ನು ರದ್ದುಗೊಳಿಸಿದ ನಂತರ, ಈ ಪ್ರದೇಶದಲ್ಲಿ ಉದ್ಯೋಗ ಮತ್ತು ಸಮೃದ್ಧಿಗೆ ಹೊಸ ಉತ್ತೇಜನ ದೊರೆಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಮೂರು ವರ್ಷಗಳ ಹಿಂದೆ, ಆಗಸ್ಟ್ 5 ರಿಂದ, ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್‌ನಲ್ಲಿ ಅಭಿವೃದ್ಧಿಯ ಪರಿಸರ ವ್ಯವಸ್ಥೆಗೆ ಉತ್ತೇಜನ ನೀಡಲಾಗಿದೆ ಮತ್ತು ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ 7 ಹೊಸ ವೈದ್ಯಕೀಯ ಕಾಲೇಜುಗಳು ಮತ್ತು 5 ಹೊಸ ನರ್ಸಿಂಗ್ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ ಮತ್ತು 500 ರಷ್ಟಿದ್ದ ವೈದ್ಯಕೀಯ ಸೀಟುಗಳ ಸಂಖ್ಯೆ ದ್ವಿಗುಣಗೊಂಡಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಹಲವಾರು ಜಲವಿದ್ಯುತ್ ಯೋಜನೆಗಳು ಕಾರ್ಯಾರಂಭ ಮಾಡಿವೆ. ಇದು ಕೈಗಾರಿಕೆಗಳಿಗೆ ಪ್ರಯೋಜನವಾಗುವುದರ ಜೊತೆಗೆ ಆದಾಯವನ್ನು ಹೆಚ್ಚಿಸುತ್ತದೆ. ಕೃಷಿ ಅಭಿವೃದ್ಧಿಯಿಂದ ಇಲ್ಲಿನ ಜನರ ಆದಾಯ ಹೆಚ್ಚಲಿದ್ದು, ಆರ್ಥಿಕತೆಗೆ ಉತ್ತೇಜನ ಸಿಗಲಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಯೋಜನೆಯನ್ನು ಜಾರಿಗೊಳಿಸಲಾಗಿದೆ, ಹಾಗೆಯೇ ಉಜ್ವಲಾ, ನೇರ ಲಾಭ ವರ್ಗಾವಣೆ (ಡಿಬಿಟಿ), ಸೌಭಾಗ್ಯ ಮತ್ತು ಇತರ ಹಲವು ಯೋಜನೆಗಳನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ 100 ಪ್ರತಿಶತದಷ್ಟು ಜಾರಿಗೊಳಿಸಲಾಗಿದೆ. 2024 ರ ವೇಳೆಗೆ ಪ್ರತಿ ಮನೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು

ಪ್ರಧಾನಿ ಮೋದಿ ರೂಪಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಆಗಸ್ಟ್ 15, 2022 ರೊಳಗೆ ಈ ಗುರಿಯನ್ನು ಸಾಧಿಸಲಿದೆ. ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಯೋಜನೆಯ ಪ್ರಯೋಜನವನ್ನು ಪ್ರತಿಯೊಬ್ಬ ವ್ಯಕ್ತಿಯೂ ಪಡೆದಿರುವ ಭಾರತದ ಏಕೈಕ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವೆಂದರೆ ಜಮ್ಮು ಮತ್ತು ಕಾಶ್ಮೀರವಾಗಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ನಗರ ಮತ್ತು ಗ್ರಾಮೀಣ ಜನರಿಗೆ ಮನೆಗಳನ್ನು ನೀಡಲಾಗುತ್ತಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ 370 ನೇ ವಿಧಿಯನ್ನು ರದ್ದುಪಡಿಸಿದ ನಂತರ ಏನು ಬದಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು, ಕಳೆದ 70 ವರ್ಷಗಳಲ್ಲಿದ್ದ ಅಭಿವೃದ್ಧಿಯ ವೇಗ ಮತ್ತು ಜನರ ಜೀವನ ಮಟ್ಟವನ್ನು ನೋಡಬೇಕು. 70 ವರ್ಷಗಳಲ್ಲಿ, ಜಮ್ಮು ಮತ್ತು ಕಾಶ್ಮೀರದ ಸುಮಾರು 2,20,000 ಕುಟುಂಬಗಳು ಮನೆ, ಶೌಚಾಲಯ, ವಿದ್ಯುತ್ ಮತ್ತು ನೀರಿನಂತಹ ಮೂಲಭೂತ ಸೌಲಭ್ಯಗಳನ್ನು ಸಹ ಪಡೆಯಲು ಸಾಧ್ಯವಾಗಿರಲಿಲ್ಲ, ಆದರೆ ಪ್ರಧಾನಿ ನರೇಂದ್ರ ಮೋದಿ 2-3 ವರ್ಷಗಳಲ್ಲಿ ಜನರಿಗೆ ಈ ಎಲ್ಲ ಅಗತ್ಯ ಸೌಲಭ್ಯಗಳನ್ನು ಒದಗಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಪ್ರತಿ ಹಳ್ಳಿಗೂ ತಲುಪಿದೆ. ಗುಡ್ಡಗಾಡು ಜನರಿಗೆ ಯಾವತ್ತೂ ಮೀಸಲಾತಿಯ ಲಾಭ ಸಿಗುತ್ತಿರಲಿಲ್ಲ, ಈಗ ಅದು ಸಿಗುತ್ತಿದೆ. ಜಮ್ಮು ಮತ್ತು ಕಾಶ್ಮೀರದ ಪ್ರತಿ ಮನೆಗೂ ವಿದ್ಯುತ್ ತಲುಪಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕೈಗಾರಿಕಾ ಅಭಿವೃದ್ಧಿಯ ಯೋಜನೆಯನ್ನು ಸಿದ್ಧಪಡಿಸುವಾಗ, ಕಡಿಮೆ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರು ಹೆಚ್ಚಿನ ಪ್ರಯೋಜನಗಳನ್ನು ಪಡೆಯುವಂತೆ ಕಾಳಜಿ ವಹಿಸಲಾಗಿದೆ, ಇದರಿಂದ ಜಮ್ಮು ಮತ್ತು ಕಾಶ್ಮೀರದ ಸರ್ವತೋಮುಖ ಮತ್ತು ಸರ್ವಾಂಗೀಣ ಅಭಿವೃದ್ಧಿಯಾಗುತ್ತದೆ. ಜಮ್ಮು ಮತ್ತು ಕಾಶ್ಮೀರ ಈಗ ಕೇಂದ್ರಾಡಳಿತ ಸ್ಥಾನಮಾನವನ್ನೂ ಸಹ ಹೊಂದಿದೆ, ಇದು ಸಾಕಷ್ಟು ಮಾನವಶಕ್ತಿಯ ಲಭ್ಯತೆಯನ್ನು ಖಚಿತಪಡಿಸುತ್ತದೆ. ಅಲ್ಲದೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಉರ್ದು ಮತ್ತು ಡೋಗ್ರಿ ಜತೆಗೆ ಅಧಿಕೃತ ಭಾಷಾ ಸ್ಥಾನಮಾನ ನೀಡಲಾಗಿದ್ದು, ಇದರಿಂದ ಕೆಲಸ ಸುಲಭವಾಗಲಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರು ಹಂತದ ಪಂಚಾಯತ್ ವ್ಯವಸ್ಥೆಗೆ ಚುನಾವಣೆ ಶಾಂತಿಯುತವಾಗಿ ನಡೆದಿದೆ. ಇಂದು ಪ್ರತಿಯೊಬ್ಬರೂ ತಮ್ಮ ಹಕ್ಕುಗಳನ್ನು ಚಲಾಯಿಸುತ್ತಿದ್ದಾರೆ. ಈ ಚುನಾವಣೆಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಅಭಿವೃದ್ಧಿಯ ಹೊಸ ಆರಂಭವನ್ನು ಸೂಚಿಸಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸುಧಾರಿತ ಶಾಂತಿ ಮತ್ತು ಭದ್ರತೆಯಿಂದಾಗಿ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಪ್ರವಾಸೋದ್ಯಮವು ಸೂಕ್ತ ಸ್ಥಾನವನ್ನು ಪಡೆಯುತ್ತಿದೆ. ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಗುರುತಿಸಲಾಗಿರುವ ಸ್ಥಳಗಳು, ಉನ್ನತ ಪ್ರವಾಸೋದ್ಯಮ ತಾಣಗಳಾಗಬಹುದು. ಹಿಮಾಲಯದ 137 ಪರ್ವತ ಶಿಖರಗಳನ್ನು ವಿದೇಶಿ ಪ್ರವಾಸಿಗರಿಗೆ ತೆರೆಯಲಾಗಿದೆ, ಅವುಗಳಲ್ಲಿ 15 ಶಿಖರಗಳು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ಗೆ ಸೇರಿವೆ. ಲಡಾಖ್‌ನಲ್ಲಿ ಬೌದ್ಧ ಅಧ್ಯಯನ ಕೇಂದ್ರದೊಂದಿಗೆ ಮೊದಲ ಕೇಂದ್ರೀಯ ವಿಶ್ವವಿದ್ಯಾಲಯದ

## ಹಣಕಾಸು ನಿರ್ವಹಣೆಯಲ್ಲಿ ಅಭೂತಪೂರ್ವ ಪಾರದರ್ಶಕತೆ

**ಎಲ್ಲ ಕಾಮಗಾರಿಗಳಿಗೂ ಇ-ಟೆಂಡರ್ ಕಡ್ಡಾಯ**

**ಜಿಯೋ ಟ್ಯಾಗಿಂಗ್ ಮತ್ತು ಶೇ.100 ಪ್ರಮಾಣೀಕರಣ**

ಸಾರ್ವಜನಿಕ ಭಾಗವಹಿಸುವಿಕೆಗಾಗಿ ಸಬಲೀಕರಣ ಪೋರ್ಟಲ್ ಜನರ ಯೋಜನೆಯಾಗಿದ್ದು ಇದರಲ್ಲಿ ನಾಗರಿಕರು ಯಾವುದೇ ಚಾಲ್ತಿಯಲ್ಲಿರುವ ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆಯಬಹುದು. ಸದ್ಯ ಸುಮಾರು 39 ಸಾವಿರ ಯೋಜನೆಗಳು ಇದರಲ್ಲಿ ಲಭ್ಯವಿವೆ.

## ಉತ್ತಮ ಆಡಳಿತದ ಹೊಸ ಅಧ್ಯಾಯ:

ಜಮ್ಮು ಮತ್ತು ಕಾಶ್ಮೀರವು ಉತ್ತಮ ಆಡಳಿತ ಸೂಚ್ಯಂಕದಲ್ಲಿ ದೇಶಕ್ಕೆ ಮಾನದಂಡವಾಯಿತು

**50276**
ಯೋಜನೆಗಳು 2021-22ರಲ್ಲಿ ಪೂರ್ಣಗೊಂಡಿದ್ದರೆ, 2019-20ರಲ್ಲಿ 12367 ಯೋಜನೆಗಳು ಪೂರ್ಣಗೊಂಡಿವೆ.

## ಇಂಧನ ಕ್ಷೇತ್ರದಲ್ಲಿ ಭಾರೀ ಜಿಗಿತ

**3500**
ಮೆಗಾವ್ಯಾಟ್ ವಿದ್ಯುತ್ ಇದುವರೆಗೆ ಉತ್ಪಾದನೆಯಾಗಿದ್ದು, ಮುಂದಿನ ಮೂರು ವರ್ಷಗಳಲ್ಲಿ ದ್ವಿಗುಣವಾಗಲಿದೆ ಮತ್ತು ಮುಂದಿನ 7 ವರ್ಷಗಳಲ್ಲಿ ಇದನ್ನು ಮೂರು ಪಟ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ.



2019-20ರಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 1325 ಕಿಮೀ ರಸ್ತೆಗಳನ್ನು ನಿರ್ಮಿಸಲಾಗಿದ್ದು, ಇದು 2021-22ರಲ್ಲಿ 3284 ಕಿಮೀಗೆ ಏರಿಕೆಯಾಗಿದೆ. ಈ ಯೋಜನೆಯಡಿ ದೂರದ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು 125 ಸೇತುವೆಗಳನ್ನು ನಿರ್ಮಿಸಲಾಗುವುದು.

2019-20ರಲ್ಲಿ 84 ಯೋಜನೆಗಳಿಗೆ ನಬಾರ್ಡ್ ಅನುಮೋದನೆ ನೀಡಿದ್ದರೆ, 2021-22ರಲ್ಲಿ 400 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಏಕಗವಾಕ್ಷಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು 200 ಕ್ಕೂ ಹೆಚ್ಚು ಸೇವೆಗಳನ್ನು ಆನ್‌ಲೈನ್‌ನಲ್ಲಿ ಒದಗಿಸಲಾಗುತ್ತಿದೆ.

## ಕೃಷಿ ಮತ್ತು ರೈತರ ಏಳಿಗೆ

- ಕೃಷಿಯಿಂದ ಬರುವ ಮಾಸಿಕ ಆದಾಯದ ವಿಷಯದಲ್ಲಿ ಜಮ್ಮು ಮತ್ತು ಕಾಶ್ಮೀರವು ಮೂರನೇ ಸ್ಥಾನದಲ್ಲಿದೆ, ಹಾಗೆಯೇ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ, ಇದು 5ನೇ ಅತ್ಯುತ್ತಮ ಕಾರ್ಯಕ್ಷಮತೆಯ ರಾಜ್ಯ-ಕೇಂದ್ರಾಡಳಿತ ಪ್ರದೇಶವಾಗಿದೆ.
- ಕಾಶ್ಮೀರದ ಕೇಸರಿಯು ಜಿಐ ಟ್ಯಾಗ್ ಅನ್ನು ಪಡೆದುಕೊಂಡಿದೆ ಮತ್ತು ಉತ್ಪಾದನೆಯ ಹೆಚ್ಚಳವು ಕೇಸರಿ ಬೆಳೆಗಾರರ ಆದಾಯವನ್ನು ದ್ವಿಗುಣಗೊಳಿಸಿದೆ. ಕಿಸಾನ್ ಕ್ರೆಡಿಟ್ ಕಾರ್ಡ್, ಪಿಎಂ ಕಿಸಾನ್ ಯೋಜನೆಯ ಪ್ರಯೋಜನಗಳ ವ್ಯಾಪ್ತಿಯು ಹೆಚ್ಚಾಗಿದೆ. 4219 ಪಂಚಾಯಿತ್‌ಗಳಿಗೆ ಭತ್ತ ಒಕ್ಕಣೆ ಯಂತ್ರವನ್ನು ಉಚಿತವಾಗಿ ನೀಡಲಾಗಿದೆ. ಇತರ ಸ್ಥಳೀಯ ಕೃಷಿ ಉತ್ಪನ್ನಗಳನ್ನು ಜಾಗತಿಕವಾಗಿ ಉತ್ತೇಜಿಸಲಾಗುತ್ತಿದೆ.

## ಆರೋಗ್ಯ ಕ್ಷೇತ್ರದಲ್ಲಿ ಸಮೃದ್ಧಿಯತ್ತ

7177 ಕೋಟಿ ರೂ.ವೆಚ್ಚದಲ್ಲಿ 2 ಹೊಸ ಏಮ್ಸ್, 10 ಹೊಸ ನರ್ಸಿಂಗ್ ಕಾಲೇಜುಗಳು, 2 ರಾಜ್ಯ ಕ್ಯಾನ್ಸರ್ ಸಂಸ್ಥೆಗಳು, 7 ಹೊಸ ವೈದ್ಯಕೀಯ ಕಾಲೇಜುಗಳು, 5 ನರ್ಸಿಂಗ್ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ ಮತ್ತು 274 ಇತರ ಯೋಜನೆಗಳನ್ನು ಬಂಡವಾಳ ವೆಚ್ಚದ ಅಡಿಯಲ್ಲಿ ತರಲಾಗಿದೆ.

ಜಿಲ್ಲಾ ಮಟ್ಟದಲ್ಲಿ 881 ಕೋಟಿ ರೂ. ವೆಚ್ಚದಲ್ಲಿ ಆರೋಗ್ಯ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದ್ದು, ಒಟ್ಟು 140 ಯೋಜನೆಗಳಲ್ಲಿ 132 ಪೂರ್ಣಗೊಂಡಿದ್ದು, ಉಳಿದವು 2022-23ರಲ್ಲಿ ಪೂರ್ಣಗೊಳ್ಳಲಿವೆ.

- ಆರೋಗ್ಯ, ಆಯುಷ್‌ನಲ್ಲಿ ಹೂಡಿಕೆ ನೀತಿಯನ್ನು ಅನುಮೋದಿಸಲಾಗಿದೆ ಮತ್ತು ಮಾದಕ ವಸ್ತು ವ್ಯಸನಮುಕ್ತ ನೀತಿಯನ್ನು ಸಹ ಅನುಮೋದಿಸಲಾಗಿದೆ.

- 2020 ರಲ್ಲಿದ್ದ 24 ಆಮ್ಲಜನಕ ಘಟಕಗಳ ಸಂಖ್ಯೆಯು ಈಗ 173 ಕ್ಕೆ ಏರಿದೆ. ಮೊದಲು 14916 ಎಲ್‌ಪಿಎಂ ಇದ್ದ ಸಾಮರ್ಥ್ಯವು ಈಗ 1,34,916 ಎಲ್‌ಪಿಎಂ ಆಗಿದೆ.
- ಕೋವಿಡ್ ಬಾಧಿತವಾದ 418 ಪಿಂಚಣಿ ಮತ್ತು 414 ವಿದ್ಯಾರ್ಥಿವೇತನ ಪ್ರಕರಣಗಳಲ್ಲಿ ಪಿಎಂ ಕೇರ್ಸ್ ನಿಧಿಯಿಂದ ಹಣ ಮಂಜೂರು ಮಾಡಲಾಗಿದೆ.
- ಕೋವಿಡ್ ಸೋಂಕಿನಿಂದಾಗಿ ಆದಾಯ ತರುವ ವ್ಯಕ್ತಿಯನ್ನು ಕಳೆದುಕೊಂಡ ಕುಟುಂಬಕ್ಕೆ ವಿಶೇಷ ಸಹಾಯ ಯೋಜನೆ.

## ಶಿಕ್ಷಣ ಕ್ಷೇತ್ರದಲ್ಲಿ ಪರಿಣಾಮಕಾರಿ ಸಾಧನೆಗಳು

| 600 | 59 | 38000 |
|---|---|---|
| ಕ್ಕೂ ಹೆಚ್ಚು ನಿರ್ಮಾಣ ಕಾಮಗಾರಿಗಳು ಸಮಗ್ರ ಶಿಕ್ಷಾ ಅಡಿಯಲ್ಲಿ ಪೂರ್ಣಗೊಂಡಿವೆ | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಮತ್ತು 23 ಹಾಸ್ಟೆಲ್‌ಗಳು | ಶಿಕ್ಷಕರನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಯಂಗೊಳಿಸಲಾಗಿದೆ. |

12 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಮೊದಲ ಬಾರಿಗೆ ಆರೋಗ್ಯ ಕಾರ್ಡ್ ವಿತರಿಸಲಾಗಿದೆ. ವರ್ಗಾವಣೆ-ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕ ಮತ್ತು ಆನ್‌ಲೈನ್ ಮಾಡಲಾಗಿದೆ.

- 4000 ಶಾಲೆಗಳಲ್ಲಿ ಸೌರಶಕ್ತಿ ಅಳವಡಿಸಲಾಗಿದೆ. ಮಾರ್ಚ್ 2023 ರೊಳಗೆ 500 ಶಾಲೆಗಳಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು. 6 ಏಕಲವ್ಯ ಮಾದರಿ ವಸತಿ ಶಾಲೆಗಳು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 200 ಸ್ಮಾರ್ಟ್ ಶಾಲೆಗಳ ಸ್ಥಾಪನೆ.
- ಐಐಟಿ-ಐಐಎಂಗಳನ್ನು ದಾಖಲೆ ಸಮಯದಲ್ಲಿ ಸ್ಥಾಪಿಸಲಾಗಿದೆ. ಮೊದಲ ಬಾರಿಗೆ, 50 ಹೊಸ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ, ಅದರಲ್ಲಿ ಒಂದು ವರ್ಷದಲ್ಲಿ 25 ಸಾವಿರ ಹೆಚ್ಚುವರಿ ಸೀಟುಗಳನ್ನು ಸೇರಿಸಲಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗಿದೆ.



## ಮಹಿಳೆಯರಿಗೆ ಸಮಾನ ಹಕ್ಕುಗಳು ಮತ್ತು ಅವಕಾಶಗಳು



- 60 ಸಾವಿರ ಸ್ವಸಹಾಯ ಗುಂಪುಗಳ 5 ಲಕ್ಷಕ್ಕೂ ಹೆಚ್ಚು ಮಹಿಳೆಯರು ಪ್ರಯೋಜನ ಪಡೆದಿದ್ದಾರೆ.
- 'ಹೌಸ್ಲಾ' ಉಪಕ್ರಮವು ಮಹಿಳಾ ಉದ್ಯಮಿಗಳಿಗೆ ತಮಗಾಗಿ ಒಂದು ನೆಲೆ ಕಂಡುಕೊಳ್ಳಲು ಅವಕಾಶ ನೀಡುತ್ತದೆ. ಮೊದಲ ತಂಡಕ್ಕೆ 1.58 ಕೋಟಿ ರೂಪಾಯಿ ಸಾಲ ನೀಡುವ ಪ್ರಕ್ರಿಯೆ ನಡೆಯುತ್ತಿದೆ.
- ಇದು ಹಣಕಾಸಿನ ನೆರವು, ಬ್ಯಾಂಕ್‌ಗಳೊಂದಿಗೆ ಸಂಪರ್ಕ ಕಲ್ಪಿಸುವುದು, ನೀತಿ ಪ್ರೋತ್ಸಾಹಗಳು, ಯುವ ಅಭಿಯಾನ ಅಡಿಯಲ್ಲಿ ನೆರವು, ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳಿಗೆ ಸಂಪರ್ಕ ಕಲ್ಪಿಸುವುದು ಇತ್ಯಾದಿಗಳನ್ನು ಒಳಗೊಂಡಿದೆ.
- ಡಿಜಿಪೇ ಸಖಿ, ಕೃಷಿ ಸಖಿ, ಪಶು ಸಖಿ ಮತ್ತು ಉಮೀದ್ ಮಹಿಳಾ ಹಾಟ್‌ನಂತಹ ಉಪಕ್ರಮಗಳೊಂದಿಗೆ, ಮಹಿಳೆಯರಿಗೆ ವಿವಿಧ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಲಾಗಿದೆ.

**ಹೂಡಿಕೆಗೆ ಆಕರ್ಷಕ ತಾಣ**

52000 ಕೋಟಿ ರೂ. ಹೂಡಿಕೆಗೆ ಪ್ರಸ್ತಾವನೆಗಳು ಬಂದಿದ್ದು, ಇದರಿಂದ 2.37 ಲಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಇದರಲ್ಲಿ ಕಾಶ್ಮೀರ ವಿಭಾಗದಲ್ಲಿ 14500 ಕೋಟಿ ರೂ. ಮತ್ತು ಜಮ್ಮು ವಿಭಾಗದ 21600 ಕೋಟಿ ರೂ. ಮೌಲ್ಯದ ಯೋಜನೆಗಳು ಸೇರಿವೆ.

ಯೋಜನೆ ಸಿದ್ಧವಾಗುತ್ತಿದೆ. ಲಡಾಖ್‌ಗೆ ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನದ ಬಹುಕಾಲದ ಬೇಡಿಕೆಯೂ ಈಡೇರಿದೆ ಮತ್ತು ಲಡಾಖ್ ಈಗ ಪ್ರಗತಿಯ ಹಾದಿಯಲ್ಲಿದೆ.

ಮೂರು ವರ್ಷಗಳ ಹಿಂದೆ ಆಗಸ್ಟ್ 5 ರಂದು ಕೇಂದ್ರ ಸರ್ಕಾರವು ಬಹಳ ದೂರದೃಷ್ಟಿಯ ನಿರ್ಧಾರವನ್ನು ತೆಗೆದುಕೊಂಡಿತು ಮತ್ತು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ವಿಶೇಷವಾಗಿ ಕಣಿವೆ ಪ್ರದೇಶದಲ್ಲಿ ಅಭಿವೃದ್ಧಿಯ ಹೊಸ ಶಕೆ ಪ್ರಾರಂಭವಾಯಿತು. 2024 ರ ವೇಳೆಗೆ ಇದರ ವ್ಯಾಪಕ ಪರಿಣಾಮವು ಇನ್ನೂ ಉತ್ತಮವಾಗಿರುತ್ತದೆ. "ಕಾಶ್ಮೀರವು ಪ್ರಧಾನಿ ನರೇಂದ್ರ ಮೋದಿಯವರ ಹೃದಯದಲ್ಲಿದೆ, ಅವರು ಮಾತನಾಡುವಾಗಲೆಲ್ಲಾ ಎಲ್ಲಾ ಯೋಜನೆಗಳು ಸರಿಯಾಗಿ ತಲುಪುತ್ತಿವೆಯೇ ಎಂದು ಕೇಳುತ್ತಾರೆ. ಎಲ್ಲಾ ಯೋಜನೆಗಳ ಪ್ರಯೋಜನಗಳು ಭಾರತದ



## ಯುವಕರಿಗೆ ಹೊಸ ಅವಕಾಶಗಳು

- ಮುಮ್ಕಿನ್, ತೇಜಸ್ವಿನಿ, ರೈಸ್ ಟುಗೆದರ್, ಸ್ವಯಂಸೇವಕ ಕಾರ್ಯಕ್ರಮ ಮುಂತಾದವು ಯುವಜನತೆಗೆ ಮುನ್ನಡೆಯಲು ಅವಕಾಶಗಳನ್ನು ನೀಡುತ್ತಿವೆ. ಅವಸರ್(AVSAR) ನಂತಹ ಪ್ಲಾಟ್‌ಫಾರ್ಮ್‌ಗಳ ಸಹಾಯದಿಂದ ಕಾರ್ಪೊರೇಟ್ ಜಗತ್ತಿನಲ್ಲಿ ಉದ್ಯೋಗ ಉಪಕ್ರಮಗಳು. 100 ಆಡಳಿತ ಸೇವಾ ಆಕಾಂಕ್ಷಿಗಳಿಗೆ ನೆರವಿನ ಸೌಲಭ್ಯ.
- ಗ್ರಾಮೀಣ ಮಟ್ಟದಲ್ಲಿ ವಿವಿಧ ಯೋಜನೆಗಳ ಮೂಲಕ ಗ್ರಾಮೀಣ ಜನರಿಗೆ ಹೊಸ ಉದ್ಯೋಗ ಮತ್ತು ಅವಕಾಶಗಳನ್ನು ನೀಡುವ ಮೂಲಕ ಸಬಲೀಕರಣ ಗೊಳಿಸಲಾಗುತ್ತಿದೆ. ಅರ್ಹ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ನೇಮಕಾತಿ ಅಭಿಯಾನವನ್ನು ಪಾರದರ್ಶಕ ರೀತಿಯಲ್ಲಿ ಬೃಹತ್ ಪ್ರಮಾಣದಲ್ಲಿ ನಡೆಸಲಾಗುತ್ತಿದೆ.
- 17 ಲಕ್ಷಕ್ಕೂ ಹೆಚ್ಚು ಯುವಕರು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, 1.26 ಲಕ್ಷ ಯುವಕರು ತರಬೇತಿ ಪಡೆಯುತ್ತಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಒಳಾಂಗಣ ಕ್ರೀಡಾ ಸಂಕೀರ್ಣ, ಪ್ರತಿ ಪಂಚಾಯತ್‌ನಲ್ಲಿ ಆಟದ ಮೈದಾನ ಮತ್ತು ರಾಜ್ಯದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಸೌಲಭ್ಯಗಳೊಂದಿಗೆ ಕ್ರೀಡಾಂಗಣ.

“ನಮಗೆ, ಆಗಸ್ಟ್ 5 ರ ನಿರ್ಧಾರವು ದೃಢವಾಗಿದೆ ಮತ್ತು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಅನ್ನು ಹೊಸ ಹಾದಿಗೆ ತರುವ ಸಂಕಲ್ಪವೂ ಅಚಲವಾಗಿದೆ. ಆಗಸ್ಟ್ 5 ರಂದು, ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಪೂರ್ಣ ಭಾರತದ ಸಂವಿಧಾನವು ಜಾರಿಗೆ ಬಂದಿತು, ಸಂಪೂರ್ಣ ಕಾನೂನು ಜಾರಿಗೆ ಬಂದಿತು ಮತ್ತು 70 ವರ್ಷಗಳ ಕಾಲ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಅಭಿವೃದ್ಧಿಯಲ್ಲಿದ್ದ ಅತಿದೊಡ್ಡ ಅಡಚಣೆಯನ್ನು ನಾವು ಆಗಸ್ಟ್ 5 ರಂದು ತೆಗೆದುಹಾಕಿದ್ದೇವೆ.”
- **ನರೇಂದ್ರ ಮೋದಿ,** ಪ್ರಧಾನ ಮಂತ್ರಿ

## ಎಲ್ಲರಿಗೂ ಸಮಾನತೆ ಮತ್ತು ನ್ಯಾಯ

- ಮೀಸಲಾತಿಯ ನಿಬಂಧನೆಗಳನ್ನು ಬದಲಾಯಿಸುವ ಮೂಲಕ ಅದರ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಶೇ.4 ಪಹಾರಿ ಭಾಷಿಕರಿಗೆ, ಶೇ.10 ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಮೀಸಲಾತಿ.
- ಇತರ ಸಾಮಾಜಿಕ ವರ್ಗಗಳ ವ್ಯಾಪ್ತಿಯನ್ನು ಶೇ.2 ರಿಂದ 4 ಕ್ಕೆ ಹೆಚ್ಚಿಸಲಾಯಿತು. ಗಡಿ ನಿಯಂತ್ರಣ ರೇಖೆಯ ಬಳಿ ವಾಸಿಸುವ ಜನರ ವ್ಯಾಪ್ತಿಯನ್ನು ಶೇ. 3 ರಿಂದ 4 ಕ್ಕೆ ಏರಿಸಲಾಯಿತು.
- ಒಬಿಸಿ ಮೀಸಲಾತಿಯ ಆದಾಯ ಮಿತಿಯನ್ನು 4.5 ಲಕ್ಷದಿಂದ 8 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ.
- ಜನಸಂಖ್ಯೆಗೆ ಅನುಗುಣವಾಗಿ ವಿಧಾನಸಭಾ ಸ್ಥಾನಗಳಲ್ಲಿ ಬುಡಕಟ್ಟು ವರ್ಗಗಳಿಗೆ ಮೀಸಲಾತಿ.
- ಇದುವರೆಗೆ 5,36,4336 ಕಾಯಂ ನಿವಾಸಿ ಪ್ರಮಾಣಪತ್ರಗಳನ್ನು ನೀಡಲಾಗಿದೆ.
- ಎರಡು ಬುಡಕಟ್ಟು ವಸ್ತುಸಂಗ್ರಹಾಲಯಗಳು, 2 ಬುಡಕಟ್ಟು ಕಟ್ಟಡಗಳು, 15 ವಸತಿ ನಿಲಯಗಳ ಉನ್ನತೀಕರಣ, 60 ಹಳ್ಳಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು.

### ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ

- ಪಂಚಾಯತ್ ರಾಜ್ ಕಾನೂನನ್ನು ಎಲ್ಲಾ ಮೂರು ಹಂತಗಳಲ್ಲಿ ಜಾರಿಗೆ ತರಲಾಗಿದೆ. ಎಲ್ಲಾ 20 ಜಿಲ್ಲೆಗಳಿಗೆ ಜಿಲ್ಲಾ ಯೋಜನೆಯನ್ನು ಅನುಮೋದಿಸಲಾಗಿದೆ ಮತ್ತು ಬಜೆಟ್ ಅನ್ನು 12,600 ಕೋಟಿ ರೂ.ಗಳಿಗೆ ದ್ವಿಗುಣಗೊಳಿಸಲಾಗಿದೆ.
- ಜನ ಪ್ರತಿನಿಧಿಗಳು ಮತ್ತು ಅವರ ಕುಟುಂಬಗಳಿಗೆ 25 ಲಕ್ಷ ರೂ.ವಿಮಾ ರಕ್ಷಣೆ.
- ಸರ್ಕಾರವು ಸಂಪೂರ್ಣ ಕಾಗದ ರಹಿತವಾಗಿ ಕೆಲಸ ಮಾಡಲು ಅಭಿಯಾನ ಆರಂಭಿಸಲಾಗಿದೆ. 1000 ಗ್ರಾಮ ಪಂಚಾಯತ್‌ಗಳು ಭಾರತ್ ನೆಟ್‌ನೊಂದಿಗೆ ಸಂಪರ್ಕ ಹೊಂದಿವೆ.
- ಜಮ್ಮು ಮತ್ತು ಕಾಶ್ಮೀರದ ಇತಿಹಾಸದಲ್ಲಿ ಮೊದಲ ಬಾರಿಗೆ 150 ವರ್ಷಗಳ ಹಿಂದಿನ ದರ್ಬಾರ್ ಮೂವ್ ವ್ಯವಸ್ಥೆಯನ್ನು ರದ್ದುಗೊಳಿಸಲಾಗಿದೆ. ಎರಡು ರಾಜಧಾನಿಗಳ ಕಾರಣದಿಂದಾಗಿ ಎಲ್ಲಾ ಸರಕುಗಳನ್ನು ಟ್ರಕ್‌ಗಳ ಮೂಲಕ ಸ್ಥಳಾಂತರಿಸಲಾಗುತ್ತಿತ್ತು. ಇದರಿಂದಾಗಿ ಸರ್ಕಾರದ ವೆಚ್ಚ ಹೆಚ್ಚಾಗುತ್ತಿತ್ತು.

### ಪ್ರವಾಸೋದ್ಯಮಕ್ಕೆ ಉತ್ತೇಜನ

ವಿಮಾನಗಳ ಮೂಲಕ ದಾಖಲೆ ಸಂಖ್ಯೆಯ ಪ್ರವಾಸಿಗರು ಆಗಮಿಸಿದ್ದಾರೆ. ಅಕ್ಟೋಬರ್ 2021 ರಿಂದ ಮಾರ್ಚ್ 2022 ರವರೆಗೆ 79 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ. 2021 ರ ಡಿಸೆಂಬರ್ ತಿಂಗಳೊಂದರಲ್ಲಿಯೇ, ಶ್ರೀನಗರ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಯಾಣಿಕರ ಸಂಖ್ಯೆ 3.24 ಲಕ್ಷ ಮೀರಿತ್ತು. 75 ಆಫ್‌ಬೀಟ್ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ದೋಣಿಮನೆ ಉತ್ಸವಗಳು, ಸೂಫಿ ಕಾರ್ಯಕ್ರಮಗಳು, ಸಾಹಿತ್ಯ ಮತ್ತು ಇತರ ಉತ್ಸವಗಳನ್ನು ಆಯೋಜಿಸುವ ಮೂಲಕ ಪ್ರವಾಸೋದ್ಯಮವನ್ನು ಉತ್ತೇಜಿಸಲಾಗಿದೆ.

ಉಳಿದ ರಾಜ್ಯಗಳಂತೆ ಜಮ್ಮು ಮತ್ತು ಕಾಶ್ಮೀರವನ್ನೂ ತಲುಪುತ್ತಿವೆಯೇ ಎಂದು ವಿಚಾರಿಸುತ್ತಾರೆ” ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳುತ್ತಾರೆ. ಅದೇ ಸಮಯದಲ್ಲಿ, ಹೊಸ ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್ ಕೂಡ ಹಿಂದಿನ ಸಂಕೋಲೆಯಿಂದ ಹೊರಬರಲು ನಿರ್ಧರಿಸಿವೆ, ಇವು ತಮ್ಮ ವರ್ತಮಾನವನ್ನು ಬಲಪಡಿಸುತ್ತಿವೆ ಮತ್ತು ಭವಿಷ್ಯಕ್ಕಾಗಿ ತಮ್ಮನ್ನು ಸಜ್ಜುಗೊಳಿಸುತ್ತಿವೆ. ಈ ಹಿಂದೆ ಪುಲ್ವಾಮಾದಲ್ಲಿ ಭಯೋತ್ಪಾದಕರು ಪ್ರಾಬಲ್ಯ ಹೊಂದಿದ್ದರು ಮತ್ತು ಈಗ ಪುಲ್ವಾಮಾದಲ್ಲಿ 2,000 ಕೋಟಿ ರೂ. ವೆಚ್ಚದಲ್ಲಿ ಏಮ್ಸ್ ನಿರ್ಮಿಸಲಾಗುತ್ತಿದೆ. ಯುವಜನರಿಗೆ ಕಾಲೇಜುಗಳು ಮುಚ್ಚಿದ್ದವು, ಇಂದು ಸುಮಾರು 900 ಕೋಟಿ ರೂ. ವೆಚ್ಚದಲ್ಲಿ ಐಐಟಿ, ಎನ್‌ಐಎಫ್‌ಟಿ ಇತ್ಯಾದಿಗಳು ಬರುತ್ತಿವೆ. ಇದರೊಂದಿಗೆ ಇಲ್ಲಿ ಎರಡು ಏಮ್ಸ್ ಮತ್ತು ವೈದ್ಯಕೀಯ ಕಾಲೇಜುಗಳು ಕೂಡ ಸ್ಥಾಪನೆಯಾಗಿವೆ. ■



# ನಮಃ ಶಿವಾಯ!

**ಭಗವಾನ್ ಮಹಾದೇವನ ನಗರವಾದ ದೇವ್‌ಘರ್ ಶ್ರಾವಣದ ಮುಂಚೆಯೇ ವಿಮಾನ ನಿಲ್ದಾಣದ ಉಡುಗೊರೆಯನ್ನು ಪಡೆದಿದೆ. ಜಾರ್ಖಂಡ್‌ನಲ್ಲಿ 16000 ಕೋಟಿ ರೂ. ಗೂ ಹೆಚ್ಚು ಮೌಲ್ಯದ ಯೋಜನೆಗಳನ್ನು ಸಹ ಏಕಕಾಲದಲ್ಲಿ ಉದ್ಘಾಟಿಸಲಾಯಿತು.**

ವೇಗದ ಸಂಪರ್ಕವು ನಗರಗಳನ್ನು ಪರಸ್ಪರ ಸಂಪರ್ಕಿಸುವುದು ಮಾತ್ರವಲ್ಲದೇ, ಅವುಗಳ ಬೆಳವಣಿಗೆಯನ್ನೂ ಹೆಚ್ಚಿಸುತ್ತದೆ. ಹಿಂದೆ, ವಿಮಾನ ಸೇವೆಯಂತಹ ಕ್ಷಿಪ್ರ ಸಾರಿಗೆ ವಿಧಾನಗಳು ದೊಡ್ಡ ನಗರಗಳಿಗೆ ಮಾತ್ರ ಮೀಸಲಾಗಿತ್ತು. ಆದರೆ ಈಗ "ಉಡಾನ್" ಯೋಜನೆಯು ಸಣ್ಣ ಮತ್ತು ಮಧ್ಯಮ ಗಾತ್ರದ ನಗರಗಳನ್ನು ಸಂಪರ್ಕಿಸುತ್ತಿದೆ. ಸಂಪರ್ಕ ಮತ್ತು ಮೂಲಸೌಕರ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಆ ಶ್ರದ್ಧಾ ಕೇಂದ್ರಗಳ ಅಭಿವೃದ್ಧಿಯ ದೃಷ್ಟಿಯಲ್ಲಿಯೂ ಈ ಬದಲಾವಣೆಯನ್ನು ತರಲಾಗುತ್ತಿದೆ. ಅದಕ್ಕೆ ಸಾಕ್ಷಿ ಮಹಾದೇವನ ನಗರವಾದ ಕುಶಿನಗರ, ನಂತರ ಈಗ ಭಗವಾನ್ ಬುದ್ಧನ ನಗರ ದೇವ್‌ಘರ್.

ಭಗವಾನ್ ಶಿವನ 12 ಜ್ಯೋತಿರ್ಲಿಂಗಗಳಲ್ಲಿ ಒಂದಾದ ಬಾಬಾ ಬೈದ್ಯನಾಥರ ನಗರವಾದ ಬಾಬಾ ಧಾಮಕ್ಕೆ ಭೇಟಿ ನೀಡಿದ ಪ್ರತಿಯೊಬ್ಬರೂ ಸಂತೋಷದ ಭಾವನೆ ಅನುಭವಿಸುತ್ತಾರೆ. ಭಾರತದಲ್ಲಿನ ಈ ಪ್ರಮುಖ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರವು ಈಗ ನೇರವಾಗಿ ವಿಮಾನ ಸೇವೆಯ ಸಂಪರ್ಕ ಹೊಂದಿದೆ. ಜುಲೈ 12 ರಂದು ಪ್ರಧಾನಿ ನರೇಂದ್ರ ಮೋದಿ ಅವರು ದೇವ್‌ಘರ್ ವಿಮಾನ ನಿಲ್ದಾಣವನ್ನು ಉದ್ಘಾಟಿಸಿದರು. ಅವರು ಬಾಬಾ ಬೈದ್ಯನಾಥ ಧಾಮ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ದೇಶದ ಮೊದಲ ಪ್ರಧಾನಿಯಾಗಿದ್ದಾರೆ. ಅವರು ಜಾರ್ಖಂಡ್‌ನಲ್ಲಿ 16,800 ಕೋಟಿ ರೂ. ಮೌಲ್ಯದ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು.

ಪ್ರವಾಸೋದ್ಯಮ ಸಚಿವಾಲಯದ ಪ್ರಸಾದ್ ಯೋಜನೆಯಡಿಯಲ್ಲಿ ಬಾಬಾ ಬೈದ್ಯನಾಥ ಧಾಮದಲ್ಲಿನ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ದೇವ್‌ಘರ್‌ನಲ್ಲಿರುವ ಈ ವಿಮಾನ ನಿಲ್ದಾಣವನ್ನು ಉಡಾನ್ ಯೋಜನೆಯ ಭಾಗವಾಗಿ ನಿರ್ಮಿಸಲಾಗಿದೆ, ಈ ಯೋಜನೆಯನ್ನು ದೇಶದ ಸಣ್ಣ ಮತ್ತು ಮಧ್ಯಮ ಗಾತ್ರದ ನಗರಗಳನ್ನು ಸಂಪರ್ಕಿಸಲು ಪ್ರಾರಂಭಿಸಲಾಗಿದೆ. ಜುಲೈ 12 ರಂದು, ಈ ವಿಮಾನ ನಿಲ್ದಾಣದಿಂದ ವಿಮಾನ ಸೇವೆಯೂ ಪ್ರಾರಂಭವಾಯಿತು. ಇದು ಜಾರ್ಖಂಡ್‌ನ ಎರಡನೇ ವಿಮಾನ ನಿಲ್ದಾಣವಾಗಿದೆ. ಇದು ಸಂಪರ್ಕದ ಜೊತೆಗೆ, ನಂಬಿಕೆ ಮತ್ತು ಆಧ್ಯಾತ್ಮಿಕತೆಗೆ ಸಂಬಂಧಿಸಿದ ದೇಶದ ಪ್ರಮುಖ ಸ್ಥಳಗಳಲ್ಲಿ ಸೌಲಭ್ಯಗಳ ಸೃಷ್ಟಿಗೆ ವಿಶೇಷ ಗಮನ ನೀಡಲಾಗುತ್ತಿರುವ ಕೇಂದ್ರ ಸರ್ಕಾರದ ದೃಷ್ಟಿಕೋನದ ಭಾಗವಾಗಿದೆ.

## ದೇವ್‌ಘರ್ ಜಾರ್ಖಂಡ್‌ನ ಎರಡನೇ ವಿಮಾನ ನಿಲ್ದಾಣವಾಗಿದೆ. 2018ರಲ್ಲಿ ಪ್ರಧಾನಿ ಮೋದಿ ಇದರ ಶಿಲಾನ್ಯಾಸ ಮಾಡಿದ್ದರು



- ಮೇ 25, 2018 ರಂದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇವ್‌ಘರ್ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಅಡಿಪಾಯ ಹಾಕಿದ್ದರು. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ 401 ಕೋಟಿ ರೂಪಾಯಿ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ. ದೇವ್‌ಘರ್ ವಿಮಾನ ನಿಲ್ದಾಣವು 657 ಎಕರೆ ವಿಸ್ತೀರ್ಣವನ್ನು ಹೊಂದಿದೆ. ಇದರಲ್ಲಿ ರನ್‌ವೇ ನಿರ್ಮಾಣವೂ ಸೇರಿದೆ. ಇದು 2,500 ಮೀಟರ್ ಉದ್ದ ಮತ್ತು 45 ಮೀಟರ್ ಅಗಲವಿದೆ. ಈ ರನ್ವೇ ಏರ್ಬಸ್ ಎ320 ಮತ್ತು ಬೋಯಿಂಗ್ 737 ವಿಮಾನಗಳನ್ನು ನಿಭಾಯಿಸಬಲ್ಲದು.
- ಪ್ರಧಾನಮಂತ್ರಿಯವರು ದೇವ್‌ಘರ್ ಏಮ್ಸ್‌ನಲ್ಲಿ ಒಳರೋಗಿ ವಿಭಾಗ ಮತ್ತು ಶಸ್ತ್ರಚಿಕಿತ್ಸಾ ಸೇವೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ದೇವ್‌ಘರ್‌ನಲ್ಲಿರುವ ಏಮ್ಸ್ ಇಡೀ ಪ್ರದೇಶದ ಆರೋಗ್ಯ ಕ್ಷೇತ್ರಕ್ಕೆ ವರದಾನವಾಗಿದೆ.
- 10,000 ಕೋಟಿ ರೂ.ಗೂ ಅಧಿಕ ಮೊತ್ತದ ಬಹು ರಸ್ತೆ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಪ್ರಧಾನಮಂತ್ರಿಯವರು ನೆರವೇರಿಸಿದರು.
- ಈ ಪ್ರದೇಶಕ್ಕೆ ಸುಮಾರು 3000 ಕೋಟಿ ರೂ. ಮೌಲ್ಯದ ವಿವಿಧ ಇಂಧನ ಮೂಲಸೌಕರ್ಯ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾಡಲಾಯಿತು.
- ಗೊಡ್ಡಾ - ಹಂಸ್‌ಡೀಹಾ ವಿದ್ಯುದ್ದೀಕರಣ ವಿಭಾಗ ಮತ್ತು ಗರ್ಹ್ವಾ - ಮಹುರಿಯಾ ಜೋಡಿ ಮಾರ್ಗ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಾಯಿತು.

## ಜನಸಾಮಾನ್ಯರು ಈಗ ವಿಮಾನದಲ್ಲಿ ಪ್ರಯಾಣಿಸಲು ಶಕ್ತರಾಗಿದ್ದಾರೆ

- ಕಳೆದ 5-6 ವರ್ಷಗಳಲ್ಲಿ ವಿಮಾನ ನಿಲ್ದಾಣಗಳು, ಹೆಲಿಪೋರ್ಟ್‌ಗಳು ಮತ್ತು ವಾಟರ್ ಏರೋಡ್ರೋಮ್‌ಗಳ ಮೂಲಕ ಸುಮಾರು 70 ಹೊಸ ಸ್ಥಳಗಳನ್ನು ಉಡಾನ್ ಯೋಜನೆಯಡಿಯಲ್ಲಿ ಸೇರಿಸಲಾಗಿದೆ.
- ಉಡಾನ್ ಯೋಜನೆಯಡಿ ಇಲ್ಲಿಯವರೆಗೆ ಒಂದು ಕೋಟಿ ಪ್ರಯಾಣಿಕರು ಕಡಿಮೆ ದರದಲ್ಲಿ ಪ್ರಯಾಣಿಸಿದ್ದಾರೆ. ಅವರಲ್ಲಿ ಲಕ್ಷಾಂತರ ಜನರು ಮೊದಲ ಬಾರಿಗೆ ವಿಮಾನ ನಿಲ್ದಾಣವನ್ನು ನೋಡಿದ್ದಾರೆ ಮತ್ತು ಮೊದಲ ಬಾರಿಗೆ ವಿಮಾನ ಪ್ರಯಾಣ ಮಾಡಿದ್ದಾರೆ.
- ಇಂದು ಸಾಮಾನ್ಯ ನಾಗರಿಕರು 400ಕ್ಕೂ ಹೆಚ್ಚು ಹೊಸ ಮಾರ್ಗಗಳಲ್ಲಿ ವಿಮಾನ ಪ್ರಯಾಣದ ಸೌಲಭ್ಯ ಪಡೆಯುತ್ತಿದ್ದಾರೆ.

ವಿಮಾನ ನಿಲ್ದಾಣವನ್ನು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಬಾಬಾ ಬೈದ್ಯನಾಥರ ಆಶೀರ್ವಾದದಿಂದ ಇಂದು 16 ಸಾವಿರ ಕೋಟಿ ರೂ.ಗೂ ಅಧಿಕ ಮೊತ್ತದ ಯೋಜನೆಗಳನ್ನು ಉದ್ಘಾಟಿಸಲಾಗಿದೆ ಹಾಗೂ ಶಂಕು ಸ್ಥಾಪನೆ ಮಾಡಲಾಗಿದೆ' ಎಂದರು. ಕಳೆದ ಎಂಟು ವರ್ಷಗಳಲ್ಲಿ, ಹೆದ್ದಾರಿ, ರೈಲ್ವೆ, ವಾಯುಮಾರ್ಗ ಮತ್ತು ಜಲಮಾರ್ಗದ ಮೂಲಕ ಜಾರ್ಖಂಡ್‌ಗೆ ಸಂಪರ್ಕ ಕಲ್ಪಿಸುವ ಪ್ರಯತ್ನದಲ್ಲಿ ಇದೇ ಚಿಂತನೆ ಮತ್ತು ಮನೋಭಾವಕ್ಕೆ ಆದ್ಯತೆ ನೀಡಲಾಗಿದೆ.


ದೇವ್‌ಘರ್ ವಿಮಾನ ನಿಲ್ದಾಣ ಮತ್ತು ಇತರ ಅಭಿವೃದ್ಧಿ ಯೋಜನೆಗಳು ಜಾರ್ಖಂಡ್‌ನಲ್ಲಿ ಪ್ರಾರಂಭವಾಗಿದ್ದರೂ, ಅವು ಬಿಹಾರ ಮತ್ತು ಪಶ್ಚಿಮ ಬಂಗಾಳದ ಅನೇಕ ಪ್ರದೇಶಗಳಿಗೆ ನೇರವಾಗಿ ಪ್ರಯೋಜನವನ್ನು ನೀಡುತ್ತವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಯೋಜನೆಗಳು ಪೂರ್ವ ಭಾರತದ ಅಭಿವೃದ್ಧಿಯನ್ನು ತ್ವರಿತಗೊಳಿಸುತ್ತವೆ. ಇಂತಹ ಆಧುನಿಕ ಸೌಲಭ್ಯಗಳಿಂದ ಬುಡಕಟ್ಟು ಪ್ರದೇಶದ ಅದೃಷ್ಟ ಖುಲಾಯಿಸುತ್ತದೆ. ■


**ಬಿಹಾರ ವಿಧಾನಸಭೆಯ ಶತಮಾನೋತ್ಸವ ಸಮಾರಂಭದಲ್ಲಿ ಭಾಷಣ**

### ಬಿಹಾರ ವಿಧಾನಸಭೆಗೆ ಭೇಟಿ ನೀಡಿದ ಮೊದಲ ಪ್ರಧಾನಿ

ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳು ಭಾರತೀಯ ಪ್ರಜಾಪ್ರಭುತ್ವದ ಅತ್ಯಂತ ಸುಂದರವಾದ ಅಂಶಗಳಲ್ಲಿ ಒಂದಾಗಿದೆ. ಜುಲೈ 12 ರಂದು ಬಿಹಾರ ವಿಧಾನಸಭೆಯ ಶತಮಾನೋತ್ಸವ ಆಚರಣೆಯ ಕೊನೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಇಲ್ಲಿ ಮಾತನಾಡುವಾಗ ಆ ಸೌಂದರ್ಯವನ್ನು ನೋಡಬಹುದಾಗಿತ್ತು. ಬಿಹಾರ ವಿಧಾನಸಭೆ ಸಂಕೀರ್ಣಕ್ಕೆ ಭೇಟಿ ನೀಡಿದ ಮೊದಲ ಪ್ರಧಾನಿ ಅವರಾದರು.

"ಪ್ರಜಾಪ್ರಭುತ್ವದ ಹಕ್ಕುಗಳ ಬಗೆಗಿನ ತಿಳಿವಳಿಕೆಯು ಜಗತ್ತಿನ ಇತರ ಭಾಗಗಳಲ್ಲಿ ಹೆಚ್ಚಾಗಲು ಪ್ರಾರಂಭಿಸಿದ ಕಾಲದಲ್ಲಿಯೇ, ಲಿಚ್ಛವಿ ಮತ್ತು ವಜ್ಜಿಯಂತಹ ಗಣರಾಜ್ಯಗಳು ಉತ್ತುಂಗದಲ್ಲಿದ್ದವು. ಪ್ರಪಂಚದ ಹೆಚ್ಚಿನ ಭಾಗಗಳು ನಾಗರಿಕತೆ ಮತ್ತು ಸಂಸ್ಕೃತಿಯತ್ತ ಮೊದಲ ಹೆಜ್ಜೆಗಳನ್ನು ಇಡುತ್ತಿರುವಾಗ, ವೈಶಾಲಿಯಲ್ಲಿ ಪರಿಷ್ಕರಿಸಿದ ಪ್ರಜಾಪ್ರಭುತ್ವವು ಕಾರ್ಯನಿರ್ವಹಿಸುತ್ತಿತ್ತು." ಬಿಹಾರ ವಿಧಾನಸಭಾ ಶತಮಾನೋತ್ಸವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಈ ಮಾತುಗಳು ಪ್ರಜಾಪ್ರಭುತ್ವಕ್ಕೆ ಬಿಹಾರದ ಮಹತ್ವವನ್ನು ಪ್ರದರ್ಶಿಸಲು ಸಾಕಾಗುತ್ತವೆ. ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಯಾವುದನ್ನೂ ಬಿಹಾರ ಒಪ್ಪಿಕೊಳ್ಳುವುದಿಲ್ಲ. ಸ್ವಾತಂತ್ರ್ಯದ ನಂತರವೂ ಬಿಹಾರ ತನ್ನ ಅದೇ ನಿಲುವನ್ನು ಉಳಿಸಿಕೊಂಡಿದೆ. ಪ್ರಧಾನಿಯವರು ವಿಧಾನಸಭೆಯಲ್ಲಿ ಶತಮಾನೋತ್ಸವ ಸ್ಮಾರಕ ಸ್ತಂಭವನ್ನು ಲೋಕಾರ್ಪಣೆ ಮಾಡಿದರು. ಇದರೊಂದಿಗೆ ಅವರು ವಿಧಾನಸಭೆ ಅತಿಥಿ ಗೃಹ ಮತ್ತು ವಸ್ತುಸಂಗ್ರಹಾಲಯಕ್ಕೆ ಅಡಿಪಾಯ ಹಾಕಿದರು. ಈ ವಸ್ತುಸಂಗ್ರಹಾಲಯದ ವಿವಿಧ ಗ್ಯಾಲರಿಗಳು ಬಿಹಾರದಲ್ಲಿ ಪ್ರಜಾಪ್ರಭುತ್ವದ ಇತಿಹಾಸ ಮತ್ತು ಪ್ರಸ್ತುತ ಆಡಳಿತ ರಚನೆಯ ವಿಕಾಸವನ್ನು ಪ್ರದರ್ಶಿಸುತ್ತದೆ.





## ಡಿಜಿಟಲ್ ಇಂಡಿಯಾ

# ಸೆಮಿಕಂಡಕ್ಟರ್ ಚಿಪ್ ಉತ್ಪಾದನೆಯ ಕೇಂದ್ರವಾಗಲಿರುವ ಗುಜರಾತ್








ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯು ಮನುಕುಲದ ಪ್ರಯೋಜನಕ್ಕಾಗಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಬಹುದು ಎಂದು ತನ್ನ ಪ್ರಮುಖ ಯೋಜನೆಯಾದ ಡಿಜಿಟಲ್ ಇಂಡಿಯಾದ ಮೂಲಕ ಭಾರತವು ಜಗತ್ತಿಗೆ ತೋರಿಸಿದೆ. ಎಂಟು ವರ್ಷಗಳ ಹಿಂದೆ ಆರಂಭವಾದ ಈ ಅಭಿಯಾನ ಬದಲಾದ ಕಾಲಕ್ಕೆ ತಕ್ಕಂತೆ ವಿಸ್ತಾರಗೊಳ್ಳುತ್ತಾ ಸಾಗುತ್ತಿದೆ. ಇಂದು ಜಗತ್ತಿನ ಶೇಕಡಾ 40ರಷ್ಟು ಡಿಜಿಟಲ್ ವಹಿವಾಟು ಭಾರತದಲ್ಲಿ ನಡೆಯುತ್ತಿರುವುದಕ್ಕೆ ಇದೇ ಕಾರಣ. ಡಿಜಿಟಲ್ ಇಂಡಿಯಾದಿಂದ ಸಾಧ್ಯವಾಗಿರುವ ಪಾರದರ್ಶಕತೆ ಬಡವರು ಮತ್ತು ಮಧ್ಯಮ ವರ್ಗವನ್ನು ಹಲವು ಹಂತಗಳಲ್ಲಿ ಭ್ರಷ್ಟಾಚಾರದಿಂದ ಮುಕ್ತಗೊಳಿಸಿದೆ. ಈಗ ಭಾರತವು ಸೆಮಿಕಂಡಕ್ಟರ್ ಚಿಪ್ ತಯಾರಿಕಾ ಕೇಂದ್ರವಾಗಿ ಮುನ್ನಡೆಯುತ್ತಿದೆ. ಜುಲೈ 4 ರಂದು ಗಾಂಧಿನಗರದಲ್ಲಿ ಡಿಜಿಟಲ್ ಇಂಡಿಯಾ ಸಪ್ತಾಹ ಉದ್ಘಾಟನೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಡಿಜಿಟಲ್ ಇಂಡಿಯಾಗೆ ಸಂಬಂಧಿಸಿದ ಹಲವಾರು ಉಪಕ್ರಮಗಳಿಗೆ ಚಾಲನೆ ನೀಡಿದರು.

ಡಿಜಿಟಲ್ ವಹಿವಾಟಿನ ತ್ವರಿತ ಬೆಳವಣಿಗೆಯಿಂದಾಗಿ ಇಂದು ಭಾರತದ ಆರ್ಥಿಕತೆಯು ಹೊಸ ಆಯಾಮಗಳನ್ನು ಪಡೆದಿದೆ. ಇಂದು ಸಮಾಜದ ಪ್ರತಿಯೊಂದು ವರ್ಗವೂ ಮೊಬೈಲ್ ಫೋನ್‌ಗಳ ಮೂಲಕ ಒಂದೇ ಕ್ಲಿಕ್‌ನಲ್ಲಿ ಸುಲಭ ವಹಿವಾಟಿನ ಪ್ರಯೋಜನ ಪಡೆಯುತ್ತಿದೆ. ಉದ್ಯಮಿ ಗುರುಚರಣ್ ಸಿಂಗ್ ಹೇಳುತ್ತಾರೆ, "ಇದು ಬಟನ್‌ಗಳ ಯುಗ. ಇಂದು ಪ್ರತಿಯೊಬ್ಬ ಗ್ರಾಹಕರು ಕ್ಯೂಆರ್ ಕೋಡ್ ಎಲ್ಲಿದೆ ಎಂದು ಕೇಳುತ್ತಾರೆ." ಅದೇ ಸಮಯದಲ್ಲಿ, ಡಿಜಿಟಲ್ ಇಂಡಿಯಾ ಅಭಿಯಾನದ ಅಡಿಯಲ್ಲಿ ಸಾಮಾನ್ಯ ಸೇವಾ ಕೇಂದ್ರದ (ಸಿಎಸ್‌ಸಿ) ಸೌಲಭ್ಯವು ಸಾಮಾನ್ಯ ಜನರ ಜೀವನವನ್ನು ಹೆಚ್ಚು ಸುಲಭಗೊಳಿಸಿದೆ. ಇದು ಸ್ಥಳೀಯ ಮಟ್ಟದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಉತ್ತಮ ಜೀವನೋಪಾಯವನ್ನು ಒದಗಿಸಿದೆ. ಬಿಹಾರದ ಮುಜಾಫರ್ಪುರದ ಸಿಎಸ್‌ಸಿ ನಿರ್ದೇಶಕ ರಿಷಿ ರಾಜ್ ಹೇಳುತ್ತಾರೆ, "ಇದರಿಂದಾಗಿ ಜನರಿಗೆ ಉದ್ಯೋಗ ಸಿಕ್ಕಿದೆ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸೌಲಭ್ಯಗಳು ದೊರೆತಿವೆ. ನಮ್ಮ ಗ್ರಾಮೀಣ ಪ್ರದೇಶದ ಜನರು ತಮ್ಮ ಕೆಲಸಗಳನ್ನು ಮಾಡಲು ಹೊರಗೆ ಹೋಗುತ್ತಿದ್ದರು. ಈಗ ಅವರ ಕೆಲಸ ಇಲ್ಲಿಯೇ ಆಗುತ್ತಿದೆ. ಇದರಿಂದ ಜನ ಸಂತಸಗೊಂಡಿದ್ದಾರೆ.'' ನಿಜವಾಗಿ ಡಿಜಿಟಲ್ ಇಂಡಿಯಾ ಜನಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತಂದಿದೆ. 8-10 ವರ್ಷಗಳ ಹಿಂದೆ ಜನನ ಪ್ರಮಾಣ ಪತ್ರ, ಬಿಲ್ ಸಲ್ಲಿಕೆ, ಪಡಿತರ, ದಾಖಲಾತಿ, ಫಲಿತಾಂಶ ಮತ್ತು ಬ್ಯಾಂಕ್‌ಗಳಲ್ಲಿ ಕೂಡ ಸರತಿ ಸಾಲು ಇರುತ್ತಿತ್ತು. ಈಗ ಭಾರತವು ಡಿಜಿಟಲ್ ಇಂಡಿಯಾದ ಆನ್‌ಲೈನ್ ಮಾಧ್ಯಮದ ಮೂಲಕ ಆ ಉದ್ದನೆಯ ಸರತಿ ಸಾಲುಗಳಿಗೆ ಪರಿಹಾರವನ್ನು ಕಂಡುಕೊಂಡಿದೆ.

ಇಂದು, ಹಿರಿಯ ನಾಗರಿಕರಿಗೆ ಜೀವನ ಪ್ರಮಾಣಪತ್ರಗಳು, ಕಾಯ್ದಿರಿಸುವಿಕೆ, ಬ್ಯಾಂಕಿಂಗ್ ಮುಂತಾದ ವಿವಿಧ ಸೌಲಭ್ಯಗಳು ಡಿಜಿಟಲ್ ಆಗುವ ಮೂಲಕ ಸುಲಭವಾಗಿ, ವೇಗವಾಗಿ ಮತ್ತು ಕೈಗೆಟುಕುವ ದರದಲ್ಲಿ ದೊರೆಯುತ್ತಿವೆ.

ಗಾಂಧಿನಗರದಲ್ಲಿ 2022ರ ಡಿಜಿಟಲ್ ಇಂಡಿಯಾ ಸಪ್ತಾಹವನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಡಿಜಿಟಲ್ ಇಂಡಿಯಾದ ಮಹತ್ವದ ಬಗ್ಗೆ ಹೇಳುತ್ತಾ, ಕಾಲ ಕಳೆದಂತೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳದ ದೇಶವು ಹಿಂದೆ ಬೀಳುತ್ತದೆ ಎಂದು ಹೇಳಿದರು. ಮೂರನೇ ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಭಾರತ ಇದಕ್ಕೆ ಬಲಿಯಾಗಿತ್ತು. ಆದರೆ ಭಾರತವು ನಾಲ್ಕನೇ ಕೈಗಾರಿಕಾ ಕ್ರಾಂತಿಯಲ್ಲಿ - ಕೈಗಾರಿಕೆ 4.0 - ಜಗತ್ತಿಗೆ ಮಾರ್ಗದರ್ಶನ ನೀಡುತ್ತಿರುವುದನ್ನು ಇಂದು ನಾವು ಹೆಮ್ಮೆಯಿಂದ ಹೇಳಬಹುದು ಎಂದು ಹೇಳಿದರು. ಎಂಟು ವರ್ಷಗಳ ಹಿಂದೆ ಪ್ರಾರಂಭವಾದ



## ಗಾಂಧಿನಗರದಲ್ಲಿ ಹಲವಾರು ಉಪಕ್ರಮಗಳಿಗೆ ಚಾಲನೆ

**ಚಿಪ್ಸ್ ಟು ಸ್ಟಾರ್ಟ್‌ಅಪ್ (ಸಿ2ಎಸ್) ಪ್ರೋಗ್ರಾಂ**
30 ಸಂಸ್ಥೆಗಳ ಮೊದಲ ಗುಂಪನ್ನು ಘೋಷಿಸಲಾಯಿತು. ಈ ಕಾರ್ಯಕ್ರಮದ ಅಡಿಯಲ್ಲಿ, ಸೆಮಿಕಂಡಕ್ಟರ್ ಚಿಪ್ ತಯಾರಿಕೆಯಲ್ಲಿ ಈ ಗುಂಪಿಗೆ ನೆರವು ನೀಡಲಾಗುವುದು.

**ಡಿಜಿಟಲ್ ಇಂಡಿಯಾ ಜೆನೆಸಿಸ್**
ಪ್ರಧಾನಮಂತ್ರಿಯವರು 'ಡಿಜಿಟಲ್ ಇಂಡಿಯಾ ಜೆನೆಸಿಸ್' (ಜೆನ್-ನೆಕ್ಸ್ಟ್ ಸಪೋರ್ಟ್ ಫಾರ್ ಇನ್ನೋವೇಟಿವ್ ಸ್ಟಾರ್ಟ್‌ಅಪ್) - ರಾಷ್ಟ್ರೀಯ ಡೀಪ್-ಟೆಕ್ ಸ್ಟಾರ್ಟ್‌ಅಪ್ ಪ್ಲಾಟ್‌ಫಾರ್ಮ್ ಗೆ ಚಾಲನೆ ನೀಡಿದರು.

**'ಡಿಜಿಟಲ್ ಇಂಡಿಯಾ ಭಾಷಿಣಿ' ಆಯೋಜನೆ**
ಭಾರತೀಯ ಭಾಷೆಗಳನ್ನು ಶ್ರೀಮಂತಗೊಳಿಸುವ ಉಪಕ್ರಮ. 'ಡಿಜಿಟಲ್ ಇಂಡಿಯಾ ಭಾಷಿಣಿ' ಯನ್ನು ಪ್ರಾರಂಭಿಸಲಾಯಿತು, ಇದು ಭಾರತೀಯ ಭಾಷೆಗಳಲ್ಲಿ ಇಂಟರ್ನೆಟ್ ಮತ್ತು ಡಿಜಿಟಲ್ ಸೇವೆಗಳಿಗೆ ಸುಲಭ ಪ್ರವೇಶವನ್ನು ದೊರಕಿಸುತ್ತದೆ.

**ಇಂಡಿಯಾಸ್ಟಾಕ್.ಗ್ಲೋಬಲ್ ಪೋರ್ಟಲ್**
ಆಧಾರ್, ಯುಪಿಐ, ಡಿಜಿಲಾಕರ್, ಕೋವಿನ್ ಲಸಿಕೆ ವೇದಿಕೆ, ಸರ್ಕಾರಿ ಇ-ಮಾರುಕಟ್ಟೆ (ಜಿಇಎಂ), ದೀಕ್ಷಾ ಪ್ಲಾಟ್‌ಫಾರ್ಮ್ ಮತ್ತು ಆಯುಷ್ಮಾನ್ ಭಾರತ್ ಡಿಜಿಟಲ್ ಹೆಲ್ತ್ ಮಿಷನ್‌ನ ಸೌಲಭ್ಯಗಳನ್ನು ಹೊಂದಿರುವ 'Indiastack.global' ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ.

**'ಮೈಸ್ಕೀಮ್' ಆರಂಭ**
ಪ್ರಧಾನಮಂತ್ರಿಯವರು 'MyScheme'ಗೆ ಚಾಲನೆ ನೀಡಿದರು. ಇದು ಸೇವೆಗಳ ಹುಡುಕಾಟದ ವೇದಿಕೆಯಾಗಿದ್ದು, ಇದು ಸರ್ಕಾರಿ ಯೋಜನೆಗಳಿಗೆ ಪ್ರವೇಶವನ್ನು ಒದಗಿಸುತ್ತದೆ.

**'ಮೆರೀ ಪೆಹಚಾನ್'ಗೆ ಚಾಲನೆ**
ಪ್ರಧಾನಮಂತ್ರಿ ಅವರು. ನಾಗರಿಕರು ಲಾಗಿನ್‌ಗಾಗಿ ರಾಷ್ಟ್ರೀಯ ಏಕ ಸೈನ್ ಆನ್ ಆಗುವ ವ್ಯವಸ್ಥೆಯ 'ಮೆರೀ ಪೆಹಚಾನ್' ಗೆ ಚಾಲನೆ ನೀಡಿದರು. ರಾಷ್ಟ್ರೀಯ ಏಕ ಸೈನ್-ಆನ್ (ಎನ್‌ಎಸ್‌ಎಸ್‌ಒ) ಒಂದು ಬಳಕೆದಾರ ದೃಢೀಕರಣ ಸೇವೆಯಾಗಿದೆ.

ಸೂರತ್‌ನಲ್ಲಿ ಸಹಜ ಕೃಷಿ ಕಾರ್ಯಕ್ರಮ

## ಸಹಜ ಕೃಷಿಯು ಭೂಮಿ ತಾಯಿ ಮತ್ತು ಗೋಮಾತೆಯ ಸೇವೆ ಮಾಡಲು ಒಂದು ಅವಕಾಶವಾಗಿದೆ

**ಸಹಜ ಕೃಷಿಯು ನಮ್ಮ ರೈತರನ್ನು ಆರ್ಥಿಕವಾಗಿ ಸಬಲಗೊಳಿಸುವುದಲ್ಲದೆ ನಮ್ಮ ಮಣ್ಣು ಮತ್ತು ಪರಿಸರವನ್ನು ರಕ್ಷಿಸುತ್ತದೆ. ಜುಲೈ 10 ರಂದು ಸೂರತ್ನಲ್ಲಿ ನಡೆದ ಸಹಜ ಕೃಷಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ರೈತರು ಮುಂದೆ ಬಂದು ಸಹಜ ಕೃಷಿಯನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.**

ಗುಜರಾತ್‌ನ ಸೂರತ್‌ನಲ್ಲಿ ನಡೆದ ಸಹಜ ಕೃಷಿ ಕುರಿತ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು. 'ಸಹಜ ಕೃಷಿಯನ್ನು ಅಳವಡಿಸಿಕೊಳ್ಳುವುದೆಂದರೆ ಭೂಮಿ ತಾಯಿಯ ಸೇವೆ ಮಾಡಿದಂತೆ'ಎಂದು ಪ್ರಧಾನಿ ಮೋದಿ ಹೇಳಿದರು. ವಾಸ್ತವವಾಗಿ, ಭಾರತವು ಪ್ರಕೃತಿ ಮತ್ತು ಸಂಸ್ಕೃತಿಯಿಂದ ಕೃಷಿ ಆಧಾರಿತ ದೇಶವಾಗಿದೆ ಮತ್ತು ಸಹಜ ಕೃಷಿಗೆ ಸಂಬಂಧಿಸಿದ ಜನಾಂದೋಲನಗಳು ಮುಂಬರುವ ವರ್ಷಗಳಲ್ಲಿ ಬಹಳ ಯಶಸ್ವಿಯಾಗುತ್ತವೆ. ಇದೇ ಕಾರಣಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, "ನೀವು ಸಹಜ ಕೃಷಿ ಮಾಡುವಾಗ ಭೂಮಿ ತಾಯಿಯ ಸೇವೆ ಮಾಡುತ್ತೀರಿ, ಮಣ್ಣಿನ ಗುಣಮಟ್ಟ, ಭೂಮಿಯ ಆರೋಗ್ಯ, ಉತ್ಪಾದಕತೆ ಕಾಪಾಡುತ್ತೀರಿ. ನೀವು ಸಹಜ ಕೃಷಿಯನ್ನು ಅಳವಡಿಸಿಕೊಂಡಾಗ, ಗೋಮಾತೆಯ ಸೇವೆಯನ್ನು ಮಾಡುವ ಅವಕಾಶವನ್ನು ಪಡೆಯುತ್ತೀರಿ" ಎಂದು ಹೇಳಿದರು.

ಈ ಅಭಿಯಾನವು ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ವಿಸ್ತರಿಸುತ್ತಿರುವುದಕ್ಕೆ ನನಗೆ ಸಂತೋಷವಾಗಿದೆ ಎಂದು ಪ್ರಧಾನಿ ಹೇಳಿದರು. ಡಿಜಿಟಲ್ ಇಂಡಿಯಾದ ಮೂಲಕ, ದೇಶವು ಭವಿಷ್ಯದ ಭಾರತ, ಆಧುನಿಕ ಭಾರತ, ಸಮೃದ್ಧ ಮತ್ತು ಬಲಿಷ್ಠ ಭಾರತದ ಕಡೆಗೆ ವೇಗವಾಗಿ ಸಾಗುತ್ತಿದೆ, ಆ ದಿಕ್ಕಿನಲ್ಲಿ ಮುನ್ನಡೆಯಲು ಸಿದ್ಧತೆ ನಡೆಸುತ್ತಿದೆ. ಅಷ್ಟೇ ಅಲ್ಲ, ಮುಂದಿನ ಮೂರು-ನಾಲ್ಕು ವರ್ಷಗಳಲ್ಲಿ ಎಲೆಕ್ಟ್ರಾನಿಕ್ ಉತ್ಪಾದನೆಯನ್ನು 300 ಬಿಲಿಯನ್ ಡಾಲರ್‌ಗೆ ಹೆಚ್ಚಿಸುವ ಗುರಿಯೊಂದಿಗೆ ಭಾರತ ಕಾರ್ಯನಿರ್ವಹಿಸುತ್ತಿದೆ. ಭಾರತವು ಈಗ ಚಿಪ್ ಟೇಕರ್‌ನಿಂದ ಚಿಪ್ ಮೇಕರ್ ಆಗಲು ಬಯಸಿದೆ. ಸೆಮಿಕಂಡಕ್ಟರ್ ಉತ್ಪಾದನೆಯನ್ನು ಹೆಚ್ಚಿಸಲು ಭಾರತದಲ್ಲಿ ಹೂಡಿಕೆಯು ವೇಗವಾಗಿ ಹೆಚ್ಚುತ್ತಿದೆ ಎಂದು ಅವರು ಹೇಳಿದರು. ■

ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಅಮೃತ ಮಹೋತ್ಸವದಿಂದ ಸುವರ್ಣ ಯುಗದ ಕಡೆಗೆ











**ಸ್ವಾತಂತ್ರ್ಯದ 75ನೇ ವರ್ಷವನ್ನು ಸಂಭ್ರಮಾಚರಣೆ ಮಾಡುವ ಮೂಲಕ, ನವ ಭಾರತದ ಸಂಕಲ್ಪವನ್ನು ಸಾಕಾರಗೊಳಿಸಲು ಬದ್ಧವಾಗಿರುವ ಸರ್ಕಾರವು ಹೊಸ ಉಪಕ್ರಮಗಳು ಮತ್ತು ಕಾರ್ಯಕ್ರಮಗಳೊಂದಿಗೆ ದೇಶದ ಪ್ರಸ್ತುತ ಮತ್ತು ಭವಿಷ್ಯದ ಯೋಜನೆಗಳಿಗೆ ರೂಪು ನೀಡಿದೆ. ಆದ್ದರಿಂದ ದೇಶವು ಸ್ವಾತಂತ್ರ್ಯದ 100 ನೇ ವರ್ಷವನ್ನು ಆಚರಿಸುವಾಗ, ಪ್ರತಿಯೊಬ್ಬರ ಪ್ರಯತ್ನದಿಂದ ಸ್ವಾವಲಂಬಿ ಭಾರತದ ಕನಸು ನನಸಾಗಬಹುದು. ಆದರೆ ಸ್ವಾತಂತ್ರ್ಯದ ತಳಹದಿಯ ಮೇಲೆ ನಿರ್ಮಿಸಲಾದ ಈ ಭವ್ಯವಾದ ರಚನೆಯು ರಾಷ್ಟ್ರದ ಗಮ್ಯಸ್ಥಾನವಲ್ಲ; ಇದೊಂದು ಮಾರ್ಗವಾಗಿದೆ; ಇದು ನವ ಭಾರತದ ಆರಂಭವಾಗಿದೆ...**

**ಪ್ರಧಾನಿ ನರೇಂದ್ರ ಮೋದಿಯವರು 75ನೇ ಸ್ವಾತಂತ್ರ್ಯೋತ್ಸವವನ್ನು ಸಾರ್ವಜನಿಕ ಸಹಭಾಗಿತ್ವದ ಸಂಕಲ್ಪವನ್ನಾಗಿ ಪರಿವರ್ತಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿಯನ್ನು ಹೇಗೆ ವೇಗಗೊಳಿಸಿದ್ದಾರೆ ಎಂಬುದನ್ನು ತಿಳಿಯೋಣ. ಶ್ರೀಮಂತ ಪರಂಪರೆಯು ಹೊಸ ಅಸ್ಮಿತೆಗೆ ದಾರಿ ಮಾಡಿಕೊಡುತ್ತಿದೆ ಮತ್ತು "ಸಬ್ ಕಾ ಪ್ರಯಾಸ್" ಸುವರ್ಣ ಭಾರತಕ್ಕೆ ಅಡಿಪಾಯ ಹಾಕುತ್ತಿದೆ.**

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ, ಛತ್ತೀಸ್‌ಗಢದ ಬಿಲಾಸ್ಪುರದ ಲೋಖಂಡಿ ಗ್ರಾಮದ ಮಹಿಳೆಯರು ಪರಿಸರ ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ವಿಶಿಷ್ಟ ಮಾದರಿಯಾಗಿದ್ದಾರೆ. ಗ್ರಾಮದ ಸರಕಾರಿ ಬಂಜರು ಭೂಮಿಯಲ್ಲಿ ಮಳೆಗಾಲದಲ್ಲಿ ನೀರು ಸಂಗ್ರಹವಾಗುತ್ತಿತ್ತು. ಆದರೆ, ಸೂಕ್ತ ನಿರ್ವಹಣೆ ಇಲ್ಲದ ಕಾರಣ ನೀರು ಬೇಗ ಬತ್ತಿ ಹೋಗುತ್ತಿತ್ತು. ಆರು ತಿಂಗಳ ಪರಿಶ್ರಮದಿಂದ ಗ್ರಾಮದ 410 ಮಹಿಳೆಯರು ಜಲ ಸಹೇಲಿ ಸ್ವಸಹಾಯ ಸಂಘವನ್ನು ರಚಿಸಿ ಈ ಬರಡು ಭೂಮಿಯಲ್ಲಿ ಕೆರೆ ನಿರ್ಮಿಸಿದ್ದಾರೆ. ಅದರಲ್ಲಿ ಈಗ ಮಳೆ ನೀರು ಸಂಗ್ರಹವಾಗತೊಡಗಿದೆ. ಇದರಲ್ಲಿ ಬಾತುಕೋಳಿ ಹಾಗೂ ಮೀನುಗಳನ್ನು ಸಾಕುತ್ತಿದ್ದಾರೆ. ಇದರಿಂದ ಬರುವ ಆದಾಯದಲ್ಲಿ ಶೇ.30 ರಷ್ಟನ್ನು ಗ್ರಾಮದ ಅಭಿವೃದ್ಧಿಗೆ ವಿನಿಯೋಗಿಸಲು ನಿರ್ಧರಿಸಲಾಗಿದೆ.

ಅದೇ ರೀತಿ ಹರಿಯಾಣದ ಯಮುನಾನಗರದಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಆರಂಭಗೊಂಡ ವಾಚನ ಕೌಶಲ್ಯ ಕಾರ್ಯಕ್ರಮ ಸಕಾರಾತ್ಮಕ ಫಲಿತಾಂಶ ನೀಡಲಾರಂಭಿಸಿದೆ. ಮಕ್ಕಳನ್ನು ಅಧ್ಯಯನದಲ್ಲಿ ತೊಡಗಿಸಲು ಆರಂಭಿಸಿದ ಉಪಕ್ರಮವು ಈಗ ಮುನ್ನಡೆಯುತ್ತಿದೆ. ಸರ್ಕಾರಿ ಶಾಲೆಗಳ ಮಕ್ಕಳು ಈಗ ಶಾಲೆಯ ಹೊರಗೆ ಜ್ಞಾನವನ್ನು ಹೆಚ್ಚಿಸುವ ಪುಸ್ತಕಗಳನ್ನು ಓದುವ ಮೂಲಕ ಸಾಂಪ್ರದಾಯಿಕ ಶಿಕ್ಷಣವನ್ನು ಮೀರಿ ತಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳುತ್ತಿದ್ದಾರೆ. ಸರ್ಕಾರಿ ಶಾಲೆಗಳ ಮಕ್ಕಳನ್ನು ಶಿಕ್ಷಣ ಕ್ಷೇತ್ರದಲ್ಲಿ ಮೇಲ್ದರ್ಜೆಗೇರಿಸಲು ಓದುವ ಕೌಶಲ್ಯ ಕಾರ್ಯಕ್ರಮ ಆರಂಭಿಸಲು ನಿರ್ಧರಿಸಲಾಯಿತು. 3ರಿಂದ 8ನೇ ತರಗತಿವರೆಗಿನ ಎಲ್ಲ ಮಕ್ಕಳಿಗೆ ಗ್ರಂಥಾಲಯದಲ್ಲಿ ಪ್ರತಿ ದಿನ ಅರ್ಧ ಗಂಟೆ ಕಾಲಾವಕಾಶ ನೀಡಲಾಗಿದ್ದು, ಶಿಕ್ಷಕರ ಮಾರ್ಗದರ್ಶನದಲ್ಲಿ ಅವರು ಓದುತ್ತಿದ್ದಾರೆ. ಕೆಲವು ಮಕ್ಕಳು ಕವಿತೆ, ಕೆಲವು ಮಕ್ಕಳ ಕಥೆಗಳು ಅಥವಾ ಕೆಲವರು ಇತರ ಪುಸ್ತಕಗಳಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಮಕ್ಕಳು ಪುಸ್ತಕಗಳನ್ನು ಓದಿದ ನಂತರ, ಬೆಳಗ್ಗೆ ಪ್ರಾರ್ಥನಾ ಸಭೆಯಲ್ಲಿ ತಾವು ಓದಿದ ಪುಸ್ತಕಗಳ ಬಗ್ಗೆ ವಿವರಿಸುತ್ತಾರೆ.


ಈ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿರುವ ಬರವಣಿಗೆ ಮತ್ತು ಓದುವ ಪ್ರತಿಭೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಹರಿಯಾಣದ ಕುರುಕ್ಷೇತ್ರದ ಕಿರ್‌ಮಚ್ ಗ್ರಾಮದಲ್ಲಿ ಅಮೃತ ಸರೋವರ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದಕ್ಕಾಗಿ 1.26 ಕೋಟಿ ರೂ. ಬಜೆಟ್ ಮೀಸಲಿಡಲಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಐತಿಹಾಸಿಕ ಕೊಳಗಳನ್ನು ಪುನಃಸ್ಥಾಪಿಸಲು ಮತ್ತು ಸುಂದರಗೊಳಿಸಲು ಅಮೃತ ಸರೋವರ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಅಮೃತ ಸರೋವರ ಯೋಜನೆಯಿಂದ ಪ್ರತಿ ಹನಿ ನೀರನ್ನು ಉಳಿಸಲು ಪ್ರಯತ್ನ ಮಾಡಲಾಗುತ್ತದೆ ಮತ್ತು ಈ ಸರೋವರಗಳು ನಿಸ್ಸಂದೇಹವಾಗಿ ಮುಂದಿನ ತಲೆಮಾರಿಗೆ ಶುದ್ಧ ನೀರಿನ ಉಡುಗೊರೆಯನ್ನು ನೀಡುತ್ತವೆ. ಅಮೃತ ಮಹೋತ್ಸವ ಸರಣಿಯ ಭಾಗವಾಗಿ "ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧ"ವನ್ನು ಬೆಂಬಲಿಸಲು ರಾಜಸ್ಥಾನ ಜೀಪ್ ಕ್ಲಬ್ ಜುಲೈ 1 ರಂದು ಅಮರ್ ಜವಾನ್ ಜ್ಯೋತಿಯಲ್ಲಿ ಪ್ರತಿಜ್ಞೆ ಕಾರ್ಯಕ್ರಮವನ್ನು ಆಯೋಜಿಸಿತ್ತು. ಜುಲೈ 1

# ಸೇವೆ, ಸಮರ್ಪಣೆ ಮತ್ತು ಸಂಕಲ್ಪದ ಅಮೃತ




**ವಿಶ್ವದ ಅತಿ ದೊಡ್ಡ ಮತ್ತು ವೇಗವಾದ ಕೋವಿಡ್ ಲಸಿಕಾ ಅಭಿಯಾನ**

- "ಭಾರತದ ಜನರು ಒಮ್ಮೆ ಏನನ್ನಾದರೂ ಮಾಡಲು ನಿರ್ಧರಿಸಿದರೆ, ಅವರಿಗೆ ಯಾವುದೂ ಅಸಾಧ್ಯವಲ್ಲ,"ಎಂದು ಪ್ರಧಾನಿ ನರೇಂದ್ರ ಮೋದಿ ಒಮ್ಮೆ ಹೇಳಿದ್ದರು. 200 ಕೋಟಿ ಲಸಿಕೆ ಡೋಸ್‌ಗಳ ಅಸಾಧಾರಣ ಗುರಿಯನ್ನು ತಲುಪುವ ಮೂಲಕ ದೇಶವು ಪ್ರಧಾನಿಯವರ ವಿಶ್ವಾಸವನ್ನು ಗಳಿಸಿರುವುದು ಮಾತ್ರವಲ್ಲದೆ, ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವವನ್ನು ಸ್ಮರಣೀಯವಾಗಿಸಿದೆ. ವಸುಧೈವ ಕುಟುಂಬಕಂ ತತ್ವವನ್ನು ಅನುಸರಿಸಿ ಲಸಿಕೆ ಮೈತ್ರಿ ಅಡಿಯಲ್ಲಿ ಭಾರತವು ಜಗತ್ತಿಗೆ 24 ಕೋಟಿ ಲಸಿಕೆ ಡೋಸ್‌ಗಳನ್ನು ಪೂರೈಸಿದೆ.
- ವಿಶ್ವದ ಅತಿ ದೊಡ್ಡ ಮತ್ತು ವೇಗದ ಲಸಿಕೆ ಅಭಿಯಾನದ ದಾಖಲೆಗಳು ಒಂದೇ ದಿನದಲ್ಲಿ 25 ಕೋಟಿ ಲಸಿಕೆ ಡೋಸ್‌ಗಳನ್ನು ನೀಡಿರುವುದನ್ನೂ ಒಳಗೊಂಡಿವೆ. ವಿಶ್ವದ ಅತಿದೊಡ್ಡ ಡಿಜಿಟಲ್ ಲಸಿಕಾ ಅಭಿಯಾನವು ಈಗ ಕೋವಿನ್ ಅಪ್ಲಿಕೇಶನ್‌ನಲ್ಲಿ 110 ಕೋಟಿ.
  ನೋಂದಾವಣೆ ಮೂಲಕ ಹೊಸ ದಾಖಲೆಯನ್ನು ಮಾಡಿದೆ. ಮೊದಲ ಡೋಸ್ ಅನ್ನು 18 ವರ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆಯ ಶೇಕಡಾ 98 ರಷ್ಟು ಮಂದಿ ಪಡೆದಿದ್ದಾರೆ. ಎರಡನೇ ಡೋಸ್ ಅನ್ನು 18 ವರ್ಷಕ್ಕಿಂತ ಮೇಲ್ಪಟ್ಟ ಶೇಕಡಾ 90 ರಷ್ಟು ಜನರು ಸ್ವೀಕರಿಸಿದ್ದಾರೆ. ಮತ್ತೊಂದೆಡೆ, ಶೇ.100 ರಷ್ಟು ಸಾಧನೆಯನ್ನು ಮೊದಲ ಡೋಸ್ ನಲ್ಲಿ 16 ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು, ಮತ್ತು ಎರಡನೇ ಡೋಸ್ ನಲ್ಲಿ 11 ರಾಜ್ಯಗಳು ಮಾಡಿವೆ.




**ಒಂದೂವರೆ ವರ್ಷದಲ್ಲಿ ಭಾರತ 200 ಕೋಟಿ ಡೋಸ್ ಲಸಿಕೆ ನೀಡುವ ಮೂಲಕ ದಾಖಲೆ ಮಾಡಿದೆ**

**6.55 ಕೋಟಿ ಕೊಳಾಯಿ ಸಂಪರ್ಕಗಳು**
ಆಗಸ್ಟ್ 2019 ರಿಂದ ಇಲ್ಲಿಯವರೆಗೆ ಜಲ ಜೀವನ್ ಮಿಷನ್ ಅಡಿಯಲ್ಲಿ.

**ಪ್ರಧಾನ ಮಂತ್ರಿಯವರ ವಸತಿ ಯೋಜನೆ**
ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ 3 ಕೋಟಿಗೂ ಹೆಚ್ಚು ನಗರ ಮತ್ತು ಗ್ರಾಮೀಣ ಮನೆಗಳನ್ನು ಅನುಮೋದಿಸಲಾಗಿದೆ.

**11.5 ಕೋಟಿ ಶೌಚಾಲಯಗಳು**
ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ 11.5 ಕೋಟಿ ಶೌಚಾಲಯಗಳ ನಿರ್ಮಾಣ.

**ಸ್ಟ್ಯಾಂಡ್ ಅಪ್ ಇಂಡಿಯಾ**
ಎಸ್‌ಸಿ ಮತ್ತು ಎಸ್‌ಟಿ ಫಲಾನುಭವಿಗಳಿಗೆ 5,300 ಕೋಟಿ ರೂ.ಗೂ ಅಧಿಕ ಸಾಲ.

**12.89 ಕೋಟಿ**
ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆಯ ಪ್ರಯೋಜನವನ್ನು ಪಡೆದವರು.

**ಏಕಲವ್ಯ ವಸತಿ ಶಾಲೆ**
2014ಕ್ಕಿಂತ ಐದು ಪಟ್ಟು ಹೆಚ್ಚು ಏಕಲವ್ಯ ವಸತಿ ಶಾಲೆಗಳಿಗೆ ಅನುಮೋದನೆ ನೀಡಲಾಗಿದೆ.

ಸುಮಾರು **35** ಕೋಟಿ ಸಣ್ಣ ಉದ್ಯಮಿಗಳು ತಮ್ಮ ವ್ಯಾಪಾರ ಅಭಿವೃದ್ಧಿಗಾಗಿ ಮುದ್ರಾ ಯೋಜನೆಯಡಿ ಸಾಲ ಪಡೆದಿದ್ದಾರೆ.

ರಿಂದ ಈ ವಸ್ತುಗಳ ತಯಾರಿಕೆ, ಮಾರಾಟ, ಸಂಗ್ರಹ ಮತ್ತು ರಫ್ತು ಮಾಡುವುದನ್ನು ನಿಷೇಧಿಸಲಾಗಿದೆ. ಏಕ-ಬಳಕೆಯ ಪ್ಲಾಸ್ಟಿಕ್ ತ್ಯಾಜ್ಯದಿಂದ ಉಂಟಾಗುವ ಮಾಲಿನ್ಯವನ್ನು ಕಡಿಮೆ ಮಾಡುವ ಸಲುವಾಗಿ ಈ ನಿಷೇಧವನ್ನು ಜಾರಿಗೊಳಿಸಲಾಗಿದೆ. ಏಕ-ಬಳಕೆಯ ಪ್ಲಾಸ್ಟಿಕ್ ಎಂದರೆ ನಾವು ಒಮ್ಮೆ ಮಾತ್ರ ಬಳಸಬಹುದಾದ ಅಥವಾ ತ್ಯಜಿಸಬಹುದಾದ ಮತ್ತು ಪರಿಸರಕ್ಕೆ ಹಾನಿ ಮಾಡುವ ಪ್ಲಾಸ್ಟಿಕ್ ವಸ್ತುಗಳಾಗಿವೆ. ಪ್ಲಾಸ್ಟಿಕ್ ಚೀಲಗಳ ಬದಲಿಗೆ ಹತ್ತಿ ಬಟ್ಟೆಯ ಚೀಲಗಳನ್ನು ಬಳಸಬಹುದು.

ಇಂತಹ ಅಸಂಖ್ಯಾತ ಬದಲಾವಣೆಯ ಕಥೆಗಳು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಮುನ್ನಡೆಸುತ್ತಿವೆ. ಸ್ವಾತಂತ್ರ್ಯ ಚಳವಳಿಯಲ್ಲಿ ಸಾರ್ವಜನಿಕರ ಹೆಚ್ಚಿನ ಭಾಗವಹಿಸುವಿಕೆ ಕಂಡುಬಂದಿತ್ತು ಹಾಗು ಚರಕ ಮತ್ತು ಉಪ್ಪಿನಂತಹ ಚಿಹ್ನೆಗಳು ಸ್ವಾತಂತ್ರ್ಯ ಹೋರಾಟದೊಂದಿಗೆ ಜನರನ್ನು ಬೆಸೆಯಲು ನೆರವಾಗಿದ್ದವು.

- ಮಾನ್ಯತೆ ಪಡೆದ ಸ್ಟಾರ್ಟ್‌ಅಪ್‌ಗಳ ಸಂಖ್ಯೆ 73,079.
- ಟೋಕಿಯೊ 2020 ಒಲಿಂಪಿಕ್ಸ್‌ನಲ್ಲಿ ಇದುವರೆಗಿನ ಅತ್ಯುತ್ತಮ ಒಲಿಂಪಿಕ್ (7 ಪದಕಗಳು) ಮತ್ತು ಪ್ಯಾರಾಲಿಂಪಿಕ್ (19 ಪದಕಗಳು) ಕ್ರೀಡಾ ಸಾಧನೆ
- 2022 ರ ವೇಳೆಗೆ 7 ಹೊಸ ಐಐಎಂಗಳನ್ನು ಸ್ಥಾಪಿಸಲಾಗುವುದು. ಒಟ್ಟು ಸಂಖ್ಯೆ 20
- 22 ಏಮ್ಸ್‌ಗಳೊಂದಿಗೆ, ಭಾರತದಲ್ಲಿನ ಏಮ್ಸ್‌ಗಳ ಸಂಖ್ಯೆ ಶೀಘ್ರದಲ್ಲೇ ಮೂರು ಪಟ್ಟು ಹೆಚ್ಚಾಗಲಿದೆ.
- 2017-2021ರ ನಡುವೆ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳಿಂದ 23 ಲಕ್ಷ ನೇರ ಮತ್ತು ಪರೋಕ್ಷ ಉದ್ಯೋಗಗಳ ಸೃಷ್ಟಿ.
- ದೇಶದಲ್ಲಿ 7 ಹೊಸ ಐಐಟಿಗಳ ಸ್ಥಾಪನೆ, ಈಗ ಒಟ್ಟು 23 ಐಐಟಿಗಳು.
- 320 ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ.
- 1,000 ಖೇಲೋ ಇಂಡಿಯಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.
- ಉಮಂಗ್ ಅಪ್ಲಿಕೇಶನ್ ಮೂಲಕ 20,522 ಕ್ಕೂ ಹೆಚ್ಚು ಸರ್ಕಾರಿ ಸೇವೆಗಳಿಗೆ ಪ್ರವೇಶ.
- 2014 ರಲ್ಲಿ 5 ನಗರಗಳಲ್ಲಿದ್ದ ಮೆಟ್ರೋ ಈಗ (2022) 27 ನಗರಗಳಿಗೆ ಏರಿಕೆಯಾಗಿದೆ.
- 4,371 ನಗರಗಳಿಗೆ ಒಡಿಎಫ್ ಸ್ಥಾನಮಾನ.
- ಅಮೃತ್ ಅಡಿಯಲ್ಲಿ 4268 ನಗರಾಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ.
- 2014 ರಿಂದ ನಿರ್ಮಿಸಲಾದ ಗ್ರಾಮೀಣ ರಸ್ತೆಗಳು 3.26 ಲಕ್ಷ ಕಿ.ಮೀ.
- ರಾಷ್ಟ್ರೀಯ ಜಲಮಾರ್ಗ ಕಾಯ್ದೆ 2016 ರ ಅಡಿಯಲ್ಲಿ 111 ಜಲಮಾರ್ಗಗಳನ್ನು ರಾಷ್ಟ್ರೀಯ ಜಲಮಾರ್ಗಗಳೆಂದು ಘೋಷಿಸಲಾಗಿದೆ.
- 2014 ರಿಂದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಬಜೆಟ್ ಹಂಚಿಕೆಯಲ್ಲಿ ಶೇ.500 ಹೆಚ್ಚಳ.
- 34 ತಿಂಗಳಲ್ಲಿ ಒಬ್ಬರೇ ಒಬ್ಬ ರೈಲು ಪ್ರಯಾಣಿಕರು ಸತ್ತಿಲ್ಲ.
- ಹೆದ್ದಾರಿ ನಿರ್ಮಾಣದ ವೇಗವು ದಿನಕ್ಕೆ 37 ಕಿಮೀ ತಲುಪಿದೆ.
- 8,727 ಕ್ಕೂ ಹೆಚ್ಚು ಜನ ಔಷಧಿ ಕೇಂದ್ರಗಳು.
- 5 ಕೋಟಿಗೂ ಅಧಿಕ ತಾಯಂದಿರು ಮತ್ತು ಮಕ್ಕಳಿಗೆ ಮಿಷನ್ ಇಂದ್ರಧನುಷ್ ಲಸಿಕೆಗಳ ರಕ್ಷಣೆ.
- ರಕ್ಷಣಾ ರಫ್ತು 6 ಪಟ್ಟು ಹೆಚ್ಚಾಗಿದೆ.
- ಉಕ್ರೇನ್‌ನಿಂದ 22,500 ಭಾರತೀಯರು ಸುರಕ್ಷಿತವಾಗಿ ದೇಶಕ್ಕೆ ಮರಳಿದ್ದಾರೆ
- ಲಾಕ್‌ಡೌನ್ ಸಮಯದಲ್ಲಿ 20 ಕೋಟಿ ಮಹಿಳೆಯರ ಖಾತೆಗೆ ನಗದು ವರ್ಗಾವಣೆಯಾಗಿದೆ.
- 4.63 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳು ಡಿಜಿಟಲ್ ಇಂಡಿಯಾ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.
- ವಿಶ್ವದ ಅತಿ ದೊಡ್ಡ ಸೋಲಾರ್ ಪಾರ್ಕ್ ರಾಜಸ್ಥಾನದ ಭಾದ್‌ಲಾದಲ್ಲಿ ಪ್ರಾರಂಭವಾಗಿದೆ. ಸಾಮರ್ಥ್ಯ: 2,200 ಮೆ.ವ್ಯಾ.
- ಜನೌಷಧಿ ಕೇಂದ್ರಗಳಲ್ಲಿ 21 ಕೋಟಿಗೂ ಹೆಚ್ಚು ಸ್ಯಾನಿಟರಿ ಪ್ಯಾಡ್‌ಗಳನ್ನು 1 ರೂ.ಗೆ ದೊರೆಯುವಂತೆ ಮಾಡಲಾಗಿದೆ.

ಉಡಾನ್ ಯೋಜನೆಯಡಿಯಲ್ಲಿ 1 ಕೋಟಿಗೂ ಹೆಚ್ಚು ಜನರು ಕಡಿಮೆ ದರದ ವಿಮಾನ ಪ್ರಯಾಣದ ಪ್ರಯೋಜನ ಪಡೆದಿದ್ದಾರೆ.

ಭಾರತ್ ನೆಟ್ ಅಡಿಯಲ್ಲಿ, ದೇಶಾದ್ಯಂತ 5.67 ಲಕ್ಷ ಕಿಮೀ ಆಪ್ಟಿಕಲ್ ಫೈಬರ್ ಕೇಬಲ್ ಹಾಕಲಾಗಿದೆ.

ಪ್ರಧಾನಮಂತ್ರಿ ಗತಿಶಕ್ತಿ ಮಾಸ್ಟರ್ ಪ್ಲಾನ್ ಜೊತೆಗೆ ಮೂಲಸೌಕರ್ಯಕ್ಕಾಗಿ 100 ಲಕ್ಷ ಕೋಟಿ ರೂ.

ಆಯುಷ್ಮಾನ್ ಭಾರತ್ ಅಡಿಯಲ್ಲಿ 17.9 ಕೋಟಿ ಜನರು ಆರೋಗ್ಯ ಕಾರ್ಡ್ ಪಡೆದಿದ್ದಾರೆ. 22 ಕೋಟಿಗೂ ಹೆಚ್ಚು ಡಿಜಿಟಲ್ ಹೆಲ್ತ್ ಐಡಿಗಳನ್ನು ರಚಿಸಲಾಗಿದೆ.

45.21 ಕೋಟಿ ಜನ್ ಧನ್ ಖಾತೆಗಳನ್ನು ತೆರೆಯಲಾಗಿದೆ. ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಯಲ್ಲಿ 28.61 ಕೋಟಿ ಜನರನ್ನು ಸೇರಿಸಲಾಗಿದೆ.

ಪಿಎಂ ಕಿಸಾನ್ ಯೋಜನೆಯಡಿ 11.78 ಕೋಟಿ ರೈತರು ಲಾಭ ಪಡೆದಿದ್ದಾರೆ. 23 ಕೋಟಿ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಸ್ವಚ್ಛ ಪರಿಸರಕ್ಕಾಗಿ, ಭಾರತವು 2070 ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವಿಕೆಯನ್ನು ಸಾಧಿಸಲು ಪಣ ತೊಟ್ಟಿದೆ.

ಸೌರ ಶಕ್ತಿಯ ಸ್ಥಾಪಿತ ಸಾಮರ್ಥ್ಯವು 2014 ರಿಂದ ಶೇ.1,900 ಹೆಚ್ಚಾಗಿದೆ. ಸೌರ ಶಕ್ತಿ ದರಗಳಲ್ಲಿ ಸುಮಾರು ಶೇ.70 ಕಡಿತವಾಗಿದೆ.

75 ವರ್ಷಗಳ ಸ್ವಾತಂತ್ರ್ಯವನ್ನು ಅಮೃತ ಮಹೋತ್ಸವವಾಗಿ ಆಚರಿಸುವ ಭಾರತ ಸರ್ಕಾರದ ನಿರ್ಧಾರವು ಒಂದು ಸಂಕೇತವಾಗಿ ಮಾರ್ಪಟ್ಟಿದೆ, ಅದು ಈಗ ಅಮೃತ ಯಾತ್ರೆಯಿಂದ ಸುವರ್ಣ ವರ್ಷದವರೆಗೆ ರಾಷ್ಟ್ರವನ್ನು ನವ ಭಾರತವನ್ನಾಗಿ ಮಾಡುವತ್ತ ಸಾಗುತ್ತಿದೆ. ಆಜಾದಿ ಕಾ ಅಮೃತ ಮಹೋತ್ಸವವು ಈಗ ಶಕ್ತಿಯ ಅಮೃತವಾಗಿ, ಹೊಸ ಆಲೋಚನೆಗಳ ಅಮೃತವಾಗಿ, ಹೊಸ ಸಂಕಲ್ಪಗಳ ಅಮೃತವಾಗಿ ಮತ್ತು ಸ್ವಾವಲಂಬನೆಯ ಅಮೃತವಾಗಿ ಮಾರ್ಪಟ್ಟಿದೆ. ಭಾರತವು ಅಮೃತ ಮಹೋತ್ಸವ ವರ್ಷದಲ್ಲಿ ಅಡಿಪಾಯ ಹಾಕುವ ಮೂಲಕ ಭವ್ಯ ಮತ್ತು ದಿವ್ಯವಾದ ರಾಷ್ಟ್ರವನ್ನು ನಿರ್ಮಿಸುವ ಅಭಿವೃದ್ಧಿಯ ಪ್ರಯಾಣವನ್ನು ಪ್ರಾರಂಭಿಸಿದೆ, ಇದರಿಂದಾಗಿ ಅಮೃತ ಕಾಲದ ಅಭಿವೃದ್ಧಿಯ ಪ್ರಯಾಣವು ಭವಿಷ್ಯದ ಭಾರತದ ಶ್ರೀಮಂತ ಮತ್ತು ವೈಭವಯುತ

# ಅಮೃತ ವರ್ಷದಲ್ಲಿ ಹೊಸ ಸಂಕಲ್ಪಗಳೊಂದಿಗೆ ಹೊಸ ಪ್ರಯಾಣದ ಆರಂಭ

## ಪ್ರಧಾನ ಮಂತ್ರಿ ಗತಿಶಕ್ತಿ



ಮೊದಲ ಬಾರಿಗೆ 16 ಸಚಿವಾಲಯಗಳು ಮತ್ತು ಇಲಾಖೆಗಳನ್ನು ಡಿಜಿಟಲ್ ಮಾಧ್ಯಮಗಳೊಂದಿಗೆ ಸಂಪರ್ಕಿಸುವ ಮೂಲಕ ಅಭಿವೃದ್ಧಿ ಯೋಜನೆಗಳಲ್ಲಿ ವಿಳಂಬವನ್ನು ತಡೆಯುವ ಮತ್ತು ಸರ್ಕಾರದಲ್ಲಿ ಉತ್ತಮ ಸಮನ್ವಯವನ್ನು ಸಾಧಿಸುವ ಗುರಿಯೊಂದಿಗೆ ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅನ್ನು ಪ್ರಾರಂಭಿಸಲಾಗಿದೆ. ದೇಶದ ಯಾವ ಪ್ರದೇಶದಲ್ಲಾದರೂ ನಿರ್ಮಿಸುವ ಪ್ರತಿಯೊಂದು ಮೂಲಸೌಕರ್ಯ ಯೋಜನೆಗಳು ಇದರ ವ್ಯಾಪ್ತಿಗೆ ಬರುತ್ತವೆ. ಈ ಯೋಜನೆಯು ಸರ್ಕಾರವು 2024-2025 ರ ವೇಳೆಗೆ ಸಾಧಿಸಲು ಬಯಸುತ್ತಿರುವ ಹಲವಾರು ಮಹತ್ವಾಕಾಂಕ್ಷೆಯ ಗುರಿಗಳನ್ನು ಪೂರೈಸುತ್ತದೆ. ಈ ಮಾಸ್ಟರ್ ಪ್ಲಾನ್ 100 ಲಕ್ಷ ಕೋಟಿ ರೂ.ಮೌಲ್ಯದ ರಾಷ್ಟ್ರೀಯ ಮೂಲಸೌಕರ್ಯ ಪೈಪ್ಲೈನ್ ಯೋಜನೆಯನ್ನೂ ಒಳಗೊಂಡಿದೆ

## ಹೊಸ ಎತ್ತರಕ್ಕೇರುವ ಸಹಕಾರಿ ಸಂಸ್ಥೆಗಳು

ಸಹಕಾರಿ ಸಂಸ್ಥೆಗಳನ್ನು ಅಭಿವೃದ್ಧಿಯ ಅಗತ್ಯ ಭಾಗಗಳನ್ನಾಗಿ ಮಾಡುವ ಗುರಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಮೊದಲ ಬಾರಿಗೆ ಸಹಕಾರ ಸಚಿವಾಲಯವನ್ನು ರಚಿಸಿದರು. 'ಸಹಕಾರ್ ಸೇ ಸಮೃದ್ಧಿ' ಮಂತ್ರವನ್ನು ಗಮನದಲ್ಲಿಟ್ಟುಕೊಂಡು ರಚಿಸಲಾದ ಈ ಸಚಿವಾಲಯವು ನಿಜವಾದ ಸಾರ್ವಜನಿಕ ಸಹಭಾಗಿತ್ವ ಆಧಾರಿತ ಆಂದೋಲನವನ್ನು ಬೆಂಬಲಿಸುತ್ತದೆ.

## ಆಯುಷ್ಮಾನ್ ಭಾರತ್ ಡಿಜಿಟಲ್ ಹೆಲ್ತ್ ಮಿಷನ್

ಪ್ರತಿಯೊಬ್ಬ ನಾಗರಿಕನ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಯು ಡಿಜಿಟಲ್ ರೂಪದಲ್ಲಿ ಲಭ್ಯವಿರುತ್ತದೆ. 27 ಸೆಪ್ಟೆಂಬರ್ 2021 ರಿಂದ ಈ ಯೋಜನೆಯನ್ನು ದೇಶಾದ್ಯಂತ ಜಾರಿಗೆ ತರಲಾಗಿದೆ. ಆಧಾರ್ ಕಾರ್ಡ್ ಆಧಾರದಲ್ಲಿ, ಈ ಕಾರ್ಡ್ ವ್ಯಕ್ತಿಯ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಹೊಂದಿರುತ್ತದೆ, ಇದನ್ನು ಒಂದೇ ಕ್ಲಿಕ್‌ನಲ್ಲಿ ವಿಶಿಷ್ಟ ಗುರುತಿನೊಂದಿಗೆ ನಿರ್ಣಯಿಸಲು ಸಾಧ್ಯವಾಗುತ್ತದೆ. ಸುಮಾರು 22 ಕೋಟಿ ಆರೋಗ್ಯ ಖಾತೆಗಳನ್ನು ತೆರೆಯಲಾಗಿದೆ.

## ಅಗ್ನಿಪಥ ಯೋಜನೆ

ಬಲಿಷ್ಠ ಸೇನೆ ಮತ್ತು ಬಲಿಷ್ಠ ರಾಷ್ಟ್ರದ ಮನೋಭಾವದೊಂದಿಗೆ, ಈ ಯೋಜನೆಯನ್ನು ಜೂನ್ 16, 2022 ರಂದು ಘೋಷಿಸಲಾಯಿತು. 18 ಪ್ರತಿಶತದಷ್ಟು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶದ ಸೈನ್ಯವು ತಾರುಣ್ಯದಿಂದ ಕೂಡಿರಬೇಕು. ಯೋಜನೆಯ ಘೋಷಣೆಯ ನಂತರ ಮೊದಲ ನೇಮಕಾತಿ ಪ್ರಕ್ರಿಯೆಯಲ್ಲಿ 46,000 ಅಗ್ನಿವೀರರನ್ನು 4 ವರ್ಷಗಳವರೆಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಅಗ್ನಿವೀರರ ನೇಮಕಾತಿಯನ್ನು ಕ್ರಮೇಣ ಹೆಚ್ಚಿಸಲಾಗುವುದು. ಇದರಲ್ಲಿ ಶೇ.25ರಷ್ಟು ಅಗ್ನಿವೀರರನ್ನು ಸೇನೆಯಲ್ಲಿ ಕಾಯಂ ನೇಮಕಾತಿ ಮಾಡಿಕೊಳ್ಳಲಾಗುವುದು.

## ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್




ದೇಶದ ಆರೋಗ್ಯ ವ್ಯವಸ್ಥೆಯನ್ನು ತಾಲ್ಲೂಕು ಮಟ್ಟದಿಂದ ಜಿಲ್ಲೆ-ರಾಜ್ಯ ಮತ್ತು ಕೇಂದ್ರ ಮಟ್ಟದವರೆಗೆ ಸುಧಾರಿಸಲು, ಪ್ರಧಾನಿ ನರೇಂದ್ರ ಮೋದಿ ಅವರು ಅಕ್ಟೋಬರ್ 25, 2021 ರಂದು ವಾರಾಣಸಿಯಲ್ಲಿ ಈ ಯೋಜನೆಗೆ ಚಾಲನೆ ನೀಡಿದರು. ಈ ಯೋಜನೆಗೆ ಐದು ವರ್ಷಗಳಲ್ಲಿ 64 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದು. ಈ ಯೋಜನೆಯಡಿ ಉತ್ತರ ಪ್ರದೇಶದ 75 ಜಿಲ್ಲೆಗಳಲ್ಲಿ ಕ್ರಿಟಿಕಲ್ ಕೇರ್ ಬ್ಲಾಕ್ಗಳನ್ನು ನಿರ್ಮಿಸಲಾಗುವುದು.

ಪರಂಪರೆಯಾಗುತ್ತದೆ. ಸ್ವಾತಂತ್ರ್ಯೋತ್ಸವಕ್ಕೆ 75 ವಾರಗಳ ಮೊದಲು ಅಂದರೆ ಮಾರ್ಚ್ 12, 2021 ರಂದು ದಾಂಡಿ ಯಾತ್ರೆಯ ವಾರ್ಷಿಕೋತ್ಸವದಂದು ಪ್ರಾರಂಭವಾದ ಈ ಅಮೃತ ಮಹೋತ್ಸವದ ಉದ್ದೇಶವು ತುಂಬಾ ಪವಿತ್ರವಾಗಿತ್ತು. 130 ಕೋಟಿ ದೇಶವಾಸಿಗಳು ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಸೇರಿದಾಗ, ಅವರು ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಂದ ಸ್ಫೂರ್ತಿ ಪಡೆಯುತ್ತಾರೆ ಮತ್ತು ಶ್ರೇಷ್ಠ ಗುರಿಗಳನ್ನು ಸಾಧಿಸುವ ಬಯಕೆ ಬಲವಾಗುತ್ತದೆ. ಈ 75ನೇ ಸ್ವಾತಂತ್ರ್ಯ ವರ್ಷಾಚರಣೆ ಇಂದಿನ ಪೀಳಿಗೆಗೆ ಸಂಜೀವಿನಿಯಂತಿದೆ. ದೇಶಕ್ಕಾಗಿ ಬದುಕಲು ಮತ್ತು ದೇಶಕ್ಕೆ ಕೊಡುಗೆ ನೀಡಲು ಜನರನ್ನು ಪ್ರೇರೇಪಿಸುವ ಅಮೃತವಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವವು ವರ್ಷಗಟ್ಟಲೆಯ

## ಸೈನಿಕ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರವೇಶ



2021-2022ರ ಶೈಕ್ಷಣಿಕ ವರ್ಷದಿಂದ ಸೈನಿಕ ಶಾಲೆಗಳಲ್ಲಿ ಬಾಲಕಿಯರ ಪ್ರವೇಶವನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಅದೇ ರೀತಿ, 2021 ರ ನವೆಂಬರ್‌ನಲ್ಲಿ ಮೊದಲ ಬಾರಿಗೆ ಎನ್‌ಡಿಎ ಪರೀಕ್ಷೆಯಲ್ಲಿ ಹೆಣ್ಣುಮಕ್ಕಳು ಅವಕಾಶ ಪಡೆದರು. ಇದರಲ್ಲಿ ಹರಿಯಾಣದ ಶಾನನ್ ಮಹಿಳಾ ತಂಡದಲ್ಲಿ ಅಗ್ರಸ್ಥಾನ ಪಡೆದರು.

## ಪಿಎಂ ಪೋಷಣಾ ಯೋಜನೆ

11.20 ಲಕ್ಷ ಶಾಲೆಗಳ 11.80 ಕೋಟಿ ಮಕ್ಕಳು ಈ ಯೋಜನೆಯಡಿ ಬರುತ್ತಾರೆ. 29 ಸೆಪ್ಟೆಂಬರ್ 2021 ರಂದು ಪ್ರಾರಂಭವಾದ ಈ ಯೋಜನೆಯಲ್ಲಿ ಈಗ ಪೌಷ್ಟಿಕಾಂಶವುಳ್ಳ ಸಾರವರ್ಧಿತ ಅಕ್ಕಿ ನೀಡಲು ನಿರ್ಧರಿಸಲಾಗಿದೆ. ಈ ಯೋಜನೆಯ ಬಜೆಟ್ 1.30 ಲಕ್ಷ ಕೋಟಿ ರೂ.

## ಅಣೆಕಟ್ಟು ಸುರಕ್ಷತಾ ಕಾಯಿದೆ

ದೇಶದಲ್ಲಿನ ಅಣೆಕಟ್ಟುಗಳು ಸುರಕ್ಷತೆ, ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ರಾಜ್ಯಗಳ ನಡುವಿನ ವಿವಾದಗಳು ಅಂತ್ಯಗೊಳಿಸಲು ಕೇಂದ್ರ ಸರ್ಕಾರವು ಅಣೆಕಟ್ಟು ಸುರಕ್ಷತಾ ಕಾಯ್ದೆ, 2021 ಅನ್ನು ಜಾರಿಗೆ ತಂದಿದೆ. ಈ ಕಾಯ್ದೆಯನ್ನು ದೇಶಾದ್ಯಂತ ಜಾರಿಗೆ ತರಲಾಗಿದೆ. ಡಿಸೆಂಬರ್ 30, 2021 ರಿಂದ. ದೇಶದಲ್ಲಿ 5334 ಪ್ರಮುಖ ಅಣೆಕಟ್ಟುಗಳಿವೆ ಮತ್ತು 411 ಅಣೆಕಟ್ಟುಗಳು ನಿರ್ಮಾಣ ಹಂತದಲ್ಲಿವೆ.

## ಮಿಷನ್ ಶಕ್ತಿ

ಇದು ಮಹಿಳೆಯರ ಜೀವನ ಚಕ್ರದ ಸುಸ್ಥಿರತೆಯ ಮೇಲೆ ಪರಿಣಾಮ ಬೀರುವ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ಮಹಿಳೆಯರನ್ನು ಸಬಲೀಕರಣಗೊಳಿಸುವ ಸಮಗ್ರ ಕಾರ್ಯಕ್ರಮವಾಗಿದೆ. ಈ ಸಮೂಹ ಯೋಜನೆಯು ಸಂಬಲ್ ಮತ್ತು ಸಕ್ಷಮ್ ಎಂಬ ಎರಡು ಉಪ ಯೋಜನೆಗಳನ್ನು ಒಳಗೊಂಡಿದೆ. ಈ ಯೋಜನೆಗೆ 2021-2022 ರಿಂದ 2025-2026 ರವರೆಗೆ 15,761 ಕೋಟಿ ರೂ. ವೆಚ್ಚವನ್ನು ಅನುಮೋದಿಸಲಾಗಿದೆ.

## ನದಿ ಜೋಡಣೆ ಯೋಜನೆ

ನದಿಗಳ ಜೋಡಣೆಯು ನೀರಿನ 'ಹೆಚ್ಚುವರಿ' ಜಲಾನಯನ ಪ್ರದೇಶಗಳಿಂದ 'ಕೊರತೆಯ' ಪ್ರದೇಶಗಳಿಗೆ ನೀರನ್ನು ಹರಿಸುವ ಉದ್ದೇಶ ಹೊಂದಿದೆ. ಇದಕ್ಕಾಗಿ 30 ಜೋಡಣೆಗಳನ್ನು ಗುರುತಿಸಲಾಗಿದ್ದು, ಅದರ ಅಡಿಯಲ್ಲಿ ಮೊದಲ ಯೋಜನೆಯ ಅನುಷ್ಠಾನಕ್ಕೆ ಕೆನ್ - ಬೆಟ್ವಾ ಜೋಡಣೆ ಯೋಜನೆಯನ್ನು ಡಿಸೆಂಬರ್ 8, 2021 ರಂದು ಸಂಪುಟವು ಅನುಮೋದಿಸಿದೆ.

## ಪ್ರಧಾನ ಮಂತ್ರಿ ಸ್ವಾಮಿತ್ವ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ, ಏಪ್ರಿಲ್ 24, 2021 ರಂದು ಪ್ರಾರಂಭವಾದ ಈ ಯೋಜನೆಯಡಿಯಲ್ಲಿ ಭೂಮಿಯ ಮಾಲೀಕತ್ವದ ಯಾವುದೇ ಪುರಾವೆಗಳನ್ನು ಹೊಂದಿಲ್ಲದವರಿಗೆ ಮಾಲೀಕತ್ವದ ಕಾರ್ಡ್‌ಗಳನ್ನು ನೀಡಲಾಗುತ್ತಿದೆ. ಯೋಜನೆಯಡಿಯಲ್ಲಿ, 1.35 ಲಕ್ಷಕ್ಕೂ ಹೆಚ್ಚು ಹಳ್ಳಿಗಳಲ್ಲಿ ಡ್ರೋನ್ಗಳ ಸಹಾಯದಿಂದ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ಮತ್ತು 36 ಲಕ್ಷಕ್ಕೂ ಹೆಚ್ಚು ಆಸ್ತಿ ಕಾರ್ಡ್‌ಗಳನ್ನು ವಿತರಿಸಲಾಗಿದೆ.

## ಪಿಎಲ್‌ಐ

ಆತ್ಮನಿರ್ಭರ ಭಾರತದ ಗುರಿಯ ಉದ್ದೇಶದಡಿಯಲ್ಲಿ ಭಾರತದ ಉತ್ಪಾದನಾ ಸಾಮರ್ಥ್ಯ ಮತ್ತು ರಫ್ತುಗಳನ್ನು ಹೆಚ್ಚಿಸುವ ಸಲುವಾಗಿ, 2021-2022ರ ಆರ್ಥಿಕ ವರ್ಷದಲ್ಲಿ ಉತ್ಪಾದನಾ ಕ್ಷೇತ್ರದ 13 ಪ್ರಮುಖ ವಲಯಗಳಿಗೆ ಪಿ ಎಲ್‌ಐ ಯೋಜನೆಯಲ್ಲಿ 1.97 ಲಕ್ಷ ಕೋಟಿ ರೂ. ವೆಚ್ಚವನ್ನು ಘೋಷಿಸಲಾಗಿದೆ. ಸೆಪ್ಟೆಂಬರ್ 2021 ರಲ್ಲಿ ಡ್ರೋನ್‌ಗಳು ಮತ್ತು ಡ್ರೋನ್‌ಗಳ ಬಿಡಿಭಾಗಗಳಿಗೂ ಪಿ ಎಲ್‌ಐ ಯೋಜನೆಯನ್ನು ಅನುಮೋದಿಸಲಾಗಿದೆ. ಈ 14 ವಲಯಗಳಲ್ಲಿನ ಪಿ ಎಲ್‌ಐ ಯೋಜನೆಯು 60 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ.

## ನ್ಯಾನೋ ಯೂರಿಯಾ ಅಭಿವೃದ್ಧಿ

ಜೂನ್ 2021 ರಲ್ಲಿ ನ್ಯಾನೊ ಯೂರಿಯಾ ಅಭಿವೃದ್ಧಿಯ ಕೆಲಸ ಪ್ರಾರಂಭವಾಯಿತು. ಮೊದಲ ಘಟಕವನ್ನು ಮೇ 2022 ರಲ್ಲಿ ಸ್ಥಾಪಿಸಲಾಯಿತು. ಇದು ದಿನಕ್ಕೆ 500 ಎಂಎಲ್‌ಗಳ ಸುಮಾರು 1.5 ಲಕ್ಷ ಬಾಟಲಿಗಳನ್ನು ಉತ್ಪಾದಿಸುತ್ತದೆ, ಭವಿಷ್ಯದಲ್ಲಿ ಅಂತಹ 8 ಘಟಕಗಳನ್ನು ಸ್ಥಾಪಿಸಲಾಗುವುದು. ಇದರಿಂದ ಯೂರಿಯಾ ಮೇಲಿನ ವಿದೇಶಿ ಅವಲಂಬನೆ ಕಡಿಮೆಯಾಗುತ್ತದೆ.

## ಇ-ಶ್ರಮ್ ಪೋರ್ಟಲ್

ದೇಶದ ಅಸಂಘಟಿತ ಕಾರ್ಮಿಕರ ಡೇಟಾಬೇಸ್ ರಚಿಸಲು ಈ ಪೋರ್ಟಲ್ ಅನ್ನು ಆಗಸ್ಟ್ 26, 2021 ರಂದು ಪ್ರಾರಂಭಿಸಲಾಗಿದೆ. ಈ ಹಿಂದೆ ಇಂತಹ ಡಿಜಿಟಲ್ ಡೇಟಾಬೇಸ್ ಇರಲಿಲ್ಲ. ಜುಲೈ 14, 2022 ರವರೆಗೆ 27.98 ಕೋಟಿ ಅಸಂಘಟಿತ ಕಾರ್ಮಿಕರು ಪೋರ್ಟಲ್ನಲ್ಲಿ ನೋಂದಾಯಿಸಿಕೊಂಡಿದ್ದಾರೆ.

ಸುದೀರ್ಘ ಪ್ರಯಾಣದಲ್ಲಿ ಬಹಳ ದೂರ ಸಾಗಿದೆ. ಈ ಪಯಣ ಮುಂದುವರಿದಂತೆ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಳು ಮತ್ತು ಬಲಿದಾನದ ಶಕ್ತಿಯು ಭಾರತದಾದ್ಯಂತ ಹರಡಿದೆ. ಇದೆಲ್ಲವೂ ಸಾರ್ವಜನಿಕರ ಸಹಭಾಗಿತ್ವದಿಂದ ಸಾಧ್ಯವಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವವು ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಸ್ವಾವಲಂಬನೆಯ ಆಂದೋಲನವನ್ನು ಸೃಷ್ಟಿಸಿತು, ಆದ್ದರಿಂದ ಕಲೆ, ಸಂಸ್ಕೃತಿ, ಹಾಡು ಮತ್ತು ಸಂಗೀತದ ರೂಪಗಳೂ ಸಹ ಇದರಿಂದ ಸ್ಫೂರ್ತಿ ಪಡೆಯಿತು. ಇನ್ನೋವೇಶನ್ ಚಾಲೆಂಜ್, ರಾಷ್ಟ್ರಗೀತೆ, ಸ್ವಾತಂತ್ರ್ಯ ಹೋರಾಟಗಾರರ ರಂಗೋಲಿ ಸ್ಪರ್ಧೆಗಳಲ್ಲಿ ಮಕ್ಕಳು, ಯುವಜನರು, ಮಹಿಳೆಯರವರೆಗೆ

## ಸ್ವಾತಂತ್ರ್ಯ ಹೋರಾಟ @75

ಸ್ವಾತಂತ್ರ್ಯ ಚಳವಳಿಯ ಪಯಣ ಹೇಗಿತ್ತು? ಒಂದೋ ಮರೆತುಹೋದ ಅಥವಾ ಎಂದಿಗೂ ಇತಿಹಾಸದಲ್ಲಿ ಅರ್ಹವಾದ ಸ್ಥಾನವನ್ನು ಪಡೆಯದ ಅಜ್ಞಾತ ವೀರರ ಕಥೆ. ಅಂತಹ ಮಹಾನ್ ವೀರರ ಕಥೆ ಮತ್ತು ಅವರ ಸ್ಫೂರ್ತಿದಾಯಕ ಕಥೆಯನ್ನು ಹೊರತರುವುದು ಮತ್ತು ಅವರಿಂದ ಪ್ರೇರಣೆ ಪಡೆಯುವುದು.

## ಸಂಕಲ್ಪ @75

ನಿಗದಿತ ಗುರಿಗಳನ್ನು ಸಾಧಿಸಲು ಬದ್ಧತೆ. ಆ ಗುರಿಗಳ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡುವುದು. ಆ ಕ್ಷೇತ್ರಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸುವುದು. ಎಲ್ಲಾ ಸರ್ಕಾರಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆಯೊಂದಿಗೆ ಯಶಸ್ಸಿನ ಹಾದಿಯನ್ನು ವಿವರಿಸುವುದು.

## ಚಿಂತನೆಗಳು @75

ವಸುಧೈವ ಕುಟುಂಬಕಂ, ರಾಷ್ಟ್ರೀಯ ಭದ್ರತೆ, ನಾವೀನ್ಯತೆ, ಶಾಂತಿ - ಏಕತೆ, ಭಾರತದ ಪರಿಕಲ್ಪನೆ, ಅಭಿವೃದ್ಧಿ, ಪರಿಸರ ಸುಸ್ಥಿರ ಅಭಿವೃದ್ಧಿ ಮತ್ತು ನ್ಯಾಯದಂತಹ ವಿಚಾರಗಳು ಮತ್ತು ವಿಷಯಗಳ ಮೇಲೆ ಕೆಲಸ ಮಾಡುವುದು ಭಾರತವನ್ನು ಒಗ್ಗೂಡಿಸುತ್ತದೆ.

## ಸಾಧನೆಗಳು @75

75ನೇ ವರ್ಷದ ಹೊತ್ತಿಗೆ ಮಹಿಳೆಯರು, ಯುವಕರು, ಗ್ರಾಮಗಳು, ಪರಿಸರ, ವಲಸೆ ಕಾರ್ಮಿಕರು, ರಕ್ಷಣೆ ಮತ್ತು ಆರ್ಥಿಕತೆಯಂತಹ ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವದ ವರ್ಷದಲ್ಲಿ ಸಾಮೂಹಿಕ ಆಚರಣೆಯಾಗಿ ಪರಿವರ್ತಿಸಬೇಕು, ಇದರಿಂದಾಗಿ ಅಮೃತ ಕಾಲದ ಪ್ರಯಾಣವು ಹೊಸ ವೇಗವನ್ನು ಪಡೆಯುತ್ತದೆ.

## ಕ್ರಮಗಳು @75

75 ನೇ ವರ್ಷದ ವಿಶೇಷ ಪ್ರಯತ್ನಗಳು: ಸ್ವಚ್ಛ ಭಾರತ, ಆರೋಗ್ಯಕರ ಭಾರತ, ಆತ್ಮನಿರ್ಭರ ಭಾರತ, ಏಕ ಭಾರತ- ಶ್ರೇಷ್ಠ ಭಾರತ, ಒಂದು ರಾಷ್ಟ್ರ-ಒಂದು ಪಡಿತರ ಚೀಟಿ, ಒಂದು ಕೃಷಿ ಮಾರುಕಟ್ಟೆ, ಸಬ್ಕಾ ಸಾಥ್-ಸಬ್ಕಾ ವಿಕಾಸ್-ಸಬ್ಕಾ ವಿಶ್ವಾಸ್, ಕೌಶಲ್ಯ ಅಭಿವೃದ್ಧಿ, ಡಿಜಿಟಲ್ ಇಂಡಿಯಾ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಜಿ ಎಸ್ಟಿ ಯವರೆಗೆ ಉಪಕ್ರಮಗಳು.

## ಅಮೃತ ಮಹೋತ್ಸವವು ಸ್ವಾತಂತ್ರ್ಯದ ಹೊಸ ಅರುಣೋದಯವನ್ನು ಮೂಡಿಸಿದೆ

ಎರಡು ವರ್ಷಗಳ ಅವಧಿಯ ಅಮೃತ ಮಹೋತ್ಸವವು ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದ 75 ವಾರಗಳ ಮೊದಲು ಪ್ರಾರಂಭವಾಯಿತು. ಈ ಅವಧಿಯಲ್ಲಿ 50 ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆದಿವೆ. 150 ಕ್ಕೂ ಹೆಚ್ಚು ದೇಶಗಳು ಮತ್ತು ಎಲ್ಲಾ ರಾಜ್ಯಗಳ 55 ಸಚಿವಾಲಯಗಳು ಮತ್ತು ಇಲಾಖೆಗಳು ಇದರಲ್ಲಿ ಭಾಗವಹಿಸಿದ್ದವು. ಈ ಎಲ್ಲಾ ಘಟನೆಗಳು ಐದು ವಿಷಯಗಳನ್ನು ಆಧರಿಸಿದ್ದವು.

ಎಲ್ಲೆಲ್ಲೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಎದ್ದು ಕಾಣುತ್ತಿತ್ತು. ಅಮೃತ ಮಹೋತ್ಸವ ಮತ್ತು ಅಮೃತ ಕಾಲದ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನ ಸ್ಫಟಿಕದಷ್ಟು ಸ್ಪಷ್ಟವಾಗಿದೆ. ಅವರು ಪ್ರಾರಂಭದಿಂದಲೇ ಈ ಉತ್ಸವಕ್ಕೆ ಅಡಿಪಾಯ ಹಾಕಿದರು, ಆದ್ದರಿಂದ ಅವರು ಆಗಸ್ಟ್ 15, 2022 ರಂದು ಕೆಂಪು ಕೋಟೆಯಿಂದ ಒಂಬತ್ತನೇ ಬಾರಿಗೆ ತ್ರಿವರ್ಣ ಧ್ವಜವನ್ನು ಹಾರಿಸುವ ಹೊತ್ತಿಗೆ ಅದು ಇಡೀ ದೇಶವನ್ನು ಆವರಿಸುತ್ತದೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಮತ್ತು ಸಬ್ ಕಾ ಪ್ರಯಾಸ್ ಮಂತ್ರವನ್ನು ಸಾಕಾರಗೊಳಿಸಲು, ಪ್ರತಿಯೊಬ್ಬ ನಾಗರಿಕನು ದೇಶವನ್ನು ಮುನ್ನಡೆಸಲು ಪ್ರತಿಜ್ಞೆ ಮಾಡುವ ದೊಡ್ಡ ಉತ್ಸವವಾಗಬೇಕು. ಸ್ವಾತಂತ್ರ್ಯದ ಅಮೃತ ಮಹೋತ್ಸವದಲ್ಲಿ ಜನತೆಯ ಉತ್ಸಾಹವು ಸಾರ್ವಜನಿಕರ ಪಾಲ್ಗೊಳ್ಳುವಿಕೆಯಿಂದ ರಂಗು ಪಡೆಯಿತು.

### ಅಮೃತ ಮಹೋತ್ಸವವು ಹಬ್ಬವಾದಾಗ

ಭಾರತೀಯ ಸಂಸ್ಕೃತಿಯಲ್ಲಿ, "ಉತ್ಸವೇನ ಬಿನಾ ಯಸ್ಮಾತ್ ಸ್ಥಾಪನಂ ನಿಷ್ಫಲಂ ಭವೇತ್" ಎಂದು ಹೇಳಲಾಗಿದೆ, ಅಂದರೆ ಯಾವುದೇ ಪ್ರಯತ್ನ, ಯಾವುದೇ ಸಂಕಲ್ಪವನ್ನು ಆಚರಿಸದ ಹೊರತು ಅದು ಯಶಸ್ವಿಯಾಗುವುದಿಲ್ಲ. ಒಂದು ಸಂಕಲ್ಪವು ಹಬ್ಬದ ರೂಪವನ್ನು ಪಡೆದಾಗ, ಅದು ಲಕ್ಷಾಂತರ ಮತ್ತು ಕೋಟ್ಯಂತರ

## ಆಜಾದಿ ಕಾ ಅಮೃತ ಮಹೋತ್ಸವದ ಕಾರ್ಯಕ್ರಮಗಳ ಹಿಂದಿನ ಚಿಂತನೆ ಮತ್ತು ಕಾರ್ಯತಂತ್ರ

ಸರ್ಕಾರದ ಸಾಮೂಹಿಕ ಶಕ್ತಿಯೊಂದಿಗೆ ಸಾರ್ವಜನಿಕ, ಖಾಸಗಿ ವಲಯ, ಸರ್ಕಾರೇತರ ಸಂಸ್ಥೆಗಳು ಮತ್ತು ಸಮಾಜದ ಎಲ್ಲಾ ವರ್ಗಗಳನ್ನು ಒಟ್ಟುಗೂಡಿಸುವ ಮೂಲಕ 'ಸಬ್ ಕಾ ಪ್ರಯಾಸ್'ನ ಮನೋಭಾವವನ್ನು ಸಾಧಿಸುವ ಗುರಿಯನ್ನು ಇದು ಹೊಂದಿದೆ. ಇದರ ಯೋಜನೆ ಮತ್ತು ಕಾರ್ಯತಂತ್ರವನ್ನು ಮಾಡುವಾಗ, ಸ್ವಾತಂತ್ರ್ಯ ಹೋರಾಟ, ಸಂಸ್ಕೃತಿ-ಆಧ್ಯಾತ್ಮಿಕತೆ, ಪೋಷಣೆ, ಕ್ರೀಡಾ ಸುದೃಢತೆ, ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ, ಎಲ್ಲರಿಗೂ ಕಾನೂನು ನೆರವು, ತಳ ವರ್ಗಕ್ಕೆ ಸೌಲಭ್ಯಗಳ ವಿತರಣೆ, ಮೂಲಸೌಕರ್ಯಗಳ ಅಭಿವೃದ್ಧಿ, ಉತ್ತಮ ಆಡಳಿತ, ಆಹಾರ ಮತ್ತು ಕೃಷಿ, ನಾವೀನ್ಯತೆ , ವಿಜ್ಞಾನ-ತಂತ್ರಜ್ಞಾನದ ಬಗ್ಗೆ ಕಾಳಜಿ ವಹಿಸಲಾಗಿದೆ.

## ಅಮೃತ ಮಹೋತ್ಸವದ ಕೆಲವು ವಿಶೇಷ ಕಾರ್ಯಕ್ರಮಗಳು

- ಇಂಡಿಯಾ ಗೇಟ್‌ನಲ್ಲಿ ನೇತಾಜಿಯವರ ಹೊಲೊಗ್ರಾಮ್
- ಗ್ರಾಹಕರ ಸಬಲೀಕರಣ
- ಪ್ರಧಾನಿಯವರಿಗೆ ವಿದ್ಯಾರ್ಥಿಗಳು ಬರೆದ ಪೋಸ್ಟ್‌ಕಾರ್ಡ್‌ಗಳು
- ನವೀಕರಿಸಬಹುದಾದ ಶಕ್ತಿ
- ಪೌಷ್ಟಿಕಾಂಶ ತಿಂಗಳು – ಪೌಷ್ಟಿಕಾಂಶ ತೋಟ
- ನಾವೀನ್ಯತೆ ಹ್ಯಾಕಥಾನ್
- ವಿಜ್ಞಾನ ಸರ್ವತ್ರ ಪೂಜ್ಯತೇ
- ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ಸಮಾವೇಶ
- ರಾಷ್ಟ್ರೀಯ ಸಂಸ್ಕೃತಿ ಉತ್ಸವ
- ಉಮಂಗ್ ಉಡಾನ್ - ಮಕರ ಸಂಕ್ರಾಂತಿ
- ಭಾರತಮ್
- ಧಾರಾ-ವೈದಿಕ ಗಣಿತ
- ಕೆಂಪು ಕೋಟೆಯಲ್ಲಿ ಆಚರಣೆಗಳು



ಜನರ ಸಂಕಲ್ಪ ಮತ್ತು ಶಕ್ತಿಯನ್ನು ಒಟ್ಟುಗೂಡಿಸುತ್ತದೆ. ಈ ಉತ್ಸಾಹವು 130 ಕೋಟಿ ದೇಶವಾಸಿಗಳನ್ನು ಒಟ್ಟಿಗೂಡಿಸುವ ಮತ್ತು ಸಂಪರ್ಕಿಸುವ ಮೂಲಕ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುವುದರೊಂದಿಗೆ ಪ್ರಾರಂಭವಾಯಿತು. ಈ ಉತ್ಸವದ ಮೂಲ ಸ್ಫೂರ್ತಿಯು ಸಾರ್ವಜನಿಕ ಭಾಗವಹಿಸುವಿಕೆಯಾಯಿತು. ಈ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದ ಆಚರಣೆಯು ಇಂದಿನ ಪೀಳಿಗೆಯಲ್ಲೂ ಸ್ವಾತಂತ್ರ್ಯ ಹೋರಾಟ, ತ್ಯಾಗ ಮತ್ತು ಸಮರ್ಪಣಾ ಮನೋಭಾವವನ್ನು ಅರಿತುಕೊಳ್ಳುವ ಹಬ್ಬವಾಯಿತು. ಇದು ಸನಾತನ ಭಾರತದ ಹೆಮ್ಮೆಯ ಹಬ್ಬವಾಗಿ ವಿಕಸನಗೊಂಡಿದೆ; ಆಧುನಿಕ ಭಾರತದ ತೇಜಸ್ಸೂ ಇದೆ; ಅತೀಂದ್ರಿಯ ಆಧ್ಯಾತ್ಮಿಕತೆಯ ಬೆಳಕು ಕೂಡ ಇದೆ ಮತ್ತು ಭಾರತದ ವಿಜ್ಞಾನಿಗಳ ಪ್ರತಿಭೆ ಮತ್ತು ಸಾಮರ್ಥ್ಯದ ದೃಷ್ಟಿಕೋನವೂ ಇದೆ.

ಈ 75 ವಾರಗಳಲ್ಲಿ 50 ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳು ದೇಶ-ವಿದೇಶಗಳಲ್ಲಿ ನಡೆದಿದ್ದು, 55 ಸಚಿವಾಲಯಗಳು/ಇಲಾಖೆಗಳು ಇಡೀ ಸರ್ಕಾರದ ಸಾಮೂಹಿಕ ಅಧಿಕಾರವನ್ನು ಹೊಂದಿದ್ದವು ಎಂಬ ಅಂಶದಿಂದ ಈ ಕಾರ್ಯಕ್ರಮದ ಹಿರಿಮೆ ಮತ್ತು ಯಶಸ್ಸನ್ನು ಅಳೆಯಬಹುದು. ಇದು ಸಂಘಟಿತ ಪ್ರಯತ್ನಗಳ ಮೂಲಕ ಜನರನ್ನು ಸೆಳೆಯಿತು. ಸರಾಸರಿಯಾಗಿ, ಅಮೃತ ಮಹೋತ್ಸವವು ಗಂಟೆಗೆ 4 ಕಾರ್ಯಕ್ರಮಗಳನ್ನು ಹೊಂದಿತ್ತು. ಅಮೃತೋತ್ಸವವನ್ನು ಐದು ವಿಭಾಗಗಳಾಗಿ ವಿಂಗಡಿಸಿ ಮುನ್ನಡೆಯಲು ನೀಲನಕ್ಷೆಯನ್ನು ರೂಪಿಸಲಾಗಿತ್ತು.

ಇವುಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮ, 75 ರಲ್ಲಿ ಚಿಂತನೆಗಳು, 75 ರಲ್ಲಿ ಸಾಧನೆಗಳು, 75 ರಲ್ಲಿ ಕ್ರಮಗಳು ಮತ್ತು 75 ರಲ್ಲಿ ಸಂಕಲ್ಪಗಳು ಸೇರಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಮಯದಲ್ಲಿ, ಕೋವಿಡ್ ಎರಡನೇ ಮತ್ತು ಮೂರನೇ ಅಲೆಗಳು ಬಂದವು ಮತ್ತು ಅನೇಕ ಕಾರ್ಯಕ್ರಮಗಳನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲಾಯಿತು. ವಿದ್ಯಾರ್ಥಿಗಳು ಪ್ರಧಾನ ಮಂತ್ರಿಯವರಿಗೆ ಪೋಸ್ಟ್ ಕಾರ್ಡ್‌ಗಳನ್ನು ಬರೆದರು, ಬ್ರಿಟಿಷರು ನಿಷೇಧಿಸಿದ ಕವನಗಳ ಸಂಕಲನ 'ಸ್ವತಂತ್ರತಾ ಸ್ವರ್' ಅನ್ನು ಆಯೋಜಿಸಲಾಯಿತು. ವಂದೇ ಭಾರತ್ ನೃತ್ಯೋತ್ಸವವು 1857 ರ ಮೊದಲ ಸ್ವಾತಂತ್ರ್ಯ ಹೋರಾಟವನ್ನು ನೆನಪಿಸುವ ಕಾರ್ಯಕ್ರಮವಾಗಿತ್ತು. ಇನ್ನೂ ಅನೇಕ ಕಾರ್ಯಕ್ರಮಗಳು ಇದ್ದವು. ರಾಷ್ಟ್ರಗೀತೆಯ ಕಾರ್ಯಕ್ರಮವಾಗಲಿ, ರಂಗೋಲಿ ಕಾರ್ಯಕ್ರಮವಾಗಲಿ, ಸ್ವಾತಂತ್ರ್ಯ ಸಂಗ್ರಾಮದ ಅಜ್ಞಾತ ವೀರರ ಕುರಿತ ಸಂಶೋಧನೆ ಮತ್ತು ಸಂಕಲನ ಕಾರ್ಯಕ್ರಮಗಳಾಗಲಿ, ನನ್ನ ಗ್ರಾಮ, ನನ್ನ ಪರಂಪರೆ ಕಾರ್ಯಕ್ರಮಗಳಾಗಲಿ ನಾಗರಿಕರ ಮನದಲ್ಲಿ ಹೊಸ

## ಸ್ವಾತಂತ್ರ್ಯದ 75 ನೇ ವರ್ಷದಲ್ಲಿ 75 ಎಂಬ ಸಂಖ್ಯೆ ಹೇಗೆ ಒಂದು ಸಂಕೇತವಾಯಿತು

- 5 ಅಕ್ಟೋಬರ್ 2021 ರಂದು ಉತ್ತರ ಪ್ರದೇಶದಲ್ಲಿ, ನಗರಗಳ ಅಭಿವೃದ್ಧಿಗೆ ಸಂಬಂಧಿಸಿದ 75 ಯೋಜನೆಗಳಿಗೆ ಅಡಿಗಲ್ಲು ಹಾಕಲಾಯಿತು.
- ಉತ್ತರಪ್ರದೇಶದ 75 ಜಿಲ್ಲೆಗಳಲ್ಲಿ 75 ಸಾವಿರ ಫಲಾನುಭವಿಗಳು ತಮ್ಮ ಪಕ್ಕಾ ಮನೆಗಳ ಕೀಲಿಕೈಗಳನ್ನು ಪಡೆದರು. 75 ಎಲೆಕ್ಟ್ರಿಕ್ ಬಸ್‌ಗಳಿಗೆ ಚಾಲನೆ ನೀಡಲಾಯಿತು.
- 18 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಕೋವಿಡ್ -19 ರ ಮುನ್ನೆಚ್ಚರಿಕೆ ಡೋಸ್‌ಗಳನ್ನು 75 ದಿನಗಳವರೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲು ಭಾರತ ಸರ್ಕಾರ ನಿರ್ಧರಿಸಿದೆ.

### ವಿಭಜನ್ ವಿಭೀಷಿಕಾ ಸ್ಮೃತಿ ದಿವಸ್

ಸ್ವಾತಂತ್ರ್ಯದ 75 ನೇ ಸ್ವಾತಂತ್ರ್ಯ ದಿನದಂದು, ವಿಭಜನೆಯ ಭೀಕರತೆಯ ಸ್ಮರಣಾರ್ಥ ದಿನವನ್ನು ಆಚರಿಸಲು ನಿರ್ಧರಿಸಲಾಯಿತು, ಇದು ಆ ಭೀಕರತೆಯಿಂದ ಸಂತ್ರಸ್ತರಾದ ಜನರಿಗೆ ಪ್ರತಿಯೊಬ್ಬ ಭಾರತೀಯನ ಪರವಾಗಿ ಸಲ್ಲಿಸುವ ಗೌರವವಾಗಿದೆ.

### 75 ವಂದೇ ಭಾರತ್ ರೈಲುಗಳು

ಅಮೃತ ಮಹೋತ್ಸವದ 75 ವಾರಗಳಲ್ಲಿ, ದೇಶದ ಮೂಲೆ ಮೂಲೆಯನ್ನು 75 ವಾರಗಳಲ್ಲಿ ಸಂಪರ್ಕಿಸುವ 75 ವಂದೇ ಭಾರತ್ ರೈಲುಗಳನ್ನು ಘೋಷಿಸಲಾಯಿತು.

### 75 ಯುವ ಲೇಖಕರು

ಅಮೃತೋತ್ಸವದಂದು ಸ್ವಾತಂತ್ರ್ಯ ಹೋರಾಟಗಾರರ ಕುರಿತು ಪುಸ್ತಕ ಬರೆಯಲು ದೇಶದ 75 ಯುವ ಬರಹಗಾರರನ್ನು ಆಯ್ಕೆ ಮಾಡಲಾಯಿತು.



21ನೇ ಶತಮಾನದಲ್ಲಿ ಜಗತ್ತು ವೇಗವಾಗಿ ಬದಲಾಗುತ್ತಿದೆ. ಹೊಸ ಅಗತ್ಯಗಳಿಗೆ ತಕ್ಕಂತೆ ಭಾರತದ ಜನರು ಮತ್ತು ನಮ್ಮ ಯುವಜನರ ಭರವಸೆಗಳು ಮತ್ತು ನಿರೀಕ್ಷೆಗಳು ಹೆಚ್ಚುತ್ತಿವೆ. ಪರಿಣಾಮವಾಗಿ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗಳು ವೇಗವಾಗಿ ಕೆಲಸ ಮಾಡಬೇಕಾಗುತ್ತದೆ. ಇಂದು, ನಮ್ಮ ಸ್ವಾತಂತ್ರ್ಯದ 75 ನೇ ವರ್ಷದಲ್ಲಿ ನಾವು ನವ ಭಾರತದ ಸಂಕಲ್ಪದೊಂದಿಗೆ ಮುನ್ನಡೆಯುತ್ತಿರುವಾಗ, ಈ ಸಂಕಲ್ಪಗಳನ್ನು ಮುಂದಕ್ಕೆ ಕೊಂಡೊಯ್ಯುವ ಜವಾಬ್ದಾರಿಯು ನಮ್ಮ ಸಂಸತ್ತು ಮತ್ತು ಶಾಸನ ಸಭೆಗಳ ಮೇಲಿದೆ. ಇದಕ್ಕಾಗಿ ಹಗಲಿರುಳು ದಣಿವರಿಯದೆ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಕೆಲಸ ಮಾಡಬೇಕು.

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

ಚೈತನ್ಯ ತುಂಬಿದವು.

ಹರ್ ಘರ್ ತ್ರಿವರ್ಣ ಧ್ವಜ ಅಭಿಯಾನವು ಆಗಸ್ಟ್ 11 ರಿಂದ 17 ರವರೆಗೆ ನಡೆಯುತ್ತದೆ. ಅಂತರರಾಷ್ಟ್ರೀಯ ಯೋಗ ದಿನ, ಡಿಜಿಟಲ್ ಡಿಸ್ಟ್ರಿಕ್ಟ್ ರೆಪೊಸಿಟರಿ ಮತ್ತು ಮೇರಾ ಗಾಂವ್, ಮೇರಿ ಧರೋಹರ್ ನಂತಹ ಕಾರ್ಯಕ್ರಮಗಳು ಸಾರ್ವಜನಿಕ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿದವು.

### ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿ, ಭವಿಷ್ಯದ ನಿರ್ಮಾಣ

ಭಾರತ ಸ್ವಾತಂತ್ರ್ಯದ ಇತಿಹಾಸವು ಅದ್ಭುತವಾಗಿದೆ, ಆದರೆ ಸ್ವಾತಂತ್ರ್ಯ ಚಳವಳಿಯಲ್ಲಿ ಸಾಮಾನ್ಯ ಜನರ ಮಹತ್ತರವಾದ ಭಾಗವಹಿಸುವಿಕೆಯ ಮಹತ್ವವು ಎಲ್ಲೋ ಕಳೆದುಹೋಯಿತು. ಅವರೆಲ್ಲರಿಗೂ ಸಿಗಬೇಕಾದ ಮನ್ನಣೆ ಸಿಕ್ಕಿಲ್ಲ. ಅಂತಹ ಪರಿಸ್ಥಿತಿಯಲ್ಲಿ, ಗಾಂಧೀಜಿಯವರ ಚರಕ ಮತ್ತು ಉಪ್ಪಿನಂತಹ ಚಿಹ್ನೆಗಳ ಉತ್ತಮ ಬಳಕೆ, ಹಾಗೆಯೇ ಅಮೃತ ಮಹೋತ್ಸವವು ಸ್ವಾತಂತ್ರ್ಯದ ಇತಿಹಾಸವನ್ನು ಪ್ರಜಾಪ್ರಭುತ್ವಗೊಳಿಸಲು ಪ್ರಾರಂಭಿಸಿದೆ, ಇದರಿಂದ ದೇಶದ ಪ್ರತಿಯೊಬ್ಬ ನಾಗರಿಕನು ಅದರಿಂದ ಸ್ಫೂರ್ತಿ ಪಡೆಯಬಹುದು. ವಿಶೇಷ ಸಂದರ್ಭಗಳು ಮತ್ತು

ಮಹಾಪುರುಷರ ಜನ್ಮ ದಿನಾಚರಣೆಯನ್ನು ಅಮೃತ ಮಹೋತ್ಸವದ ಮೂಲಕ ಸಾರ್ವಜನಿಕರು ಭಾಗವಹಿಸುವ ಸಂದರ್ಭಗಳನ್ನಾಗಿ ಮಾಡಲಾಯಿತು.

ಸ್ವಚ್ಛತಾ ಆಂದೋಲನವನ್ನು ಮಹಾತ್ಮ ಗಾಂಧೀಜಿಯವರ 150ನೇ ಜನ್ಮದಿನಾಚರಣೆಯೊಂದಿಗೆ ಜೋಡಿಸಿ, ದೇಶವನ್ನು ಸ್ವಚ್ಛಗೊಳಿಸುವ ಗುರಿಯೊಂದಿಗೆ ಸಾಮೂಹಿಕ ಆಂದೋಲನವನ್ನು ಪ್ರಾರಂಭಿಸಲಾಯಿತು.

ಸ್ವಾತಂತ್ರ್ಯದ 75ನೇ ವರ್ಷವನ್ನು ಅಮೃತ ಮಹೋತ್ಸವ ಎಂದು ಹೆಸರಿಸಲಾಗಿದ್ದು, ವಿಶೇಷ ಸಮಿತಿಯನ್ನು ರಚಿಸಿ ಇದನ್ನು ಆಯೋಜಿಸಲಾಗಿದೆ. ದೇಶದ ಯುವಕರು ಅಜ್ಞಾತ ವೀರರ ಕಥೆಗಳನ್ನು ಬರೆಯಲು ಪ್ರೇರೇಪಿಸಲಾಗುತ್ತಿದೆ. ಪ್ರತಿ ವರ್ಷ ಲಾರ್ಡ್ ಬಿರ್ಸಾ ಮುಂಡಾ ಅವರ ಜನ್ಮದಿನದಂದು ನವೆಂಬರ್ 15 ರಂದು ಬುಡಕಟ್ಟು ಹೆಮ್ಮೆಯ ದಿನವಾಗಿ ಆಚರಿಸಲು ಪ್ರಾರಂಭಿಸಲಾಯಿತು. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125 ನೇ ಜನ್ಮದಿನವನ್ನು ಒಂದು ಸಂದರ್ಭವನ್ನಾಗಿ ಮಾಡಲಾಯಿತು. ರಾಜಾ ಸುಹೇಲ್ದೇವ್ ಮತ್ತು ರಾಜಾ ಮಹೇಂದ್ರ ಪ್ರತಾಪ್ ಅವರಂತಹ ಅನೇಕ ಮಹಾನ್ ಪುರುಷರ ಕೊಡುಗೆಗಳನ್ನು ಸ್ಮರಿಸುವುದರ ಮೂಲಕ, ಸ್ವಾತಂತ್ರ್ಯ ಚಳುವಳಿಯ ಹೊಸ ಬೆನ್ನೆಲುಬು ರೂಪುಗೊಂಡಿತು. 1857 ರಿಂದ 1947 ರವರೆಗಿನ ಹೋರಾಟವು ಮುಂದಿನ ಪೀಳಿಗೆಯ ಮನಸ್ಸಿನಲ್ಲಿ ಪುನರುಜ್ಜೀವನಗೊಳ್ಳಬೇಕು ಎಂದು ಭಾರತ ಸರ್ಕಾರ ಬಯಸುತ್ತದೆ. ಏಕೆಂದರೆ ಇತಿಹಾಸ ಮಾತ್ರ ಮುಂದಿನ ಪೀಳಿಗೆಗೆ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲ. ಸಾಹಸಿ ವೀರರ ಅನೇಕ ಘಟನೆಗಳು ಮತ್ತು ಪಾತ್ರಗಳನ್ನು ಅವರ ಮನಸ್ಸಿನ ಮೇಲೆ ಜೀವಂತವಾಗಿ ತರಬೇಕಾಗುತ್ತದೆ, ನಂತರ ಅವರು ಸ್ವಾತಂತ್ರ್ಯದ ಹೋರಾಟದೊಂದಿಗೆ ತಮ್ಮನ್ನು ಸಂಯೋಜಿಸಿಕೊಳ್ಳುತ್ತಾರೆ. ಇಂದು ಒಂದು ಮಗು ಸ್ವಾತಂತ್ರ್ಯ ಹೋರಾಟದೊಂದಿಗೆ ತನ್ನನ್ನು ತೊಡಗಿಸಿಕೊಂಡರೆ, ಅವನು ತನ್ನ ಇಡೀ ಜೀವನವನ್ನು ಭಾರತದ ಅಭಿವೃದ್ಧಿಗೆ ಮುಡಿಪಾಗಿಡುತ್ತಾನೆ. ಅಮೃತ ಮಹೋತ್ಸವವು ಹೊಸ ತಲೆಮಾರಿನ ಭಾರತೀಯರನ್ನು ಸ್ವಾತಂತ್ರ್ಯದೊಂದಿಗೆ ಮತ್ತು ದೇಶದೊಂದಿಗೆ ಸಂಪರ್ಕ ಕಲ್ಪಿಸಲು ಒಂದು ಸುವರ್ಣಾವಕಾಶವಾಗಿದೆ.

ಅಮೃತ ಮಹೋತ್ಸವವನ್ನು ಆಯೋಜಿಸುವುದು, ವಾಸ್ತವವಾಗಿ, ಒಂದು ಮುನ್ನೋಟವಾಗಿದೆ. ಕಳೆದ 75 ವರ್ಷಗಳ ಸಾಧನೆಗಳನ್ನು ಮುಂದಿನ 25 ವರ್ಷಗಳವರೆಗೆ ಪ್ರಪಂಚದ ಮುಂದೆ ಇಡುವ ಸಂಕಲ್ಪವಾಗಿದೆ, ಆದ್ದರಿಂದ ಭಾರತವು 2047 ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವವನ್ನು ಆಚರಿಸುವಾಗ, ನಾವು ಭಾರತವನ್ನು ಎಲ್ಲಿಗೆ ಕೊಂಡೊಯ್ದಿದ್ದೇವೆ ಮತ್ತು ಜಗತ್ತಿನಲ್ಲಿ ಭಾರತದ ಸ್ಥಾನ ಏನಾಗಿದೆ ಎಂದು ನೋಡಲು ಸ್ಫೂರ್ತಿದಾಯಕವಾಗಿರುತ್ತದೆ. ಅದಕ್ಕೆ ಅಮೃತ ಮಹೋತ್ಸವವು ವೇದಿಕೆ ಸಿದ್ಧಪಡಿಸುತ್ತಿದೆ. 75 ವರ್ಷಗಳ ಈ ಉತ್ಸವವು, ಆ ವೇದಿಕೆಯ ಮೇಲೆ ಭಾರತ ಸ್ವಾತಂತ್ರ್ಯದ ಶತಮಾನೋತ್ಸವದ ಉತ್ಸಾಹವನ್ನು



**ದೃಷ್ಟಿಕೋನದ ದಾಖಲೆ**

2047 ರ ವೇಳೆಗೆ ಭಾರತವು ತನ್ನ ಸ್ವಾತಂತ್ರ್ಯದ 100 ವರ್ಷಗಳನ್ನು ಆಚರಿಸಿದಾಗ, ವಿಶ್ವಭಾರತಿಯ 25 ದೊಡ್ಡ ಗುರಿಗಳು ಯಾವುವು? ಎಂಬ ಬಗ್ಗೆ ವಿಷನ್ ಡಾಕ್ಯುಮೆಂಟ್ (ದೃಷ್ಟಿಕೋನದ ದಾಖಲೆ) ಅನ್ನು ಸಿದ್ಧಪಡಿಸುವಂತೆ 19 ಫೆಬ್ರವರಿ 2021 ರಂದು, ವಿಶ್ವಭಾರತಿಯ ವಿದ್ಯಾರ್ಥಿಗಳಿಗೆ ಪ್ರಧಾನ ಮಂತ್ರಿಯವರು ಹೇಳಿದರು.

**75 ಬೃಹತ್ ಆವಿಷ್ಕಾರಗಳು**

23 ಫೆಬ್ರವರಿ 2021 ರಂದು, ಪ್ರಧಾನಿ ನರೇಂದ್ರ ಮೋದಿ ಅವರು ಹಿಂದಿನ ವರ್ಷಗಳಲ್ಲಿ ಐಐಟಿ ಖರಗ್‌ಪುರದಿಂದ ಹೊರಹೊಮ್ಮಿರುವ 75 ಬೃಹತ್ ಆವಿಷ್ಕಾರಗಳು ಮತ್ತು ಪರಿಹಾರಗಳನ್ನು ಕಲೆಹಾಕುವಂತೆ ಮತ್ತು ಅವುಗಳನ್ನು ದೇಶ ಮತ್ತು ಜಗತ್ತಿಗೆ ಕೊಂಡೊಯ್ಯುವಂತೆ ಐಐಟಿ ಖರಗ್‌ಪುರದ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

**ಬ್ಯಾಂಕ್‌ಗಳು 75 ವರ್ಷಗಳ ದಾಖಲೆಯನ್ನು ಮುರಿಯಬೇಕು**

ದೇಶದ ಗುರಿಗಳನ್ನು ಸಾಧಿಸುವಲ್ಲಿ ಭಾರತದ ಬ್ಯಾಂಕಿಂಗ್ ವಲಯವು ಮೊದಲಿಗಿಂತ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು 12 ಡಿಸೆಂಬರ್ 2021 ರಂದು ಪ್ರಧಾನಿ ಮೋದಿ ಹೇಳಿದರು. ಆಜಾದಿ ಕಾ ಅಮೃತ ಮಹೋತ್ಸವದಲ್ಲಿ, ಪ್ರತಿ ಬ್ಯಾಂಕ್ ಶಾಖೆಯು 75 ವರ್ಷಗಳಲ್ಲಿ ಮಾಡಿರುವ ದಾಖಲೆಯನ್ನು ಒಂದೂವರೆ ಪಟ್ಟು, ಎರಡು ಪಟ್ಟು ಹೆಚ್ಚಿಸುವ ಗುರಿಯನ್ನು ಹೊಂದಬೇಕು ಎಂದು ಅವರು ಹೇಳಿದರು.

**ಕ್ರೀಡಾಪಟುಗಳು 75 ಶಾಲೆಗಳಿಗೆ ಭೇಟಿ ನೀಡಬೇಕು**

2023ರ ಆಗಸ್ಟ್ 15ರೊಳಗೆ 75 ಶಾಲೆಗಳಿಗೆ ಭೇಟಿ ನೀಡಿ, ಅಪೌಷ್ಟಿಕತೆ ನಿವಾರಣೆಗೆ ಆರೋಗ್ಯಕರ ಮತ್ತು ರುಚಿಕರವಾದ ಆಹಾರವನ್ನು ಸೇವಿಸುವ ಅಗತ್ಯ ಮತ್ತು ಮಕ್ಕಳೊಂದಿಗೆ ಆಟವಾಡುವ ಕುರಿತು ಚರ್ಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಟೋಕಿಯೊ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕ್ರೀಡಾಪಟುಗಳಿಗೆ ಮನವಿ ಮಾಡಿದರು. ನೀರಜ್ ಚೋಪ್ರಾ ಶಾಲಾ ಪ್ರವಾಸದ ಅಭಿಯಾನವನ್ನು ಪ್ರಾರಂಭಿಸಿದರು.



## 75 ಹಳ್ಳಿಗಳನ್ನು ದತ್ತು ಪಡೆಯಿರಿ

ಎಲ್ಲಾ ಶಿಕ್ಷಣ ತಜ್ಞರು, ಕೃಷಿ ವಿಜ್ಞಾನಿಗಳು, ಸಂಸ್ಥೆಗಳು ಆಜಾದಿ ಕಾ ಅಮೃತ ಮಹೋತ್ಸವಕ್ಕಾಗಿ ತಮ್ಮ ಗುರಿಗಳನ್ನು ನಿಗದಿಪಡಿವಂತೆ ಪ್ರಧಾನಮಂತ್ರಿ ಹೇಳಿದರು. 75 ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವ ಮೂಲಕ ಪರಿವರ್ತನೆ ಮಾಡುವಲ್ಲಿ ಮುಂದಾಳತ್ವ ವಹಿಸಿ. ಇಂತಹ ಅಭಿಯಾನಗಳನ್ನು 75 ಶಾಲೆಗಳಲ್ಲಿಯೂ ನಡೆಸಬಹುದು. ದೇಶದ ಪ್ರತಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಇಂತಹ ಅಭಿಯಾನವನ್ನು ಪ್ರಾರಂಭಿಸಬಹುದು ಎಂದರು.

## 75 ವರ್ಷಗಳು ಮತ್ತು ಮಾಧ್ಯಮ

ಸಂಸದ್ ಟಿವಿ ಚಾಲನೆಯ ಸಮಾರಂಭದಲ್ಲಿ ಪ್ರಧಾನಮಂತ್ರಿಯವರು ಗತಕಾಲದ ಹೆಮ್ಮೆ ಮತ್ತು ಭವಿಷ್ಯದ ಸಂಕಲ್ಪ ನಮ್ಮಲ್ಲಿದೆ ಎಂದು ಹೇಳಿದರು. ಈ ಎರಡೂ ಕ್ಷೇತ್ರಗಳಲ್ಲಿ ಮಾಧ್ಯಮಗಳ ಪಾತ್ರ ಬಹುದೊಡ್ಡದು. ಮಾಧ್ಯಮಗಳು ಸ್ವಚ್ಛ ಭಾರತ ಅಭಿಯಾನದಂತಹ ವಿಷಯಕ್ಕೆ ಮಹತ್ವ ನೀಡಿದಾಗ ಅದು ಜನರಿಗೆ ವೇಗವಾಗಿ ತಲುಪುತ್ತದೆ. ಆಜಾದಿ ಕಾ ಅಮೃತ ಮಹೋತ್ಸವದಲ್ಲಿ ದೇಶವಾಸಿಗಳ ಪ್ರಯತ್ನಗಳನ್ನು ಪ್ರಚಾರ ಮಾಡುವ ದೊಡ್ಡ ಕೆಲಸವನ್ನು ಮಾಧ್ಯಮಗಳು ಮಾಡಬಹುದು. ಉದಾಹರಣೆಗೆ, ಟಿವಿ ಚಾನೆಲ್ಗಳು ಸ್ವಾತಂತ್ರ್ಯ ಹೋರಾಟದ 75 ಸಂಚಿಕೆಗಳನ್ನು ಯೋಜಿಸಬಹುದು, ಸಾಕ್ಷ್ಯಚಿತ್ರಗಳನ್ನು ಮಾಡಬಹುದು. ಪತ್ರಿಕೆಗಳು ಅಮೃತ ಮಹೋತ್ಸವಕ್ಕೆ ಸಂಬಂಧಿಸಿದ ಪುರವಣಿಗಳನ್ನು ಪ್ರಕಟಿಸಬಹುದು. ಡಿಜಿಟಲ್ ಮಾಧ್ಯಮವು ನೇರವಾಗಿ ರಸಪ್ರಶ್ನೆ ಸ್ಪರ್ಧೆಗಳಂತಹ ಉಪಕ್ರಮಗಳೊಂದಿಗೆ ಯುವಕರನ್ನು ತೊಡಗಿಸಿಕೊಳ್ಳಬಹುದು ಎಂದರು.

## 75 ವರ್ಷಗಳು ಮತ್ತು ರಫ್ತುಗಳು

ವಿದೇಶದಲ್ಲಿರುವ ಭಾರತೀಯ ಮಿಷನ್ಗಳ ಮುಖ್ಯಸ್ಥರು ಮತ್ತು ವ್ಯಾಪಾರ ಮತ್ತು ವಾಣಿಜ್ಯ ವಲಯದ ಪಾಲುದಾರರೊಂದಿಗೆ ಸಂವಾದ ನಡೆಸಿದ ಪ್ರಧಾನಮಂತ್ರಿಯವರು, ನಾವು ನಮ್ಮ ಸದ್ಯದ ರಫ್ತು ಪ್ರಮಾಣವನ್ನು ಹೆಚ್ಚಿಸಬೇಕು ಮತ್ತು ಹೊಸ ಉತ್ಪನ್ನಗಳಿಗೆ ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸಲು ಕೆಲಸ ಮಾಡಬೇಕು ಎಂದು ಹೇಳಿದರು. ಸ್ವಾತಂತ್ರ್ಯದ 75 ವರ್ಷಗಳ ಅಂಗವಾಗಿ ಐದು ಹೊಸ ರಫ್ತು ತಾಣಗಳನ್ನು ಸೇರಿಸಲು ವಿದೇಶದಲ್ಲಿರುವ ಮಿಷನ್ಗಳು ಕೆಲಸ ಮಾಡಬೇಕು ಎಂದರು.

ಪ್ರೇರೇಪಿಸುವ ದೃಢವಾದ ದಿಕ್ಕಿನತ್ತ ಸಾಗುತ್ತಿದೆ.

## ಇಂದಿನ ಅಭಿವೃದ್ಧಿ, ನಾಳಿನ ಪರಂಪರೆ

ಭಾರತದ ಇತಿಹಾಸವು ಬಹುತೇಕ ಕಾಲದಷ್ಟು ಹಳೆಯದು, ಸೂರ್ಯನಷ್ಟು ಪ್ರಕಾಶಮಾನವಾದುದು ಮತ್ತು ಆಕಾಶದಷ್ಟು ವಿಶಾಲವಾದುದು. ಜ್ಞಾನ-ವಿಜ್ಞಾನ ಮತ್ತು ಸಮೃದ್ಧಿ, ಶೌರ್ಯ-ಆಧ್ಯಾತ್ಮಿಕತೆ ಮತ್ತು ಕಲೆಯಿಂದ ಅಲಂಕೃತವಾದ ಭಾರತವನ್ನು ಬ್ರಿಟಿಷ್ ಸರ್ಕಾರವು ಆಕ್ರಮಿಸಿದಾಗ, ದೇಶದಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದ ಜನರು ಅದಕ್ಕಾಗಿ ಮಡಿದರು. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ವಿಶಿಷ್ಟವಾದ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅಸಂಖ್ಯಾತ ಬಲಿದಾನ ಹಾಗೂ ತ್ಯಾಗದ ನಂತರ ವಿದೇಶಿಯರು ಈ ದೇಶವನ್ನು ತೊರೆದರು. ಆಗ ಉಕ್ಕಿನ ಮನುಷ್ಯ ಸರ್ದಾರ್ ಪಟೇಲರು ಅಖಂಡ ಭಾರತವನ್ನು ಕಬ್ಬಿಣದಂತೆ ಬಲಗೊಳಿಸಿದರು. ಒಂದು ಕಾಲದಲ್ಲಿ ಹಾವಾಡಿಸುವವರ ನಾಡು ಎಂದು ಕರೆಸಿಕೊಳ್ಳುತ್ತಿದ್ದ ಈ ದೇಶ ಇಂದು ತನ್ನ ಮೊದಲ ಪ್ರಯತ್ನದಲ್ಲಿಯೇ ಮಂಗಳ ಗ್ರಹದಲ್ಲಿ ಯಶಸ್ವಿಯಾಗಿ ಇಳಿದಿದೆ. "ಮೇಕ್ ಇನ್ ಇಂಡಿಯಾ"- ಈ ಮೂರು ಪದಗಳು ದೇಶದ ಕೀರ್ತಿಯನ್ನು ಎಲ್ಲೆಡೆ ಹೆಚ್ಚಿಸಿವೆ. ಇಂದು, ಪ್ರತಿ ಮನೆಯಲ್ಲೂ ವಿದ್ಯುತ್ ಇದೆ, ಪ್ರತಿಯೊಬ್ಬರ ಕೈನಲ್ಲಿ ಮೊಬೈಲ್ ಫೋನ್ ಇದೆ, ಪ್ರತಿಯೊಬ್ಬರ ಜೇಬಿನಲ್ಲೂ ಡಿಜಿಟಲ್ ಗುರುತಿದೆ, ಪ್ರತಿ ಖಾತೆಗೆ ನೇರ ಪ್ರಯೋಜನಗಳು ತಲುಪುತ್ತಿವೆ, ಪ್ರತಿ ಅಡುಗೆಮನೆಯಲ್ಲಿ ಶುದ್ಧ ಇಂಧನವಿದೆ ಮತ್ತು ಪ್ರತಿ ಮನೆಯಲ್ಲೂ ಶೌಚಾಲಯ ವ್ಯವಸ್ಥೆ ಇದೆ, ಇವೆಲ್ಲವೂ ಹೆಚ್ಚು ಗೌರವಯುತ ಜೀವನಕ್ಕೆ ಕೊಡುಗೆ ನೀಡುತ್ತವೆ. ಸ್ವಚ್ಛತೆ ಮತ್ತು ಯೋಗ ನವ ಭಾರತದ ಸಂಸ್ಕಾರಗಳಾಗಿವೆ. ವಸುಧೈವ ಕುಟುಂಬಕಂ ಎಂಬ ಮನೋಭಾವವು 'ಇಡೀ ಜಗತ್ತು ನಮ್ಮ ಕುಟುಂಬ'ಎಂಬ ಚಿಂತನೆಯಾಗಿ ಮಾರ್ಪಟ್ಟಿದೆ. ತಾವು ಹೋದ ನಂತರ ಭಾರತ ಛಿದ್ರವಾಗಲಿದೆ ಎಂದು ಬ್ರಿಟಿಷರು ಭವಿಷ್ಯ ನುಡಿದಿದ್ದರು, ಆದರೆ ಬಹುಶಃ ಅದೇ ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿ ಅರಳುತ್ತದೆ ಎಂದು ಅವರು ನಿರೀಕ್ಷಿಸಿರಲಿಲ್ಲ. ಇಂದು ಭಾರತವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯನ್ನು ಹೊಂದಿರುವ ಒಕ್ಕೂಟ ರಾಷ್ಟ್ರವಾಗಿದೆ. ಸ್ವಾವಲಂಬನೆ ಎನ್ನುವುದು ಕೇವಲ ಒಂದು ವಾಕ್ಯವಲ್ಲ; ಇದು 130 ಕೋಟಿ ಭಾರತೀಯರ ಮಂತ್ರವಾಗಿದೆ. ಜನನ ಪ್ರಮಾಣ ಪತ್ರ ಪಡೆಯಲು, ಬಿಲ್ ಪಾವತಿಸಲು, ಪಡಿತರ ಪಡೆಯಲು, ದಾಖಲಾತಿ ಪಡೆಯಲು, ಫಲಿತಾಂಶ ಮತ್ತು ಪ್ರಮಾಣ ಪತ್ರ ಪಡೆಯಲು 8-10 ವರ್ಷಗಳ ಹಿಂದೆ ಜನ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲಬೇಕಾಗಿತ್ತು. ಆದರೆ ಈಗ ಎಲ್ಲವೂ ಸುಗಮವಾಗಿದೆ. ತಂತ್ರಜ್ಞಾನದ ಮೂಲಕ ಜೀವನವನ್ನು ಸುಲಭಗೊಳಿಸುವ ಸೌಲಭ್ಯಗಳನ್ನು ಆನ್‌ಲೈನ್ ಮೂಲಕ ಪಡೆಯುವ ವ್ಯವಸ್ಥೆ ಮಾಡಲಾಗಿದೆ. ಜನನ ಪ್ರಮಾಣ ಪತ್ರದಿಂದ ಹಿಡಿದು

“

ಜಗತ್ತಿಗೆ 21ನೇ ಶತಮಾನ ಭಾರತದ ಶತಮಾನವಾಗಿದೆ. ನಾವು ಇದನ್ನು ನಿರಂತರವಾಗಿ ಕೇಳುತ್ತಿದ್ದೇವೆ, ಇದನ್ನು ಪದೇ ಪದೇ ಹೇಳಲಾಗುತ್ತಿದೆ. ಆದರೆ ನಾನು ಭಾರತದ ಬಗ್ಗೆ ಹೇಳುವುದಾದರೆ, ಈ ಶತಮಾನ ಭಾರತಕ್ಕೆ ಕರ್ತವ್ಯಗಳ ಶತಮಾನವಾಗಿದೆ. ಈ ಶತಮಾನದಲ್ಲಿ, ಮುಂದಿನ 25 ವರ್ಷಗಳಲ್ಲಿ ನಾವು ನವ ಭಾರತದ ಸುವರ್ಣ ಗುರಿಯನ್ನು ತಲುಪಬೇಕಾಗಿದೆ. ನಮ್ಮ ಕರ್ತವ್ಯಗಳು ನಮ್ಮನ್ನು ಈ ಗುರಿಗಳತ್ತ ಕೊಂಡೊಯ್ಯುತ್ತವೆ. ಆದ್ದರಿಂದ ಈ 25 ವರ್ಷಗಳು ದೇಶಕ್ಕಾಗಿ ಕರ್ತವ್ಯದ ಹಾದಿಯಲ್ಲಿ ನಡೆಯುವ ವರ್ಷಗಳು. ಈ 25 ವರ್ಷಗಳು ಕರ್ತವ್ಯ ಪ್ರಜ್ಞೆಗೆ ಸಮರ್ಪಿಸಿಕೊಳ್ಳುವ ಅವಧಿಯಾಗಿದೆ.

**-ನರೇಂದ್ರ ಮೋದಿ, ಪ್ರಧಾನಮಂತ್ರಿ**

ಹಿರಿಯ ನಾಗರಿಕರ ಜೀವನ ಪ್ರಮಾಣ ಪತ್ರದವರೆಗೆ ಬಹುತೇಕ ಸರ್ಕಾರಿ ಸೇವೆಗಳು ಈಗ ಡಿಜಿಟಲ್ ಆಗಿವೆ. ಭಾರತವು ಈಗ ವಿಶ್ವದ ಅತ್ಯುತ್ತಮ ಡಿಜಿಟಲ್ ಆಡಳಿತ ಮೂಲಸೌಕರ್ಯಗಳನ್ನು ಹೊಂದಿದೆ. ದೇಶದ ಬಡ ಮತ್ತು ಮಧ್ಯಮ ವರ್ಗದವರು ಜನ್ ಧನ್-ಮೊಬೈಲ್ ಮತ್ತು ಆಧಾರ್ (ಜೆಎಎಂ ಟ್ರಿನಿಟಿ) ನಿಂದ ಹೆಚ್ಚು ಪ್ರಯೋಜನ ಪಡೆದಿದ್ದಾರೆ. ಇಂದು, ಶಾಲಾ ಹಂತದಲ್ಲಿ ಉದ್ಯಮ 4.0 ಗೆ ಅಗತ್ಯವಾದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಒತ್ತು ನೀಡಲಾಗಿದೆ. ಇಂದು, ಸುಮಾರು 10,000 ಅಟಲ್ ಟಿಂಕರಿಂಗ್ ಲ್ಯಾಬ್ಗಳಲ್ಲಿ 75 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನಾವೀನ್ಯತೆಗಾಗಿ ಕೆಲಸ ಮಾಡುತ್ತಿದ್ದಾರೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ತಂತ್ರಜ್ಞಾನಕ್ಕೂ ಆದ್ಯತೆ ನೀಡಿದೆ. ದೇಶದಲ್ಲಿ ಅಟಲ್ ಇನ್ಕ್ಯುಬೇಷನ್ ಸೆಂಟರ್ಗಳ ವ್ಯಾಪಕ ಜಾಲವನ್ನು ಸೃಷ್ಟಿಸಲಾಗುತ್ತಿದೆ. ಅದೇ ರೀತಿ, ಪಿಎಂ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ ಅಂದರೆ ಪಿಎಂ-ದಿಶಾ ದೇಶದಲ್ಲಿ ಡಿಜಿಟಲ್ ಸಬಲೀಕರಣವನ್ನು ಉತ್ತೇಜಿಸಲು ಅಭಿಯಾನವನ್ನು



**75 ಹೊಸ ಉತ್ಪನ್ನಗಳನ್ನು ಸೇರಿಸಿ**

ಎನ್ಆರ್ಐಗಳ ರಾಜ್ಯವಾರು ತಂಡವನ್ನು ರಚಿಸುವ ಮೂಲಕ ಆ ರಾಜ್ಯದೊಂದಿಗೆ ರಫ್ತು ಕುರಿತು ವರ್ಚುವಲ್ ಶೃಂಗಸಭೆಯನ್ನು ಆಯೋಜಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಇದರಲ್ಲಿ, ಆ ರಾಜ್ಯದ 5 ಅಥವಾ 10 ಪ್ರಮುಖ ಆದ್ಯತೆಯ ವಸ್ತುಗಳನ್ನು ವಿಶ್ವದ ಕನಿಷ್ಠ 75 ದೇಶಗಳಿಗೆ ರಫ್ತು ಮಾಡಲು ನಿರ್ಧರಿಸಬೇಕು. ಸ್ವಾತಂತ್ರ್ಯದ 75 ವರ್ಷಗಳ ನಂತರ ಜಗತ್ತನ್ನು ತಲುಪಲು ನಾವು ಹೊಸ ಮಾರ್ಗಗಳನ್ನು ಅಳವಡಿಸಿಕೊಳ್ಳೋಣ ಎಂದರು.

**'ಸಖಿ ಬಹನೆ' ಮತ್ತು 75 ಗಂಟೆಗಳು**

ಆತ್ಮನಿರ್ಭರ ನಾರಿ ಶಕ್ತಿಯೊಂದಿಗಿನ ಸಂವಾದದಲ್ಲಿ ಪ್ರಧಾನಮಂತ್ರಿಯವರು, ನಾವು 75 ವರ್ಷಗಳ ಸ್ವಾತಂತ್ರ್ಯವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ನಿಮ್ಮ ಹಳ್ಳಿಗಳಲ್ಲಿ ವರ್ಷದಲ್ಲಿ ಕನಿಷ್ಠ 75 ಗಂಟೆಗಳ ಕಾಲ ಗ್ರಾಮದಲ್ಲಿ ಕೆಲವು ನೈರ್ಮಲ್ಯ ಕಾರ್ಯಗಳನ್ನು ಮಾಡುವ ಬಗ್ಗೆ ನೀವು ನಿರ್ಧರಿಸಬಹುದು ಎಂದು ಹೇಳಿದರು. ಈ ಆಗಸ್ಟ್ 15 ರಿಂದ ಮುಂದಿನ ವರ್ಷ ಆಗಸ್ಟ್ 15 ರವರೆಗೆ ಸಖಿ ಮಂಡಲದ ಎಲ್ಲಾ ಸಹೋದರಿಯರು ಇಂತಹ ಸಂಕಲ್ಪವನ್ನು ಮಾಡಬಹುದು. ತಮ್ಮ ಗ್ರಾಮದಲ್ಲಿ ನೀರಿನ ಸಂರಕ್ಷಣೆ, ಬಾವಿಗಳ ದುರಸ್ತಿ ಮತ್ತು ಕೆರೆಗಳನ್ನು ಪುನರುಜ್ಜೀವನಗೊಳಿಸಬಹುದು ಎಂದರು.





## ಆಟಿಕೆಗಳ ಮೂಲಕ ಸ್ವಾತಂತ್ರ್ಯದ ಕಥೆ

24 ಜೂನ್ 2021 ರಂದು ಟಾಯ್ಕ್ಯಾಥಾನ್ ಅನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಯವರು, ಅಮೃತ ಮಹೋತ್ಸವದ ಸಂದರ್ಭದಲ್ಲಿ ಕ್ರೀಡೆ ಮತ್ತು ಆಟಿಕೆಗಳ ಕ್ಷೇತ್ರದಲ್ಲಿ ಹೊಸತನಕ್ಕೆ ಕರೆ ನೀಡಿದರು. ಸ್ವಾತಂತ್ರ್ಯ ಚಳವಳಿ, ಕ್ರಾಂತಿಕಾರಿಗಳ ಶೌರ್ಯ, ನಾಯಕತ್ವದ ಘಟನೆಗಳಿಗೆ ಸಂಬಂಧಿಸಿದ ಕಥೆಗಳನ್ನು ಆಟದ ರೂಪದಲ್ಲಿ ಸಿದ್ಧಪಡಿಸಬೇಕು ಎಂದರು.

## 75 ಘಟನೆಗಳನ್ನು ಶೋಧಿಸುವ ಕಾರ್ಯ

ವಿದ್ಯಾರ್ಥಿಗಳೊಂದಿಗಿನ ಸಂವಾದದಲ್ಲಿ ಪ್ರಧಾನಮಂತ್ರಿಯವರು, ಸ್ವಾತಂತ್ರ್ಯದ 75 ವರ್ಷಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳು ದೇಶದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆಯೂ ತಿಳಿದುಕೊಳ್ಳಬೇಕು ಎಂದು ಹೇಳಿದರು. ಇದಕ್ಕಾಗಿ, ದೇಶವು ಅಭಿಯಾನವನ್ನು ಪ್ರಾರಂಭಿಸಿದೆ ಮತ್ತು ನೀವು ಈ ಅಭಿಯಾನಕ್ಕೆ ಸೇರಬೇಕು. ವಿದ್ಯಾರ್ಥಿಗಳು ತಮ್ಮ ರಾಜ್ಯದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ 75 ಘಟನೆಗಳನ್ನು ಶೋಧಿಸಬೇಕು. ಅವು ವ್ಯಕ್ತಿಯ ಹೋರಾಟಕ್ಕೆ ಸಂಬಂಧಿಸಿರಬಹುದು, ಕ್ರಾಂತಿಗೆ ಸಂಬಂಧಿಸಿರಬಹುದು. ಈ ಘಟನೆಗಳನ್ನು ನಿಮ್ಮ ಮಾತೃಭಾಷೆಯಲ್ಲಿ ವಿವರವಾಗಿ ಬರೆಯಿರಿ. ಇದರ ಹೊರತಾಗಿ ಹಿಂದಿ-ಇಂಗ್ಲಿಷ್ ನಲ್ಲಿ ಬರೆದರೆ ಇನ್ನೂ ಒಳ್ಳೆಯದು ಎಂದರು.




## 75 ಜಿಲ್ಲೆಗಳಲ್ಲಿ 75ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳು

ಸ್ವಾತಂತ್ರ್ಯದ 75 ವರ್ಷಗಳ ಮಹತ್ವದ ಸಂದರ್ಭದಲ್ಲಿ, ದೇಶದ ಕನಿಷ್ಠ 75 ಜಿಲ್ಲೆಗಳಲ್ಲಿ 75 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳು ಇರುತ್ತವೆ.

ನಡೆಸುತ್ತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಸಮಾಜದ ಅನನ್ಯ ಕೊಡುಗೆಯನ್ನು ಪ್ರತಿ ಮನೆಗೂ ತಲುಪಿಸಲು ಅಮೃತ ಮಹೋತ್ಸವದಲ್ಲಿ ಹಲವಾರು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಬುಡಕಟ್ಟು ವಸ್ತುಸಂಗ್ರಹಾಲಯಗಳನ್ನು ದೇಶದ ಬುಡಕಟ್ಟು ಜನರ ಹೆಮ್ಮೆ ಮತ್ತು ಪರಂಪರೆಯನ್ನು ಪ್ರದರ್ಶಿಸಲು ಪ್ರಾರಂಭಿಸಲಾಗುತ್ತಿದೆ. ಕಳೆದ ವರ್ಷ, ನವೆಂಬರ್ 15 ರಂದು, ದೇಶವು ಲಾರ್ಡ್ ಬಿರ್ಸಾ ಮುಂಡಾ ಜಯಂತಿಯನ್ನು "ರಾಷ್ಟ್ರೀಯ ಬುಡಕಟ್ಟು ಹೆಮ್ಮೆಯ ದಿನ" ಎಂದು ಆಚರಿಸಲು ಪ್ರಾರಂಭಿಸಿತು. ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಹಿಂದಿನ 75 ವರ್ಷಗಳ ಸಾಧನೆಗಳೊಂದಿಗೆ ಸಂಬಂಧ ಹೊಂದುವ ಸವಲತ್ತು ಹೊಂದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಸಂಭವಿಸಿದ ಕ್ರಾಂತಿಕಾರಕ ಮತ್ತು ಪರಿವರ್ತನೆಯ ಬದಲಾವಣೆಗಳು ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಮುಂಚೂಣಿಯಲ್ಲಿ ಇರಿಸುವಲ್ಲಿ ಯಶಸ್ವಿಯಾಗಿವೆ. ಎಲ್ಲರ ಪ್ರಯತ್ನ ಎಂಬ ಮಂತ್ರದೊಂದಿಗೆ ಅಭಿವೃದ್ಧಿಯ ಎಲ್ಲ ಕ್ಷೇತ್ರಗಳಲ್ಲೂ ಹಲವು ದಾಖಲೆಗಳು ಸೃಷ್ಟಿಯಾಗಿವೆ. ಇದು ಇತಿಹಾಸ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಮತ್ತು ಉತ್ತೇಜಿಸುವಲ್ಲಿ ಯಶಸ್ವಿಯಾಯಿತು. ಆದರೆ ಇದು ಕೇವಲ ಒಂದು ವೇದಿಕೆ, ರಾಷ್ಟ್ರದ ಕೊನೆಯ ನಿಲ್ದಾಣವಲ್ಲ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು 75ನೇ ಸ್ವಾತಂತ್ರ್ಯ ವರ್ಷದಿಂದ ಸ್ವಾತಂತ್ರ್ಯದ ಶತಮಾನೋತ್ಸವದವರೆಗಿನ 25 ವರ್ಷಗಳ ಅವಧಿಯನ್ನು ಅಮೃತ ಕಾಲ ಎಂದು ಆಚರಿಸಲು ನಿರ್ಧರಿಸಿದರು ಮತ್ತು ಅಮೃತ ಮಹೋತ್ಸವದ ವರ್ಷದಲ್ಲಿ ದೇಶದ ಜನತೆಗೆ ಕರೆ ನೀಡಿದರು. ಭಾರತವನ್ನು ಮುನ್ನಡೆಸಲು ನಾವು ಕೆಲವು ವೈಯಕ್ತಿಕ ಸಂಕಲ್ಪಗಳನ್ನು ಮಾಡೋಣ. ಗ್ರಾಮ ಪಂಚಾಯತಿಯಿಂದ ಸಂಸತ್ತಿನವರೆಗೆ ಪ್ರತಿಯೊಂದು ಸರ್ಕಾರಿ ಇಲಾಖೆಗಳು ಗುರಿಯನ್ನು ಇಟ್ಟುಕೊಂಡು ದೇಶವನ್ನು ಮುನ್ನಡೆಸುವ ನಿರ್ಧಾರ ತೆಗೆದುಕೊಳ್ಳಬೇಕು. ಇದು ಸಂಕಲ್ಪಗಳನ್ನು ಮಾಡುವ ವರ್ಷವಾಗಿದೆ ಮತ್ತು ಈ 25 ವರ್ಷಗಳ ಅಮೃತ ಕಾಲವು ಅವುಗಳನ್ನು ಈಡೇರಿಸುವ ಸಮಯವಾಗಿದೆ. ಮುಂದಿನ 25 ವರ್ಷಗಳಲ್ಲಿ ಭಾರತವು ದೀರ್ಘಾವಧಿಯ ಚಿಂತನೆಯೊಂದಿಗೆ ಈಡೇರಿಸುವ ಸಂಕಲ್ಪಗಳು ಶತಮಾನದ ಪರಂಪರೆಯಾಗುತ್ತವೆ. ಇಂದಿನ ಭಾರತದ ಅಭಿವೃದ್ಧಿ ಪಯಣವು ನಾಳಿನ ಭಾರತಕ್ಕೆ ಭವ್ಯವಾದ ಮತ್ತು ಸಮೃದ್ಧ ಪರಂಪರೆಯನ್ನು ನೀಡುತ್ತದೆ ಎಂದು ಪ್ರಧಾನಿ ಮೋದಿಯವರು ನಂಬಿದ್ದಾರೆ.

### 'ಸಬ್ ಕಾ ಪ್ರಯಾಸ್' ಮತ್ತು ಸುವರ್ಣ ಭಾರತದೆಡೆಗೆ ಪಯಣ

ಇಂದು ಭಾರತವು ಐಟಿ-ಡಿಜಿಟಲ್ ತಂತ್ರಜ್ಞಾನದ ಪತಾಕೆಯನ್ನು ಹಾರಿಸುತ್ತಿದೆ. ಇಂಟರ್ನೆಟ್ ಡೇಟಾ ಬಳಕೆಯಲ್ಲಿ ದಾಖಲೆಗಳನ್ನು ಮುರಿಯುತ್ತಿದೆ, ಪ್ರಪಂಚದಾದ್ಯಂತದ ಎಲ್ಲಾ ಡಿಜಿಟಲ್ ವಹಿವಾಟುಗಳಲ್ಲಿ ಭಾರತವೊಂದರಲ್ಲಿಯೇ ಶೇ.40 ರಷ್ಟಿದೆ. 21ನೇ ಶತಮಾನದ ನವ ಭಾರತದಲ್ಲಿ ಜನರು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿರುವ ವೇಗವು ಯಾರನ್ನಾದರೂ ಚಕಿತಗೊಳಿಸುತ್ತದೆ. ಕಳೆದ ಕೆಲವು ವರ್ಷಗಳ ಅಭಿವೃದ್ಧಿಯ ಪಯಣವು ಭಾರತಕ್ಕೆ ಹೊಸ ಗುರುತನ್ನು ನೀಡಿದೆ. ಮಾಡುವುದು ಮತ್ತು ಸಮಯಕ್ಕೆ ಸರಿಯಾಗಿ ಮಾಡುವುದು ಇಂದಿನ ಭಾರತದ ಗುರುತಾಗಿದೆ. ಭಾರತವು ಈ ಸಂಕಲ್ಪದೊಂದಿಗೆ ಮುಂದುವರಿಯುತ್ತಿದೆ. ಭಾರತವು ಪ್ರಗತಿ ಮತ್ತು ಅಭಿವೃದ್ಧಿಗಾಗಿ ಕಾತರಿಸುತ್ತಿದೆ. ಭಾರತ ತನ್ನ ಕನಸುಗಳ ಬಗ್ಗೆ ಕಾತುರ ಹೊಂದಿದೆ. ತನ್ನ ಸಂಕಲ್ಪದ ಕನಸುಗಳನ್ನು ಸಾಧಿಸುವ ಕಾತುರ ಹೊಂದಿದೆ. ಭಾರತ ಇಂದು ತನ್ನ ಸ್ವಂತ ಶಕ್ತಿಯನ್ನು ನಂಬಿದೆ. ಅದಕ್ಕೆ ತನ್ನ ಬಗ್ಗೆ ನಂಬಿಕೆ ಇದೆ. ಭಾರತವು 2030 ರ ವೇಳೆಗೆ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಶೇಕಡಾ 40 ರಷ್ಟನ್ನು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ಉತ್ಪಾದಿಸಬೇಕು ಎಂದು 2016 ರಲ್ಲಿ ನಿರ್ಧರಿಸಿತು, ಆದರೆ ಭಾರತವು ಗುರಿಗಿಂತ ಎಂಟು ವರ್ಷಗಳ ಮುಂಚಿತವಾಗಿಯೇ ಇದನ್ನು ಸಾಧಿಸಿದೆ. ಗ್ಯಾಸೋಲಿನ್ನಲ್ಲಿ ಶೇ.10 ರಷ್ಟು ಎಥೆನಾಲ್ ಮಿಶ್ರಣದ ಗುರಿಯನ್ನು ನಿಗದಿತ ಸಮಯಕ್ಕಿಂತ ಐದು ತಿಂಗಳ ಮುಂಚಿತವಾಗಿ ಸಾಧಿಸಲಾಯಿತು. ಕೋವಿಡ್ನಂತಹ ವಿಪತ್ತನ್ನು ಎದುರಿಸಿದ ಮತ್ತು 200 ಕೋಟಿ ಡೋಸ್ ಲಸಿಕೆಗಳನ್ನು ನೀಡಿದ ಪ್ರಯಾಣವು ಸಂಶೋಧನೆಯ ವಿಷಯವಾಗುತ್ತಿದೆ. ಮೇಡ್ ಇನ್ ಇಂಡಿಯಾ ಲಸಿಕೆಯು ಕೋವಿಡ್‌ನಿಂದ ಭಾರತ ಮತ್ತು ವಿಶ್ವದ ಕೋಟ್ಯಂತರ ಜನರ ಜೀವಗಳನ್ನು ಉಳಿಸಿದೆ. ಕೋವಿಡ್ ಸಮಯದಲ್ಲಿ, ಭಾರತವು ಕಳೆದ ಎರಡು ವರ್ಷಗಳಿಂದ 80 ಕೋಟಿ ಬಡವರಿಗೆ ಉಚಿತ ಆಹಾರ ಧಾನ್ಯಗಳನ್ನು ನೀಡಿದೆ. ಇಂದು, ಭಾರತದಲ್ಲಿ ಪ್ರತಿ ತಿಂಗಳು ಸರಾಸರಿ 5000 ಪೇಟೆಂಟ್‌ಗಳನ್ನು ಸಲ್ಲಿಸಲಾಗುತ್ತಿದೆ. ಇಂದು, ಭಾರತವು ಪ್ರತಿ ತಿಂಗಳು ಸರಾಸರಿ 500 ಕ್ಕೂ ಹೆಚ್ಚು ಆಧುನಿಕ ರೈಲು ಬೋಗಿಗಳನ್ನು ತಯಾರಿಸುತ್ತಿದೆ. ಇಂದು, ಭಾರತವು ಪ್ರತಿ ತಿಂಗಳು ಸರಾಸರಿ 18 ಲಕ್ಷ ಕುಟುಂಬಗಳನ್ನು ಕೊಳವೆ ನೀರಿನ (ನಲ್ ಸೇ ಜಲ್) ಯೋಜನೆಯೊಂದಿಗೆ ಜೋಡಿಸುತ್ತಿದೆ.

ಸ್ಟಾರ್ಟ್‌ಅಪ್ ಇಂಡಿಯಾ ಅಭಿಯಾನವು ಪರಿಕಲ್ಪನೆಯ ಹಂತದಲ್ಲಿತ್ತು, ಈ ಪದವು ಹೆಚ್ಚಿನ ಜನರಿಗೆ ತಿಳಿದೇ ಇರಲಿಲ್ಲ. ಆದರೆ, ಇತ್ತೀಚಿನ ಪ್ರಯತ್ನಗಳ ಪರಿಣಾಮವಾಗಿ, ಭಾರತವು ಈಗ ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಇದಲ್ಲದೆ, ಭಾರತದಲ್ಲಿ ಸರಾಸರಿ ಹತ್ತು ದಿನಗಳಿಗೊಮ್ಮೆ ಯುನಿಕಾರ್ನ್‌ಗಳು ಸೃಷ್ಟಿಯಾಗುತ್ತಿವೆ.



### 75 ದಂತಕಥೆಗಳು-75 ಸ್ಥಳಗಳು

ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ 75 ಮಹಾಪುರುಷರ ಪಟ್ಟಿಯನ್ನು ಮಾಡಿ, ಅವರ ವೇಷಭೂಷಣಗಳನ್ನು ಕಂಡುಹಿಡಿಯಿರಿ, ಅವರ ಪ್ರತಿಯೊಂದು ವಾಕ್ಯವನ್ನು ಮಾತನಾಡಿ, ಸ್ಪರ್ಧೆಯನ್ನು ಏರ್ಪಡಿಸಿ, ಶಾಲೆಗಳಲ್ಲಿ ಭಾರತದ ಭೂಪಟದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ 75 ಸ್ಥಳಗಳನ್ನು ಗುರುತಿಸಿ ಮತ್ತು ಬಾರ್ಡೋಲಿ ಎಲ್ಲಿದೆ? ಚಂಪಾರಣ್ ಎಲ್ಲಿದೆ? ಹೇಳಿ ಎಂದು ಮಕ್ಕಳಿಗೆ ಕೇಳಬೇಕು.

### 75 ಘಟನೆಗಳ ಕಾನೂನು ಸಮರ

ಕಾನೂನು ಬೋಧಿಸುವ ಶಾಲಾ-ಕಾಲೇಜುಗಳು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾನೂನು ಹೋರಾಟ ನಡೆಸಿದ 75 ಘಟನೆಗಳನ್ನು ಪತ್ತೆ ಹಚ್ಚಬೇಕು ಕಾನೂನು ಹೋರಾಟ ನಡೆಸಿದವರು ಯಾರು? ಸ್ವಾತಂತ್ರ್ಯ ಹೋರಾಟಗಾರರನ್ನು ಉಳಿಸುವ ಪ್ರಯತ್ನಗಳು ಹೇಗೆ ನಡೆದವು? ಬ್ರಿಟಿಷ್ ಸಾಮ್ರಾಜ್ಯದ ನ್ಯಾಯಾಂಗದ ವರ್ತನೆ ಹೇಗಿತ್ತು? ಇಂತಹ ವಿಷಯಗಳ ಬಗ್ಗೆ ನೀವು ನಾಟಕವನ್ನು ಸಹ ಬರೆಯಬಹುದು. ಲಲಿತಕಲೆಗಳ ವಿದ್ಯಾರ್ಥಿಗಳು ಆ ಘಟನೆಗಳ ಮೇಲೆ ವರ್ಣಚಿತ್ರಗಳನ್ನು ಬಿಡಿಸಬಹುದು, ಕವಿತೆಗಳು ಮತ್ತು ಹಾಡುಗಳನ್ನು ಬರೆಯಲು ಬಯಸುವವರು ಅದನ್ನು ಮಾಡಬೇಕು. ಇದೆಲ್ಲವನ್ನೂ ಆರಂಭದಲ್ಲಿ ಕೈಬರಹದಲ್ಲಿ ಬರೆಯಬೇಕು. ನಂತರ ಅದಕ್ಕೂ ಡಿಜಿಟಲ್ ರೂಪ ನೀಡಬೇಕು. ಪ್ರತಿಯೊಂದು ಶಾಲಾ ಕಾಲೇಜಿನ ಈ ಪ್ರಯತ್ನ ಆಯಾ ಶಾಲಾ ಕಾಲೇಜಿನ ಪರಂಪರೆಯಾಗಬೇಕು. ಇದು ಸಂಪೂರ್ಣವಾಗಿ ಪರಿಕಲ್ಪನೆಯ ಅಡಿಪಾಯವನ್ನು ಸೃಷ್ಟಿಸುತ್ತದೆ. ನಂತರ, ಜಿಲ್ಲೆಯಾದ್ಯಂತ, ರಾಜ್ಯಾದ್ಯಂತ ಮತ್ತು ದೇಶಾದ್ಯಂತ ಸ್ಪರ್ಧೆಗಳನ್ನು ಇಂತಹ ಸಹ ಆಯೋಜಿಸಬಹುದು.





## 75 ಅಮೃತ ಸರೋವರಗಳು

ಆಜಾದಿ ಕಾ ಅಮೃತ ಮಹೋತ್ಸವದ ನೆನಪಿಗಾಗಿ ಭವಿಷ್ಯದ ಪೀಳಿಗೆಗೆ ಏನನ್ನಾದರೂ ನೀಡುವ ಸಂಕಲ್ಪವನ್ನು ಈಡೇರಿಸಲು ಪ್ರತಿ ಜಿಲ್ಲೆಯಲ್ಲೂ 75 ಅಮೃತ ಸರೋವರಗಳನ್ನು ನಿರ್ಮಿಸಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲೂ, ಈ ಅಮೃತ ಸರೋವರವು ಹೊಸದಾಗಿರಲಿ ಅಥವಾ ದೊಡ್ಡದಾಗಿರಲಿ, ಅದರ ನಿರ್ಮಾಣದಲ್ಲಿ ಎಂ ಎನ್‌ಆರ್‌ಇ ಜಿ ಎ ಹಣದ ನೆರವನ್ನು ಸಹ ಪಡೆಯಬಹುದು. ಆಜಾದಿ ಕಾ ಅಮೃತ ಮಹೋತ್ಸವದಲ್ಲಿ ಪ್ರತಿ ಜಿಲ್ಲೆಯಲ್ಲಿ 75 ಅಮೃತ ಸರೋವರಗಳ ನಿರ್ಮಾಣವು ಮುಂದಿನ ಪೀಳಿಗೆಗೆ ತುಂಬಾ ಉಪಯುಕ್ತವಾಗಿದೆ. ಇದರಿಂದ ನಮ್ಮ ಭೂಮಿ ತಾಯಿಗೆ ಸಾಕಷ್ಟು ಲಾಭವಾಗಲಿದೆ. ನಾವೆಷ್ಟು ನೀರು ತೆಗೆದಿದ್ದೇವೆ, ಭೂಮಿ ತಾಯಿಯ ದಾಹವನ್ನು ನೀಗಿಸುವುದು ಈ ಭೂಮಿಯ ಮಕ್ಕಳಾದ ನಮ್ಮ ಕರ್ತವ್ಯವಾಗುತ್ತದೆ ಮತ್ತು ಇದರಿಂದಾಗಿ ಪ್ರಕೃತಿಯಲ್ಲಿ ಹೊಸ ಶಕ್ತಿ ಬರುತ್ತದೆ, ಹೊಸ ಪ್ರಜ್ಞೆ ಬರುತ್ತದೆ. ಇದರಿಂದ ಸಣ್ಣ ರೈತರಿಗೆ ಅನುಕೂಲವಾಗುತ್ತದೆ, ಮಹಿಳೆಯರಿಗೆ ಅನುಕೂಲವಾಗಲಿದೆ, ಅಷ್ಟೇ ಅಲ್ಲ, ಇದೊಂದು ದಯಾಶೀಲ ಕಾರ್ಯವಾಗಲಿದೆ, ಪ್ರಾಣಿ ಪಕ್ಷಿಗಳಿಗೂ ತುಂಬಾ ಸಹಕಾರಿಯಾಗಲಿದೆ. ಅಂದರೆ, ಪ್ರತಿ ಜಿಲ್ಲೆಯಲ್ಲಿ 75 ಅಮೃತ ಸರೋವರಗಳ ನಿರ್ಮಾಣವು ಮಾನವೀಯತೆಯ ಬಹುದೊಡ್ಡ ಕಾರ್ಯವಾಗಿದೆ, ಅದನ್ನು ನಾವು ಮಾಡಲೇಬೇಕು.

## 75 ಗೋಬರ್ಧನ್ ಜೈವಿಕ ಸಿಎನ್‌ಜಿ ಘಟಕಗಳು

ಮುಂದಿನ ಎರಡು ವರ್ಷಗಳಲ್ಲಿ, ದೇಶದ 75 ದೊಡ್ಡ ಪುರಸಭೆಗಳಲ್ಲಿ ಗೋಬರ್ಧನ್ ಜೈವಿಕ-ಸಿಎನ್‌ಜಿ ಘಟಕಗಳನ್ನು ಸ್ಥಾಪಿಸುವ ಕೆಲಸ ಮಾಡಲಾಗುತ್ತಿದೆ. ಈ ಅಭಿಯಾನವು ಭಾರತದ ನಗರಗಳನ್ನು ಸ್ವಚ್ಛ ಮತ್ತು ಮಾಲಿನ್ಯ ಮುಕ್ತಗೊಳಿಸಲು ಬಹಳಷ್ಟು ಸಹಾಯ ಮಾಡುತ್ತದೆ.



> **ಸ್ವಾತಂತ್ರ್ಯದ 100 ವರ್ಷಗಳಲ್ಲಿ ನಾವು ಭಾರತವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಬೇಕಾದರೆ, ಅದಕ್ಕಾಗಿ ಕಠಿಣ ಪರಿಶ್ರಮಪಡಬೇಕು...ಮತ್ತು ಕಠಿಣ ಪರಿಶ್ರಮಕ್ಕೆ ಯಾವುದೇ ಅಡ್ಡದಾರಿಯಿಲ್ಲ. ಸ್ವಾತಂತ್ರ್ಯದ ನಂತರ, ದೇಶದಲ್ಲಿ ಪ್ರಾಬಲ್ಯ ಸಾಧಿಸಿದ ರಾಜಕೀಯ ಪಕ್ಷಗಳು ಅನೇಕ ಅಡ್ಡದಾರಿಗಳನ್ನು ಹಿಡಿದವು.**
>
> **- ನರೇಂದ್ರ ಮೋದಿ, ಪ್ರಧಾನಮಂತ್ರಿ**

ಭಾರತವು ಪ್ರಸ್ತುತ ವಿಶ್ವದ ಎರಡನೇ ಅತಿದೊಡ್ಡ ಮೊಬೈಲ್ ಫೋನ್ ತಯಾರಕ ರಾಷ್ಟ್ರವಾಗಿದೆ. ಭಾರತದ ಜೈವಿಕ ತಂತ್ರಜ್ಞಾನ ಆರ್ಥಿಕತೆಯು ಎಂಟು ಪಟ್ಟು ವಿಸ್ತರಿಸಿ 6 ಲಕ್ಷ ಕೋಟಿ ರೂ. ತಲುಪಿದೆ. ಸಹಜ ಕೃಷಿ ಪ್ರಪಂಚದಾದ್ಯಂತ ಇನ್ನೂ ಚರ್ಚೆಯ ವಿಷಯವಾಗಿದೆ, ಆದರೆ ಅದು ಭಾರತದಲ್ಲಿ ಬೇರುಬಿಡುತ್ತಿದೆ. ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ಜಾಗತಿಕ ಉಪಕ್ರಮದಲ್ಲಿ ಭಾರತದ ಪಾಲ್ಗೊಳ್ಳುವಿಕೆ ನೀತಿಗಳಿಗೆ ಮಾತ್ರ ಸೀಮಿತವಾಗಿಲ್ಲ; ಭಾರತದ ಎಲೆಕ್ಟ್ರಿಕ್ ವಾಹನಗಳು ಹವಾಮಾನ ಸಂಬಂಧಿತ ತಂತ್ರಜ್ಞಾನಕ್ಕೆ ಕೊಡುಗೆ ನೀಡುತ್ತಿವೆ. ಜನಸಾಮಾನ್ಯರ ಜೀವನದಲ್ಲಿ ಪರಿಸರ ಸ್ನೇಹಿ ನಡವಳಿಕೆ ಮತ್ತು ಜೀವನಶೈಲಿ ಹೆಚ್ಚು ಸಾಮಾನ್ಯವಾಗಿದೆ. ಇಂದು, ಭಾರತದ ಪ್ರತಿಯೊಂದು ಹಳ್ಳಿಯೂ ಬಯಲು ಶೌಚ ಮುಕ್ತವಾಗಿದೆ; ಪ್ರತಿ ಹಳ್ಳಿಗೂ ವಿದ್ಯುತ್ ಸೌಲಭ್ಯವಿದೆ; ಪ್ರತಿಯೊಂದು ಹಳ್ಳಿಯೂ ರಸ್ತೆಯ ಮೂಲಕ ಸಂಪರ್ಕ ಹೊಂದಿದೆ; ಶೇ.99 ಕ್ಕಿಂತ ಹೆಚ್ಚು ಅಡುಗೆಮನೆಗಳು ಶುದ್ಧ ಅಡುಗೆ ಇಂಧನವನ್ನು ಹೊಂದಿವೆ ಮತ್ತು ಪ್ರತಿ ಕುಟುಂಬಕ್ಕೂ ಬ್ಯಾಂಕಿಂಗ್ ವ್ಯವಸ್ಥೆಯು ಲಭ್ಯವಾಗಿದೆ. ಪ್ರತಿಯೊಬ್ಬ ಬಡವರಿಗೂ ಐದು ಲಕ್ಷ ರೂಪಾಯಿಗಳ ಉಚಿತ ಚಿಕಿತ್ಸಾ ಸೌಲಭ್ಯವಿದೆ.

ಅಮೃತ ಕಾಲದ ನವಭಾರತದ ಗುರಿ ಅದರ ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು ನನಸಾಗಿಸುವುದಾಗಿದೆ. ಅವರ ನವ ಭಾರತವನ್ನು, ಅವರ ಕನಸಿನ ಭಾರತವನ್ನು ನಿರ್ಮಿಸುವುದಾಗಿದೆ. ಬಡವರು, ರೈತರು, ಕಾರ್ಮಿಕರು, ಹಿಂದುಳಿದವರು

# ಸ್ವಾತಂತ್ರ್ಯ ಹೋರಾಟ: ಅನಾಮಧೇಯ ವೀರರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಮತ್ತು ಡಿಡಿಆರ್‌ಗಳನ್ನು ರಚಿಸುವುದು

ಇದು ನಮ್ಮ ಸ್ವಾತಂತ್ರ್ಯ ಚಳವಳಿಯ ಅಸಾಧಾರಣ ವೀರರನ್ನು ನೆನಪಿಸಿಕೊಳ್ಳುವ ಮತ್ತು ಯುವಕರನ್ನು ಜಾಗೃತಗೊಳಿಸುವ ಪ್ರಯತ್ನವಾಗಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮ ತ್ಯಾಗ ಬಲಿದಾನಗಳ ಹೊರತಾಗಿಯೂ ಇಂದಿನ ಪೀಳಿಗೆಗೆ ಅನಾಮಧೇಯರಾಗಿ ಉಳಿದ ವೀರರು ಇವರು. ಡಿಜಿಟಲ್ ಡಿಸ್ಟ್ರಿಕ್ಟ್ ರೆಪೊಸಿಟರಿ (ಡಿಡಿಆರ್) ಸ್ವಾತಂತ್ರ್ಯ ಹೋರಾಟಕ್ಕೆ ಸಾಕ್ಷಿಯಾದ ಮತ್ತು ಕೊಡುಗೆ ನೀಡಿದ ಜನರು ಮತ್ತು ಸ್ಥಳಗಳ ಮಾಹಿತಿಗಳನ್ನು ಶೋಧಿಸುವ ಮತ್ತು ದಾಖಲಿಸುವ ಪ್ರಯತ್ನವಾಗಿದೆ.



## ಸ್ವಾತಂತ್ರ್ಯದ 75 ವರ್ಷಗಳು: 'ಹರ್ ಘರ್ ತಿರಂಗ'

ಸ್ವಾತಂತ್ರ್ಯ ಬಂದು 75 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯ ಮನದಲ್ಲಿ ದೇಶಭಕ್ತಿ ಮತ್ತು ರಾಷ್ಟ್ರಾಭಿಮಾನವನ್ನು ಮೂಡಿಸಲು 'ಹರ್ ಘರ್ ತಿರಂಗ' ಅಭಿಯಾನವನ್ನು ಆಗಸ್ಟ್ 11 ರಿಂದ ಆಗಸ್ಟ್ 17, 2022 ರವರೆಗೆ ನಡೆಸಲಾಗುವುದು. ಈ ಅಭಿಯಾನದ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ತನ್ನ ದೇಶಭಕ್ತಿಯನ್ನು ವ್ಯಕ್ತಪಡಿಸಲು ಅವಕಾಶವನ್ನು ಪಡೆಯುತ್ತಾನೆ. 2002 ರ ಡಿಸೆಂಬರ್ 30 ರಂದು ಅಮೃತ ಮಹೋತ್ಸವ ವರ್ಷದಲ್ಲಿ ಸರ್ಕಾರವು ಭಾರತದ ಧ್ವಜ ಸಂಹಿತೆ, 2002 ಅನ್ನು ತಿದ್ದುಪಡಿ ಮಾಡಿತು, ಪಾಲಿಯೆಸ್ಟರ್ ಅಥವಾ ಯಂತ್ರದಿಂದ ಮಾಡಿದ ಧ್ವಜಕ್ಕೆ ಅನುಮತಿ ನೀಡಿತು.



## ವಂದೇ ಭಾರತಂ-ನೃತ್ಯೋತ್ಸವ

ಸಂಸ್ಕೃತಿ ಮತ್ತು ರಕ್ಷಣಾ ಸಚಿವಾಲಯದ ವಿಶೇಷ ಪ್ರಯತ್ನದ ಅಡಿಯಲ್ಲಿ, 2022 ರ ಗಣರಾಜ್ಯೋತ್ಸವದಂದು ಪ್ರಸ್ತುತಪಡಿಸಲಾದ ರಾಷ್ಟ್ರೀಯ ಮಟ್ಟದ ಎರಡು ತಿಂಗಳ ಅವಧಿಯ ಸ್ಪರ್ಧೆಯಲ್ಲಿ 480 ನೃತ್ಯಪಟುಗಳನ್ನು ಆಯ್ಕೆ ಮಾಡಲಾಯಿತು.

## ಸ್ವಾತಂತ್ರ್ಯ ಹೋರಾಟ ಕುರಿತು ಪಾಡ್‌ಕಾಸ್ಟ್ ಸರಣಿ

ಈ ಪಾಡ್ಕ್ಯಾಸ್ಟ್ ಸರಣಿಯು ಸಾಂಪ್ರದಾಯಿಕ ಸ್ವಾತಂತ್ರ್ಯ ಚಳವಳಿಯ ಕಥೆಯಲ್ಲಿ ಸ್ಥಾನವನ್ನೇ ಪಡೆದಿಲ್ಲದ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಗಮನಾರ್ಹ ಕೊಡುಗೆಗಳನ್ನು ನೀಡಿದ ವ್ಯಕ್ತಿಗಳು ಮತ್ತು ಚಳುವಳಿಗಳ ಕುರಿತಾಗಿದೆ.

## ಸ್ವತಂತ್ರ ಸ್ವರ

ಅನ್ಯಾಯದ ವಿರುದ್ಧ ಮನಸ್ಸು ಮತ್ತು ಹೃದಯದಲ್ಲಿ ದೇಶಭಕ್ತಿಯ ಭಾವವನ್ನು ತುಂಬುವ ಹಾಡುಗಳು ಮತ್ತು ಕವಿತೆಗಳನ್ನು ಬ್ರಿಟಿಷ್ ಸರ್ಕಾರವು ನಿಷೇಧಿಸಿತ್ತು. ಅಂತಹ ಕವನಗಳು ಮತ್ತು ಹಾಡುಗಳನ್ನು **https://amritmahotsav.nic.in/swatantra-swar.htm.** ನಲ್ಲಿ ಓದಬಹುದು.

## ಮೇರಾ ಗಾಂವ್, ಮೇರೀ ಧರೋಹರ್

ಮೇರಾ ಗಾಂವ್, ಮೇರೀ ಧರೋಹರ್ (ಎಂ ಜಿ ಎಂ ಡಿ) ವಾಸ್ತವವಾಗಿ 'ನ್ಯಾಷನಲ್ ಮಿಷನ್ ಆನ್ ಕಲ್ಚರಲ್ ಮ್ಯಾಪಿಂಗ್' ನ ಒಂದು ಭಾಗವಾಗಿದೆ. ದೇಶದಾದ್ಯಂತ ಸಾಂಸ್ಕೃತಿಕ ಸ್ವತ್ತುಗಳು ಮತ್ತು ಸಂಪನ್ಮೂಲಗಳನ್ನು ಪತ್ತೆ ಹಚ್ಚುವುದು ಮತ್ತು ದಾಖಲಿಸುವುದು ಇದರ ಗುರಿಯಾಗಿದೆ. ಈ ಉಪಕ್ರಮವು, 6.5 ಲಕ್ಷ ಹಳ್ಳಿಗಳನ್ನು ಒಳಗೊಳ್ಳುವ ಮೂಲಕ ಭಾರತೀಯ ಸಾಂಸ್ಕೃತಿಕ ತಂತ್ರಗಳು/ ಸಂಪ್ರದಾಯಗಳನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು ಸಹಾಯ ಮಾಡುತ್ತದೆ. ಸ್ಥಳೀಯ ಕಲಾವಿದರು ಮತ್ತು ಅವರ ಸಂರಕ್ಷಿತ ಕೌಶಲ್ಯ ಮತ್ತು ಪರಂಪರೆಯನ್ನು ರಕ್ಷಿಸುತ್ತದೆ. ಆಯ್ದ ಪ್ರತಿ ಹಳ್ಳಿಯಲ್ಲಿ 'ವರ್ಚುವಲ್ ಮ್ಯೂಸಿಯಂ' ರಚಿಸುವುದು ಇದರ ಮೂಲ ಗುರಿಯಾಗಿದೆ.

## ಸುಮಾರು 27 ಲಕ್ಷ ಜನರಿಂದ ಡಿಜಿಟಲ್ ಜ್ಯೋತಿಯ ಮೂಲಕ ಗೌರವ ಸಲ್ಲಿಕೆ

ನಮ್ಮ ಭವಿಷ್ಯಕ್ಕಾಗಿ, ತಮ್ಮ ವರ್ತಮಾನವನ್ನೇ ಪಣಕ್ಕಿಟ್ಟ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗದಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಆಜಾದಿ ಕಾ ಅಮೃತ ಮಹೋತ್ಸವದ ಸಂದರ್ಭದಲ್ಲಿ ರಾಷ್ಟ್ರವು ಅವರ ಧೈರ್ಯ ಮತ್ತು ತ್ಯಾಗಕ್ಕೆ ಗೌರವ ಸಲ್ಲಿಸುತ್ತದೆ. ಇದಕ್ಕಾಗಿ ಡಿಜಿಟಲ್ ಜ್ಯೋತಿಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲು ವ್ಯವಸ್ಥೆ ಮಾಡಲಾಗಿತ್ತು. ಈ ಡಿಜಿಟಲ್ ಜ್ಯೋತಿಯನ್ನು ಸೆಂಟ್ರಲ್ ಪಾರ್ಕ್, ಕನ್ನಾಟ್ ಪ್ಲೇಸ್‌ನಲ್ಲಿ ಬೆಳಗಿಸಲಾಯಿತು. ಸುಮಾರು 27 ಲಕ್ಷ ಮಂದಿ ಡಿಜಿಟಲ್ ಮಾಧ್ಯಮದ ಮೂಲಕ ಗೌರವ ಸಲ್ಲಿಸಿದ್ದಾರೆ.

## ಅತ್ಯಧಿಕ ಸಂಖ್ಯೆಯ ರಾಷ್ಟ್ರಧ್ವಜಗಳನ್ನು ಹಾರಿಸಿ ಗಿನ್ನೆಸ್ ದಾಖಲೆಗೆ ಸೇರ್ಪಡೆಯಾದ ಭಾರತ

23 ಏಪ್ರಿಲ್ 2022 ರಂದು ಆಜಾದಿ ಕಾ ಅಮೃತ ಮಹೋತ್ಸವದ ಅಡಿಯಲ್ಲಿ ಬಿಹಾರದ ಜಗದೀಶ್‌ಪುರದ ದುಲೂರ್ ಮೈದಾನದಲ್ಲಿ ವೀರ್ ಕುನ್ವರ್ ಸಿಂಗ್ ವಿಜಯೋತ್ಸವ ಕಾರ್ಯಕ್ರಮದಲ್ಲಿ 78 ಸಾವಿರದ 220 ರಾಷ್ಟ್ರಧ್ವಜಗಳನ್ನು ಅಂದರೆ ತ್ರಿವರ್ಣ ಧ್ವಜಗಳನ್ನು ಒಟ್ಟಿಗೆ ಹಾರಿಸುವ ಮೂಲಕ ಭಾರತವು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರನ್ನು ನೋಂದಾಯಿಸಿದೆ. 2004 ರಲ್ಲಿ ಏಕಕಾಲದಲ್ಲಿ 56 ಸಾವಿರ ಪಾಕಿಸ್ತಾನಿ ಧ್ವಜಗಳನ್ನು ಹಾರಿಸುವ ಮೂಲಕ ಪಾಕಿಸ್ತಾನದ ಹೆಸರಿನಲ್ಲಿ ಈ ದಾಖಲೆ ಇತ್ತು.



### ಆತ್ಮನಿರ್ಭರ ಭಾರತದ ಗುರಿ ಈಡೇರಲಿದೆ

ಭಾರತವು ಸ್ವಾತಂತ್ರ್ಯದ 100 ನೇ ವರ್ಷವನ್ನು ಆಚರಿಸುವಾಗ, ಆತ್ಮನಿರ್ಭರತೆಯ ಗುರಿಯು ಈಡೇರುತ್ತದೆ, ಅದಕ್ಕಾಗಿ ಅಚಲವಾದ ಬದ್ಧತೆಯಿಂದ ಕೆಲಸ ಮಾಡಬೇಕಾಗಿದೆ. ಭಾರತವು ಮತ್ತೊಮ್ಮೆ ಸ್ವಾವಲಂಬಿಯಾದಾಗ, ಅದು ಜಗತ್ತಿಗೆ ಹೊಸ ದಿಕ್ಕನ್ನು ತೋರಿಸುತ್ತದೆ. ಭಾರತದ ಸಾಧನೆಗಳು ನಮ್ಮದು ಮಾತ್ರವಲ್ಲ, ಜಗತ್ತಿಗೆ ಮತ್ತು ಮನುಕುಲಕ್ಕೆ ಭರವಸೆಯನ್ನು ನೀಡುತ್ತವೆ. ಸ್ವಾವಲಂಬನೆಯಿಂದ ಕೂಡಿದ ನಮ್ಮ ಅಭಿವೃದ್ಧಿ ಪಯಣ ಇಡೀ ಪ್ರಪಂಚದ ಅಭಿವೃದ್ಧಿ ಪಯಣವನ್ನು ವೇಗಗೊಳಿಸಲಿದೆ.

### ಭಾರತವು ಇಂಧನದಲ್ಲಿ ಸ್ವಾವಲಂಬಿಯಾಗಲಿದೆ

ಸ್ವಾತಂತ್ರ್ಯದ 100 ವರ್ಷಗಳು ಪೂರ್ಣಗೊಳ್ಳುವ ವೇಳೆಗೆ ಭಾರತವು ಇಂಧನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಲಿದೆ. ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಯನ್ನು ಹೆಚ್ಚಿಸುವುದು, ಅನಿಲ ಆಧಾರಿತ ಆರ್ಥಿಕತೆ, ದೇಶಾದ್ಯಂತ ಸಿಎನ್‌ಜಿ ಮತ್ತು ಪಿಎನ್‌ಜಿ ಜಾಲ, ಪೂರ್ವನಿರ್ಧರಿತ ಗುರಿಗಿಂತ ಮುಂಚಿತವಾಗಿ ಪೆಟ್ರೋಲ್‌ನಲ್ಲಿ ಶೇಕಡಾ 20 ರಷ್ಟು ಎಥೆನಾಲ್ ಮಿಶ್ರಣದ ಗುರಿಯನ್ನು ಸಾಧಿಸುವುದು, 2030 ರ ವೇಳೆಗೆ ರೈಲ್ವೆಯ ಶೇ.100 ವಿದ್ಯುದ್ದೀಕರಣವು ಮಹತ್ವಾಕಾಂಕ್ಷೆಯ ನಿವ್ವಳ ಶೂನ್ಯ ಇಂಗಾಲ ಯೋಜನೆಯ ಭಾಗವಾಗಿದೆ. ಭಾರತವು ನವೀಕರಿಸಬಹುದಾದ ಇಂಧನದಲ್ಲಿ 450 ಗಿಗಾವ್ಯಾಟ್ ಗುರಿಯನ್ನು ಹೊಂದಿದ್ದು, ಅದರಲ್ಲಿ 100 ಗಿಗಾವ್ಯಾಟ್ ಗುರಿಯನ್ನು ನಿಗದಿತ ಸಮಯಕ್ಕಿಂತ ಮುಂಚಿತವಾಗಿಯೇ ಸಾಧಿಸಲಾಗಿದೆ. ಅಂತೆಯೇ, ಭಾರತವು ಅಂತರರಾಷ್ಟ್ರೀಯ ಸೌರ ಒಕ್ಕೂಟವನ್ನು ಸ್ಥಾಪಿಸುವಲ್ಲಿ ಮತ್ತು ಒಂದು ಸೂರ್ಯ, ಒಂದು ಗ್ರಿಡ್‌ನ ದೃಷ್ಟಿಕೋನವನ್ನು ಹಂಚಿಕೊಳ್ಳುವಲ್ಲಿ ಪ್ರವರ್ತಕ ರಾಷ್ಟ್ರವಾಗಿದೆ. ಅದೇ ರೀತಿ ಗ್ರೀನ್ ಹೈಡ್ರೋಜನ್ ರಾಷ್ಟ್ರೀಯ ಮಿಷನ್ ಘೋಷಣೆ ಮಾಡಲಾಗಿದ್ದು, ಆ ನಿಟ್ಟಿನಲ್ಲಿ ಕೆಲಸ ಆರಂಭಿಸಲಾಗಿದೆ.

ಮತ್ತು ಆದಿವಾಸಿಗಳು ಎಲ್ಲರಿಗೂ ಸಮಾನ ಅವಕಾಶಗಳನ್ನು ಹೊಂದಿರುವ ಭಾರತವನ್ನು ನಿರ್ಮಿಸುವುದಾಗಿದೆ.

ಕಳೆದ ಎಂಟು ವರ್ಷಗಳಲ್ಲಿ, ದೇಶವು ಈ ಸಂಕಲ್ಪವನ್ನು ಈಡೇರಿಸಲು ನೀತಿಗಳನ್ನು ರೂಪಿಸಿದೆ ಮತ್ತು ಸಂಪೂರ್ಣ ಶ್ರದ್ಧೆಯಿಂದ ಕೆಲಸ ಮಾಡಿದೆ. ಅಮೃತ ಕಾಲದಲ್ಲಿ ಭಾರತದ ಚಿಂತನೆಯು ಎಲ್ಲರನ್ನೂ ಒಳಗೊಂಡಿದೆ ಮತ್ತು ಕೋಟ್ಯಂತರ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ತೊಡಗಿದೆ. ಭಾರತ ಇಂದು ಅಭೂತಪೂರ್ವ ಸಾಧ್ಯತೆಗಳಿಂದ ತುಂಬಿದೆ. ಬಲಿಷ್ಠವಾದ ನಿರ್ಣಾಯಕವಾದ ಸರ್ಕಾರದ ನಾಯಕತ್ವದಲ್ಲಿ, ಅದು ಹೊಸ ಕನಸುಗಳನ್ನು ಕಾಣುತ್ತಿದೆ, ಹೊಸ ಸಂಕಲ್ಪಗಳನ್ನು ಮಾಡುತ್ತಿದೆ ಮತ್ತು ಸಂಕಲ್ಪಗಳನ್ನು ಸಾಧನೆಯಾಗಿ ಪರಿವರ್ತಿಸಲು ಶ್ರಮಿಸುತ್ತಿದೆ. ಅದರ ನೀತಿಗಳು ಸಹ ಸ್ಪಷ್ಟವಾಗಿವೆ ಮತ್ತು ಮುಂದಿನ 25 ವರ್ಷಗಳ ಸ್ವಾವಲಂಬನೆಗಾಗಿ ಮಾರ್ಗಸೂಚಿ ಕೂಡ ಸಿದ್ಧವಾಗಿದೆ. ಸ್ವತಃ ಪ್ರಧಾನಿ ಮೋದಿಯವರ ಮಾತಿನಲ್ಲಿ ಹೇಳುವುದಾದರೆ,



## ಸೋಮನಾಥ ದೇವಾಲಯ

ಪ್ರಧಾನಿ ಮೋದಿ ನೇತೃತ್ವದ ಸೋಮನಾಥ ಟ್ರಸ್ಟ್ ಸೋಮನಾಥ ದೇವಾಲಯವನ್ನು ನವೀಕರಿಸಿದೆ. ಇದು ಪ್ರದರ್ಶನ ಕೇಂದ್ರ, ಸಮುದ್ರ ದರ್ಶನ ಪಥ ಮತ್ತು ಪಾರ್ವತಿದೇವಿ ದೇವಸ್ಥಾನದ ನಿರ್ಮಾಣವನ್ನು ಒಳಗೊಂಡಿದೆ.



## ಬಾಬಾ ಬೈದ್ಯನಾಥ ಧಾಮ, ದೇವಘರ್

ದೇವಸ್ಥಾನಕ್ಕೆ ಭೇಟಿ ನೀಡಲು ಅನುಕೂಲವಾಗುವಂತೆ ವಿಮಾನ ನಿಲ್ದಾಣವನ್ನು ನಿರ್ಮಿಸಲಾಗಿದ್ದು, ಜುಲೈ 12 ರಂದು ಪ್ರಧಾನಿ ಮೋದಿಯವರು ಇದನ್ನು ಉದ್ಘಾಟಿಸಿದರು.

> ಇಂದು, ನಾವು ರಾಷ್ಟ್ರದ ಅಮೃತ ಸಂಕಲ್ಪದೊಂದಿಗೆ ಮುನ್ನಡೆಯುತ್ತಿರುವಾಗ, ನಮ್ಮ ಕರ್ತವ್ಯ ಮತ್ತು ಪರಿಶ್ರಮದಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು. ರಾಷ್ಟ್ರೀಯ ಏಕತೆ ನಮ್ಮ ಮೊದಲ ಆದ್ಯತೆಯಾಗಬೇಕು.
>
> **-ನರೇಂದ್ರ ಮೋದಿ, ಪ್ರಧಾನ ಮಂತ್ರಿ**

2047ಕ್ಕೆ ದೇಶಕ್ಕೆ ಸ್ವಾತಂತ್ರ್ಯ ಬಂದು 100 ವರ್ಷ ತುಂಬಿದಾಗ, ದೇಶವನ್ನು ಎಲ್ಲಿಗೆ ಕೊಂಡೊಯ್ಯಬೇಕೋ ಆ ಕನಸನ್ನು ನನಸು ಮಾಡಲು ಇಡೀ ದೇಶವೇ ಸಿದ್ಧವಾಗಿದೆ.

"ಹೊಸ ನಿರ್ಧಾರಗಳು, ಹೊಸ ಆಲೋಚನೆಗಳು ಮತ್ತು ಸ್ವಾವಲಂಬಿ ಭಾರತವು ಈ ಪ್ರಯತ್ನಗಳ ಸಾಕಾರವಾಗಿದೆ. ಇದು ಆ ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು ನನಸಾಗಿಸುವ ಪ್ರಯತ್ನವಾಗಿದೆ; ನೇಣಿನ ಕುಣಿಕೆಗೆ

### ಕೇದಾರನಾಥ ಧಾಮ

ಪ್ರಕೃತಿ ವಿಕೋಪದಲ್ಲಿ ಹಾನಿಗೀಡಾದ ಕೇದಾರನಾಥ ಧಾಮಕ್ಕೆ ಮತ್ತೆ ವೈಭವದ ನೋಟ ನೀಡಲಾಗುತ್ತಿದೆ. ಈ ಸಂದರ್ಭದಲ್ಲಿ ಕೇದಾರನಾಥ ಧಾಮದ ಭದ್ರತೆಗಾಗಿ ಮೂರು ಹಂತದ ಭದ್ರತಾ ಗೋಡೆ, ದೇವಸ್ಥಾನಕ್ಕೆ ಸುಲಭ ಪ್ರವೇಶ, ಆಸ್ತಾಪಥ, ಮಂದಾಕಿನಿ ಸೇತುವೆ ನಿರ್ಮಾಣ, ಹೆಲಿಪ್ಯಾಡ್ ನಿರ್ಮಾಣ ಸೇರಿದಂತೆ ಎಲ್ಲ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನೂ ಹಲವು ಕಾಮಗಾರಿ ಪ್ರಗತಿಯಲ್ಲಿವೆ.

### ಚಾರ್ ಧಾಮ ರಾಷ್ಟ್ರೀಯ ಹೆದ್ದಾರಿ

ಗಂಗೋತ್ರಿ, ಯಮುನೋತ್ರಿ, ಕೇದಾರನಾಥ ಮತ್ತು ಬದರಿನಾಥವನ್ನು ಸಂಪರ್ಕಿಸುವ ಸುರಕ್ಷಿತ ಮತ್ತು ಸುಲಭವಾದ ಸರ್ವಋತು ರಾಷ್ಟ್ರೀಯ ಹೆದ್ದಾರಿ ಯೋಜನೆ. ಈ ಹೆದ್ದಾರಿಯು ಭಕ್ತರು ಧಾಮಗಳಿಗೆ ಹೋಗಲು ಹೆಚ್ಚು ಅನುಕೂಲ ಕಲ್ಪಿಸುತ್ತದೆ.

### ಮಹಾಕಾಲ ಕಾರಿಡಾರ್, ಉಜ್ಜಯಿನಿ

750 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಉಜ್ಜಯಿನಿಯ ಮಹಾಕಾಲ ದೇವಾಲಯದ ವಿಸ್ತರಣೆಯ ಕೆಲಸ ನಡೆಯುತ್ತಿದೆ. ಸೌಂದರೀಕರಣದೊಂದಿಗೆ, ದೇವಾಲಯ ಸಂಕೀರ್ಣ ಪ್ರದೇಶವು ಸುಮಾರು 8 ಪಟ್ಟು ಹೆಚ್ಚಾಗುತ್ತದೆ.

ಮುಖಪುಟ ಲೇಖನ

# ದೇಶದಲ್ಲಿ ಆಧ್ಯಾತ್ಮಿಕ ಪರಂಪರೆಯು ಅಭಿವೃದ್ಧಿ ಹೊಂದುತ್ತಿದೆ, ಸಂರಕ್ಷಿಸಲ್ಪಟ್ಟಿದೆ ಮತ್ತು ಮರುಸ್ಥಾಪಿಸಲ್ಪಟ್ಟಿದೆ



**ರಾಮಮಂದಿರ ಅಯೋಧ್ಯೆ**

492 ವರ್ಷಗಳ ವಿವಾದದ ನಂತರ, ಅಂತಿಮವಾಗಿ, ರಾಮ ಜನ್ಮಭೂಮಿಯಲ್ಲಿ ರಾಮ ಮಂದಿರವನ್ನು ನಿರ್ಮಿಸಲಾಗುತ್ತಿದೆ, ಅದಕ್ಕೆ ಶಿಲಾನ್ಯಾಸವನ್ನು ಪ್ರಧಾನಿ ಮೋದಿಯವರು ನೆರವೇರಿಸಿದರು.



**ಕಾಶಿ ವಿಶ್ವನಾಥ ಕಾರಿಡಾರ್**

ಕಾಶಿ ವಿಶ್ವನಾಥ ಕಾರಿಡಾರ್ ಅಭಿವೃದ್ಧಿಪಡಿಸಲಾಗಿದೆ. 2017 ರವರೆಗೆ ದೇವಾಲಯದ ಸುತ್ತಲೂ ಕಿರಿದಾದ ರಸ್ತೆಗಳಿದ್ದವು. ಆದರೆ ಈಗ ಕಾಶಿ ದೈವಿಕವಾಗಿದೆ ಮತ್ತು ಭವ್ಯವಾಗಿದೆ.

## ಪರಿಪೂರ್ಣತೆಯನ್ನು ತಲುಪಲು ಯೋಜನೆಗಳು

ಸ್ವಾತಂತ್ರ್ಯದ ಸುವರ್ಣ ವರ್ಷದಲ್ಲಿ ನಾವು ಪರಿಪೂರ್ಣತೆಯತ್ತ ಸಾಗಬೇಕಾಗಿದೆ. ಶೇ.100 ರಷ್ಟು ಹಳ್ಳಿಗಳು ರಸ್ತೆಗಳನ್ನು ಹೊಂದಿರಬೇಕು, ಶೇ.100 ರಷ್ಟು ಕುಟುಂಬಗಳು ಬ್ಯಾಂಕ್ ಖಾತೆಗಳನ್ನು ಹೊಂದಿರಬೇಕು, ಶೇ.100 ರಷ್ಟು ಅರ್ಹ ಫಲಾನುಭವಿಗಳು ಆಯುಷ್ಮಾನ್ ಭಾರತ್ ಕಾರ್ಡ್ಗಳನ್ನು ಹೊಂದಿರಬೇಕು, ಶೇ.100 ರಷ್ಟು ಅರ್ಹ ಜನರು ಅನಿಲ, ವಿದ್ಯುತ್ ಸಂಪರ್ಕಗಳನ್ನು ಹೊಂದಿರಬೇಕು. ಈ ಬಾರಿಯ ಅಮೃತ ಕಾಲವು ನಿದ್ದೆಯಲ್ಲಿ ಕನಸು ಕಾಣುವುದಲ್ಲ, ಎಚ್ಚರದಿಂದ ನಮ್ಮ ಸಂಕಲ್ಪಗಳನ್ನು ಈಡೇರಿಸುವುದಾಗಿರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಮುಂಬರುವ 25 ವರ್ಷಗಳು ಕಠಿಣ ಪರಿಶ್ರಮ, ತ್ಯಾಗ ಮತ್ತು ತಪಸ್ಸಿನ ಅವಧಿಯಾಗಿದೆ. ನಮ್ಮ ಸಮಾಜ ನೂರಾರು ವರ್ಷಗಳ ಗುಲಾಮಗಿರಿಯಲ್ಲಿ ಕಳೆದುಕೊಂಡಿದ್ದನ್ನು ಈ 25 ವರ್ಷಗಳ ಅವಧಿಯಲ್ಲಿ ಮರಳಿ ಪಡೆಯಬೇಕಾಗಿದೆ. ಆದ್ದರಿಂದ, ಈ ಆಜಾದಿ ಕಾ ಅಮೃತ ಮಹೋತ್ಸವದಲ್ಲಿ, ನಮ್ಮ ಗಮನವು ಭವಿಷ್ಯದತ್ತ ಇರಬೇಕು.

ಕೊರಳೊಡ್ಡಿದ ಮತ್ತು ತಮ್ಮ ಜೀವನವನ್ನು ಕತ್ತಲಕೋಣೆಯಲ್ಲಿ ಕಳೆದ ಅನೇಕ ವೀರರು ಆಶಿಸಿದ್ದ ಆ ಎತ್ತರಕ್ಕೆ ಭಾರತವನ್ನು ಕೊಂಡೊಯ್ಯುವ ಪ್ರಯತ್ನವಾಗಿದೆ. ನಿಸ್ಸಂಶಯವಾಗಿ, ದೇಶದ ಪ್ರತಿಯೊಬ್ಬ ನಾಗರಿಕರು ಪ್ರಯತ್ನದ ಉತ್ಸಾಹದಲ್ಲಿ, ಸಾರ್ವಜನಿಕ ಭಾಗವಹಿಸುವಿಕೆಯ ಉತ್ಸಾಹದಲ್ಲಿ ರಾಷ್ಟ್ರೀಯ ಸಂಕಲ್ಪಗಳನ್ನು ಈಡೇರಿಸಲು ತೊಡಗಿಸಿಕೊಂಡಾಗ, ಅವರು ವಿಶ್ವದ ಶಕ್ತಿಶಾಲಿ ರಾಷ್ಟ್ರಗಳ ಬೆಂಬಲವನ್ನು ಪಡೆಯಲು ಪ್ರಾರಂಭಿಸುತ್ತಾರೆ. ಇಂದು ವಿಶ್ವದ ಮಹಾನ್ ಶಕ್ತಿಗಳು ಭಾರತದೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಡೆಯಲು ಬಯಸುತ್ತಿವೆ. ತನ್ನ ಪ್ರಜೆಗಳ ಸಂಕಲ್ಪ ಮತ್ತು ಶಕ್ತಿಯಿಂದ ಭಾರತ ಈಗ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದೆ.

**ಶ್ರೀ ಮಹಾಕಾಳಿ ಮಾತಾಜಿ ದೇವಸ್ಥಾನ, ಪಾವಾಗಢ**

ಸುಮಾರು 500 ವರ್ಷಗಳ ಹಿಂದೆ, ದೇವಾಲಯದ ಶಿಖರ ಮತ್ತು ಧ್ವಜವನ್ನು ಆಕ್ರಮಣಕಾರರು ಕೆಡವಿದ್ದರು. ಪಾವಾಗಢ ಬೆಟ್ಟದ ಮೇಲಿರುವ ಈ ದೇವಾಲಯದ ಶಿಖರವನ್ನು ಪುನಃಸ್ಥಾಪಿಸಲಾಗಿದೆ. ಇತ್ತೀಚೆಗೆ ದೇವಾಲಯದ ಶಿಖರದ ಮೇಲೆ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಐದು ಶತಮಾನಗಳ ಹಿಂದೆ ಧ್ವಂಸಗೊಂಡ ಮಹಾಕಾಳಿ ದೇವಸ್ಥಾನದ ಮೇಲೆ ಧ್ವಜ ಹಾರಿಸಿರಲಿಲ್ಲ. ದೇವಾಲಯದ ಮೇಲೆ ಹಾರಿಸಲಾದ ಧ್ವಜವು ನಮ್ಮ ಆಧ್ಯಾತ್ಮಿಕತೆಯನ್ನು ಸಂಕೇತಿಸುವುದು ಮಾತ್ರವಲ್ಲ, ಶತಮಾನಗಳು ಕಳೆದರೂ, ಯುಗಗಳು ಉರುಳಿದರೂ ನಮ್ಮ ನಂಬಿಕೆ ಶಾಶ್ವತವಾಗಿದೆ ಎಂದು ಸಾರುತ್ತದೆ.

**ರಾಷ್ಟ್ರಗೀತೆಯ 1.5 ಕೋಟಿ ವೀಡಿಯೊಗಳನ್ನು ಅಪ್ಲೋಡ್ ಮಾಡಲಾಗಿದೆ**


ಆಜಾದಿ ಕಾ ಅಮೃತ ಮಹೋತ್ಸವ ಉಪಕ್ರಮದ ಅಡಿಯಲ್ಲಿ, ಭಾರತ ಸೇರಿದಂತೆ ವಿಶ್ವದಾದ್ಯಂತ ನೆಲೆಸಿರುವ 1.5 ಕೋಟಿ ಭಾರತೀಯರು ರಾಷ್ಟ್ರಗೀತೆಯನ್ನು ಹಾಡಿ ಅದರ ವೀಡಿಯೊವನ್ನು ಆಜಾದಿ ಕಾ ಅಮೃತ ಮಹೋತ್ಸವ ವೆಬ್ಸೈಟ್ನಲ್ಲಿ ಅಪ್ಲೋಡ್ ಮಾಡಿದ್ದಾರೆ. ರಂಗೋಲಿ, ದೇಶಭಕ್ತಿ ಗೀತೆ, ಲಾವಣಿ ಸ್ಪರ್ಧೆಗಳಲ್ಲಿ 5.5 ಲಕ್ಷ ಮಂದಿ ತಮ್ಮನ್ನು ದಾಖಲಿಸಿಕೊಂಡೊದ್ದರು.

**ವಿದೇಶದಲ್ಲಿ 6 ಸಾವಿರಕ್ಕೂ ಹೆಚ್ಚು ಅಮೃತ ಮಹೋತ್ಸವ ಕಾರ್ಯಕ್ರಮಗಳು**

ವಿದೇಶದಲ್ಲಿರುವ ಭಾರತೀಯ ಮಿಷನ್ಗಳು ಆಜಾದಿ ಕಾ ಅಮೃತ್ ಮಹೋತ್ಸವದ ಅಡಿಯಲ್ಲಿ 6 ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಿವೆ. ಇದರಲ್ಲಿ ಸಾಗರೋತ್ತರ ಭಾರತೀಯರು, ಭಾರತದ ಸ್ನೇಹಿತರು ಮತ್ತು ಸ್ಥಳೀಯ ಸರ್ಕಾರಗಳು ಭಾಗವಹಿಸಿದ್ದವು.

**ಅಮೃತ ಮಹೋತ್ಸವದಂದು 75 ಐತಿಹಾಸಿಕ ಸ್ಥಳಗಳಲ್ಲಿ ಯೋಗ**

8ನೇ ಅಂತಾರಾಷ್ಟ್ರೀಯ ಯೋಗ ದಿನದಂದು ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ ನಡೆದ ಯೋಗ ಪ್ರದರ್ಶನಗಳು ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಆಜಾದಿ ಕಾ ಅಮೃತ್ ಮಹೋತ್ಸವ ವರ್ಷ ಸಂಪರ್ಕ ಕಲ್ಪಿಸುವ ಒಂದು ಉಪಕ್ರಮವಾಯಿತು. ಮೈಸೂರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ದೇಶದ ಇತರೆಡೆ ಕೇಂದ್ರ ಸಚಿವರು ಈ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.



ಜನರ ಸಂಕಲ್ಪ ಮತ್ತು ಭಾಗವಹಿಸುವಿಕೆಯೊಂದಿಗೆ, ಭಾರತದ ಪ್ರಯತ್ನಗಳು ಈಗ ಸಾಮೂಹಿಕ ಆಂದೋಲನಗಳಾಗಿ ಪರಿವರ್ತಿತವಾಗುತ್ತಿವೆ. ನವಭಾರತವು ಭವಿಷ್ಯದ ಪೀಳಿಗೆಗೆ ಹೊಸ ಪರಂಪರೆಯನ್ನು ಸೃಷ್ಟಿಸಲು ಕೆಲಸ ಮಾಡುತ್ತಿದೆ. ಇತ್ತೀಚಿನ ದಶಕಗಳಲ್ಲಿ, ದೇಶದ ಜನರು ತಮ್ಮ ಕೆಲಸದ ಮೂಲಕ ಭಾರತದ ಬಗ್ಗೆ ಬಲವಾದ ಚಿತ್ರಣವನ್ನು ನೀಡಿದ್ದಾರೆ. ಪರಿಣಾಮವಾಗಿ, ಸ್ವಾತಂತ್ರ್ಯದ ಅಮೃತ ಕಾಲದಲ್ಲಿ, ಅಂದರೆ, ಮುಂದಿನ 25 ವರ್ಷಗಳಲ್ಲಿ, ನಿರೀಕ್ಷೆಗಳು ಹೆಚ್ಚಿವೆ. ಏಕೆಂದರೆ ಇಂದು, ಪ್ರತಿಯೊಬ್ಬ ಭಾರತೀಯನೂ ಯಶಸ್ಸಿನ ಕಥೆಯಲ್ಲಿ ಸ್ವತಃ ಪಾಲುದಾರನಾಗಿದ್ದಾನೆ ಮತ್ತು ಅದರ ವಾಹಕನಾಗಿದ್ದಾನೆ. ■

# ಆಗಸ್ಟ್ ಕ್ರಾಂತಿ...

**ಸುದೀರ್ಘ ಕಾಲದ ಗುಲಾಮಗಿರಿಯ ನಂತರ ಹೋರಾಟದ ಹಾದಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ಈ ಹೋರಾಟದ ಪಯಣದಲ್ಲಿ ಆಗಸ್ಟ್ ತಿಂಗಳಿಗೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ಭಾರತದ ಸ್ವಾತಂತ್ರ್ಯದ ಬುನಾದಿ ಎಂದು ಕರೆಯಲಾಗುವ ಮೂರು ಪ್ರಮುಖ ಜನಾಂದೋಲನಗಳ ವರ್ಷಾಚರಣೆಯು ಆಗಸ್ಟ್ ತಿಂಗಳಿನಲ್ಲಿ ಬರುತ್ತದೆ ಮತ್ತು ಅದಕ್ಕಾಗಿಯೇ, ದೇಶವು 75 ವರ್ಷಗಳ ಸ್ವಾತಂತ್ರ್ಯವನ್ನು ಪೂರೈಸುತ್ತಿರುವ ಈ ಸಮಯದಲ್ಲಿ, ನಾವು ಸಹ ಈ ಮೂರು ಆಂದೋಲನಗಳು ಮತ್ತು ಅವುಗಳ ಪ್ರಭಾವದ ಬಗ್ಗೆ ತಿಳಿದುಕೊಳ್ಳಬೇಕು...**



## ಭಾರತ ಬಿಟ್ಟು ತೊಲಗಿ ಚಳವಳಿ - ಮಾಡು ಇಲ್ಲವೇ ಮಡಿ... 80 ವರ್ಷಗಳನ್ನು ಪೂರೈಸಿದೆ

ಸ್ವಾತಂತ್ರ್ಯ ಚಳವಳಿಯಲ್ಲಿ ಆಗಸ್ಟ್ 8 ರ ದಿನಾಂಕವು ಮಹತ್ತರವಾದ ಪಾತ್ರವನ್ನು ಹೊಂದಿದೆ. 1942 ರ ಆಗಸ್ಟ್ 8-9 ಮಧ್ಯರಾತ್ರಿಯಲ್ಲಿ, ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ 'ಮಾಡು ಇಲ್ಲವೇ ಮಡಿ' ಮತ್ತು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯಕ್ಕಾಗಿ ಬೃಹತ್ ಜನಾಂದೋಲನವನ್ನು ಪ್ರಾರಂಭಿಸಲಾಯಿತು. ಈಗಿನ ಪ್ರಸ್ತುತ ನಾಯಕತ್ವವು "ಕರೇಂಗೆ ಔರ್ ಕರ್ ಕೆ ರಹೇಂಗೆ" ಎಂಬ ಮಂತ್ರವನ್ನು ಸಾಮೂಹಿಕ ಚಳುವಳಿಗಳಲ್ಲಿ ಬಲವಾದ ಕೊಂಡಿಯಾಗಿ ಬಳಸುತ್ತಿದೆ. 'ಕ್ವಿಟ್ ಇಂಡಿಯಾ ಚಳವಳಿ'ಯಿಂದಾಗಿ ಭಾರತಕ್ಕೆ ತಕ್ಷಣವೇ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಾಗಲಿಲ್ಲ, ಆದರೆ ಅದರ ದೂರಗಾಮಿ ಫಲಿತಾಂಶಗಳು ಹಿತವಾಗಿವೆ. ಆದ್ದರಿಂದಲೇ ಈ ಆಂದೋಲನವನ್ನು 'ಭಾರತದ ಸ್ವಾತಂತ್ರ್ಯಕ್ಕಾಗಿ ಮಾಡಿದ ಕೊನೆಯ ದೊಡ್ಡ ಪ್ರಯತ್ನ' ಎಂದು ಕರೆಯಲಾಗಿದೆ. ಇದು ಅತ್ಯಂತ ತೀವ್ರವಾದ ಮತ್ತು ಬೃಹತ್ತಾದ ಜನಾಂದೋಲನವಾಗಿತ್ತು.

## ಅಸಹಕಾರ ಚಳವಳಿ

ವಸಾಹತುಶಾಹಿ ವಿರುದ್ಧದ ಪ್ರತಿಭಟನೆಯಲ್ಲಿ, ಮಹಾತ್ಮ ಗಾಂಧಿಯವರು ದೇಶವಾಸಿಗಳಿಗೆ ಮನವಿ ಮಾಡಿ, ಅಸಹಕಾರಕ್ಕಾಗಿ ಒತ್ತಾಯಿಸಿದರು. 1920 ರ ಆಗಸ್ಟ್ 1 ರಂದು ಔಪಚಾರಿಕವಾಗಿ ಚಳವಳಿಯನ್ನು ಪ್ರಾರಂಭಿಸಿದ ಮಹಾತ್ಮ ಗಾಂಧಿಯವರು ಶಾಲೆಗಳು, ಕಾಲೇಜುಗಳು ಮತ್ತು ನ್ಯಾಯಾಲಯಗಳಿಗೆ ಹೋಗಬೇಡಿ ಅಥವಾ ತೆರಿಗೆ ಪಾವತಿಸಬೇಡಿ. ಅಸಹಕಾರವನ್ನು ಸರಿಯಾಗಿ ಅನುಸರಿಸಿದರೆ, ಭಾರತವು ಒಂದು ವರ್ಷದೊಳಗೆ ಸ್ವರಾಜ್ಯವನ್ನು ಪಡೆಯುತ್ತದೆ ಎಂದು ಹೇಳಿದರು.  ಈ ಇಡೀ ಚಳವಳಿಯಲ್ಲಿ ಬ್ರಿಟಿಷರ ದೌರ್ಜನ್ಯದ ವಿರುದ್ಧ ಅಹಿಂಸಾತ್ಮಕ ಮಾರ್ಗಗಳನ್ನು ಮಾತ್ರ ಅಳವಡಿಸಿಕೊಳ್ಳಲಾಯಿತು.

ಅಸಹಕಾರ ಚಳವಳಿಯು ಶಾಲಾ ಕಾಲೇಜುಗಳು ಮತ್ತು ನ್ಯಾಯಾಲಯಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಕಾರ್ಮಿಕರು ಕೆಲಸ ನಿಲ್ಲಿಸಿದರು. ಸರ್ಕಾರದ ವರದಿಯ ಪ್ರಕಾರ, 1921 ರಲ್ಲಿ 396 ಮುಷ್ಕರಗಳು ನಡೆದವು, ಇದರಲ್ಲಿ 6 ಲಕ್ಷ ಕಾರ್ಮಿಕರು ಭಾಗವಹಿಸಿದ್ದರು ಮತ್ತು 70 ಲಕ್ಷ ಕೆಲಸದ ದಿನಗಳು ನಷ್ಟವಾದವು.

## ಸ್ವದೇಶಿ ಚಳವಳಿ

ಬಂಗಾಳ ವಿಭಜನೆಯ ಘೋಷಣೆಯ ನಂತರ ಆಗಸ್ಟ್ 7, 1905 ರಂದು ಸ್ವದೇಶಿ ಚಳುವಳಿ ಪ್ರಾರಂಭವಾಯಿತು. ವಿದೇಶಿ ಸರಕುಗಳು, ಸರ್ಕಾರಿ ಸೇವೆಗಳು, ಶಾಲೆಗಳು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವ ಮೂಲಕ ಭಾರತೀಯರು ಸ್ವದೇಶಿ ವಸ್ತುಗಳನ್ನು ಉತ್ತೇಜಿಸಲು ನಿರ್ಧರಿಸಿದರು. ಅಂದರೆ, ಇದು ರಾಜಕೀಯ ಚಳವಳಿಯ ಜೊತೆಗೆ ಬ್ರಿಟಿಷರಿಗೆ ಆರ್ಥಿಕ ಹಾನಿಯನ್ನುಂಟುಮಾಡುವ ಚಳವಳಿಯಾಗಿತ್ತು. ಸ್ವದೇಶಿ ಚಳವಳಿಯು ಮುಖ್ಯವಾಗಿ ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ ಮತ್ತು ಲಾಲಾ ಲಜಪತ್ ರಾಯ್ ಸೇರಿದಂತೆ ಮೂವರು ನಾಯಕರ ಹುಟ್ಟಿಗೆ ಕಾರಣವಾಯಿತು. ಈ ಮೂವರನ್ನು ಲಾಲ್, ಪಾಲ್ ಮತ್ತು ಬಾಲ್ ಎಂದು ಕರೆಯಲಾಗುತ್ತಿತ್ತು.

1905 ರಿಂದ 1908 ರವರೆಗಿನ ಚಳವಳಿಯ ವರ್ಷಗಳಲ್ಲಿ ವಿದೇಶಿ ಆಮದುಗಳಲ್ಲಿ ಗಮನಾರ್ಹ ಇಳಿಕೆಯಾಯಿತು. ಇದು ದೇಶದಲ್ಲಿ ಸ್ವದೇಶಿ ಜವಳಿ ಗಿರಣಿಗಳು, ಸಾಬೂನು ಮತ್ತು ಬೆಂಕಿಕಡ್ಡಿ ಕಾರ್ಖಾನೆಗಳು, ಚರ್ಮೋದ್ಯಮ ಕಾರ್ಖಾನೆಗಳು, ಬ್ಯಾಂಕುಗಳು, ವಿಮಾ ಕಂಪನಿಗಳು, ಅಂಗಡಿಗಳು ಇತ್ಯಾದಿಗಳ ಸ್ಥಾಪನೆಗೆ ಕಾರಣವಾಯಿತು. ಈ ಚಳವಳಿಯು ಭಾರತೀಯ ಗುಡಿ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಿತು.

# ಮುನ್ನೆಚ್ಚರಿಕೆಯ ಡೋಸ್ ಜೊತೆಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಆದ್ಯತೆ

ಕೇಂದ್ರ ಸರ್ಕಾರವು ಮೂಲಸೌಕರ್ಯ, ಶಿಕ್ಷಣ ಮತ್ತು ನಾಗರಿಕರ ಉತ್ತಮ ಆರೋಗ್ಯಕ್ಕೆ ಬದ್ಧವಾಗಿದೆ. ಈ ಬದ್ಧತೆಯ ಅಡಿಯಲ್ಲಿ, ಕೇಂದ್ರ ಸಚಿವ ಸಂಪುಟವು ತರಂಗ ಹಿಲ್-ಅಂಬಾಜಿ-ಅಬು ರೋಡ್ ಹೊಸ ರೈಲು ಮಾರ್ಗದ ನಿರ್ಮಾಣಕ್ಕೆ ಅನುಮೋದನೆ ನೀಡಿದೆ, ರಾಷ್ಟ್ರೀಯ ರೈಲು ಮತ್ತು ಸಾರಿಗೆ ಸಂಸ್ಥೆಯನ್ನು ಡೀಮ್ಡ್ ವಿಶ್ವವಿದ್ಯಾಲಯದಿಂದ ಕೇಂದ್ರೀಯ ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೇರಿಸಲು ಮತ್ತು ಜುಲೈ 15 ರಿಂದ ಎಲ್ಲರಿಗೂ ಉಚಿತ ಮುನ್ನೆಚ್ಚರಿಕೆ ಡೋಸ್ ಅನ್ನು ನೀಡಲು ನಿರ್ಧರಿಸಿತು. ತರಂಗಾ ಹಿಲ್-ಅಂಬಾಜಿ ಅಬು ರೋಡ್ ಹೊಸ ರೈಲು ಮಾರ್ಗದ ನಿರ್ಮಾಣವು ಗುಜರಾತ್ ಮತ್ತು ರಾಜಸ್ಥಾನದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಮತ್ತು ಮೂಲಸೌಕರ್ಯವನ್ನು ಬಲಪಡಿಸುತ್ತದೆ.



- ನಿರ್ಧಾರ: ತಾರಂಗಾ ಹಿಲ್-ಅಂಬಾಜಿ-ಆಬೂ ರೋಡ್ ಹೊಸ ರೈಲು ಮಾರ್ಗಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ.
- ಪರಿಣಾಮ: ಈ 116.65 ಕಿಮೀ ಉದ್ದದ ರೈಲು ಮಾರ್ಗವು ಸ್ಥಳೀಯರ ಸಂಚಾರ, ಉತ್ಪನ್ನಗಳ ಸಾಗಣೆ, ಸ್ವಯಂ ಉದ್ಯೋಗ, ಪ್ರವಾಸೋದ್ಯಮ ಮತ್ತು ಸಾಮಾಜಿಕ ಆರ್ಥಿಕ ಅಭಿವೃದ್ಧಿಯನ್ನು ವೃದ್ಧಿಸುತ್ತದೆ. 4 ವರ್ಷಗಳಲ್ಲಿ ಈ ಹೊಸ ರೈಲು ಮಾರ್ಗ ಸಿದ್ಧವಾಗಲಿದ್ದು, 2798 ಕೋಟಿ ರೂ.ಗಳನ್ನು ಇದಕ್ಕೆ ವೆಚ್ಚ ಮಾಡಲಾಗುತ್ತಿದೆ. ಈ ನಿರ್ಧಾರದಿಂದ, ರಾಜಸ್ಥಾನ ಮತ್ತು ಗುಜರಾತ್‌ನ ಜನರಿಗೆ ಉತ್ತಮ ರೈಲು ಸಂಪರ್ಕ ದೊರೆಯುತ್ತದೆ, ಈ ಪ್ರದೇಶದಲ್ಲಿ ಆಧ್ಯಾತ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗುತ್ತದೆ. ಪ್ರಸಿದ್ಧ ತೀರ್ಥಕ್ಷೇತ್ರ ಅಂಬಾಜಿ 51 ಶಕ್ತಿಪೀಠಗಳಲ್ಲಿ ಒಂದಾಗಿದೆ. ಈ ಯೋಜನೆಯು 2026-27ಕ್ಕೆ ಪೂರ್ಣಗೊಳ್ಳಲಿದೆ. ಈ ಯೋಜನೆಯು ನಿರ್ಮಾಣದ ಸಮಯದಲ್ಲಿ ಸುಮಾರು 40 ಲಕ್ಷ ಮಾನವ ದಿನಗಳವರೆಗೆ ನೇರ ಉದ್ಯೋಗವನ್ನು ಸೃಷ್ಟಿಸುತ್ತದೆ. ತರಂಗ ಬೆಟ್ಟದಲ್ಲಿರುವ ಅಜೀತನಾಥ ಜೈನ ದೇವಾಲಯಕ್ಕೆ (24 ಪವಿತ್ರ ಜೈನ ತೀರ್ಥಂಕರರಲ್ಲಿ ಒಬ್ಬರು) ಭೇಟಿ ನೀಡುವ ಭಕ್ತರು ಇದರಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಾರೆ.
- ನಿರ್ಧಾರ: 18 ವರ್ಷ ಮೇಲ್ಪಟ್ಟ ಎಲ್ಲ ನಾಗರಿಕರಿಗೆ ಕೋವಿಡ್ ಲಸಿಕೆಯ ಉಚಿತ ಮುನ್ನೆಚ್ಚರಿಕೆ ಡೋಸ್‌ಗಳನ್ನು ನೀಡಲು ಕೇಂದ್ರ ಸಚಿವ ಸಂಪುಟದ ನಿರ್ಧಾರ.
- ಪರಿಣಾಮ: ಅಮೃತ ಕಾಲದ ಅಂಗವಾಗಿ, ಜುಲೈ 15, 2022 ರಿಂದ, ಮುಂದಿನ 75 ದಿನಗಳವರೆಗೆ, ದೇಶದಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ನಾಗರಿಕರಿಗೆ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ ಕೋವಿಡ್ ಲಸಿಕೆಯ ಉಚಿತ ಬೂಸ್ಟರ್ ಡೋಸ್‌ಗಳನ್ನು ನೀಡಲು ಸರ್ಕಾರ ನಿರ್ಧರಿಸಿದೆ. ಇದುವರೆಗೆ ಮುಂಚೂಣಿ ಕಾರ್ಯಕರ್ತರು ಮತ್ತು ಹಿರಿಯ ನಾಗರಿಕರಿಗೆ ಇದು ಉಚಿತವಾಗಿತ್ತು. ಬೂಸ್ಟರ್ ಡೋಸ್ ಲಸಿಕೆ ನೀಡುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.
- ನಿರ್ಧಾರ: ಗುಜರಾತ್‌ನ ವಡೋದರಾದಲ್ಲಿರುವ ರಾಷ್ಟ್ರೀಯ ರೈಲು ಮತ್ತು ಸಾರಿಗೆ ಸಂಸ್ಥೆಯನ್ನು ಡೀಮ್ಡ್ ವಿಶ್ವವಿದ್ಯಾಲಯದಿಂದ ಕೇಂದ್ರೀಯ ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೇರಿಸಲು ಸಂಪುಟದ ಅನುಮೋದನೆ.
- ಪರಿಣಾಮ: ಕೇಂದ್ರೀಯ ವಿಶ್ವವಿದ್ಯಾಲಯದ ಸ್ಥಾನಮಾನ ಪಡೆಯುವ ಮೂಲಕ ಇದರ ಸಾಮರ್ಥ್ಯ ಮತ್ತಷ್ಟು ಹೆಚ್ಚಲಿದೆ. ಸಾರಿಗೆ ಕ್ಷೇತ್ರದಲ್ಲಿ ಶಿಕ್ಷಣ, ತರಬೇತಿ, ಕೌಶಲ್ಯ ಮತ್ತು ಸಂಶೋಧನೆಯ ಜೊತೆಗೆ ಇನ್ನಷ್ಟು ಹೊಸ ಕೋರ್ಸ್‌ಗಳು ಇಲ್ಲಿ ಲಭ್ಯವಿದೆ. ಇದು ಗುಜರಾತ್‌ನ ಜನರಿಗೆ ಮಾತ್ರವಲ್ಲದೆ ದೇಶದ ಎಲ್ಲ ಯುವಜನರಿಗೂ ಪ್ರಯೋಜನವನ್ನು ನೀಡುತ್ತದೆ. ■



ಪ್ರಧಾನ ಮಂತ್ರಿ ಸಂಗ್ರಹಾಲಯ...

# ಭೂತ ಮತ್ತು ಭವಿಷ್ಯತ್ತಿನ ಬೆಸುಗೆ

ಪ್ರತಿಯೊಂದು ರಾಷ್ಟ್ರವೂ ತನ್ನ ಪರಂಪರೆಯನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ವರ್ಗಾಯಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ನವ ಭಾರತವು ತನ್ನ ಭವಿತವ್ಯವನ್ನು ಪ್ರಸ್ತುತಪಡಿಸಲು ಮತ್ತು ಅದರ ಶ್ರೀಮಂತ ಪರಂಪರೆಯನ್ನು ಸಂರಕ್ಷಿಸಲು ಇತಿಹಾಸವನ್ನು ಓದುವ ಮಂತ್ರವನ್ನು ಅಳವಡಿಸಿಕೊಳ್ಳುತ್ತಿದೆ, ಇದರಿಂದ ಇಂದಿನ ಮತ್ತು ಮುಂದಿನ ಪೀಳಿಗೆಗಳು ಭವ್ಯವಾದ 75 ವರ್ಷಗಳನ್ನು ಕಾಣಬಹುದು. ಕಳೆದ ಎಂಟು ವರ್ಷಗಳಲ್ಲಿ, ಸರ್ಕಾರ 100ಕ್ಕೂ ಹೆಚ್ಚು ವಸ್ತು ಸಂಗ್ರಹಾಲಯಗಳ ನಿರ್ಮಾಣ ಅಥವಾ ಪುನರ್ನಿರ್ಮಾಣವನ್ನು ಆರಂಭಿಸಿದ್ದು ಮಾತ್ರವಲ್ಲದೆ, ಆ ಪೈಕಿ 50ನ್ನು ಲೋಕಾರ್ಪಣೆ ಮಾಡಿದೆ. 2022 ಏಪ್ರಿಲ್ 14 ರಂದು ಪ್ರಾರಂಭವಾದ ಪ್ರಧಾನಮಂತ್ರಿ ಸಂಗ್ರಹಾಲಯ ಸಹ ಒಂದು ದೊಡ್ಡ ಸ್ಫೂರ್ತಿಯಾಗಿದೆ ಮತ್ತು ತ್ವರಿತವಾಗಿ ಉತ್ತಮ ಜ್ಞಾನ ಕೇಂದ್ರವಾಗಿ ಮಾರ್ಪಡುತ್ತಿದೆ.




75 ವರ್ಷಗಳಲ್ಲಿ, ದೇಶವು ಅನೇಕ ಹೆಮ್ಮೆಯ ಕ್ಷಣಗಳನ್ನು ಕಂಡಿದೆ. ಈ ಕ್ಷಣಗಳ ಚಾರಿತ್ರಿಕ ಮಹತ್ವಕ್ಕೆ ಸರಿ ಸಾಟಿಯಿಲ್ಲ. ಅಂತಹ ಅನೇಕ ಕ್ಷಣಗಳನ್ನು ಪ್ರಧಾನಮಂತ್ರಿ ಸಂಗ್ರಹಾಲಯದಲ್ಲಿ ಕಾಣಬಹುದು. ಸ್ವತಂತ್ರ ಭಾರತದ ಪ್ರತಿಯೊಂದು ಸರ್ಕಾರವೂ ದೇಶವು ಇಂದು ತನ್ನ ಈ ಉತ್ತುಂಗವನ್ನು ತಲುಪಲು ಕೊಡುಗೆ ನೀಡಿವೆ. ಪ್ರತಿಯೊಂದು ಸರ್ಕಾರದ ನಾಯಕತ್ವದ ಕೊಡುಗೆ ಮತ್ತು ಅವರ ಕಾಲದ ಅಭಿವೃದ್ಧಿ, ಅವರ ವೈಯಕ್ತಿಕ ಕೌಶಲ್ಯಗಳು ಮತ್ತು ಸವಾಲುಗಳನ್ನು ಎದುರಿಸಿದ ದಕ್ಷ ವಿಧಾನಗಳು ರಾಷ್ಟ್ರದ ಹಿಂದಿನ ಸುವರ್ಣ ವೈಭವವನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೆ ಪರಿಚಯಿಸಲು ಪ್ರಧಾನಮಂತ್ರಿ ಸಂಗ್ರಹಾಲಯದಲ್ಲಿ ತಂತ್ರಜ್ಞಾನದೊಂದಿಗೆ ಸಂಯೋಜಿತವಾಗಿವೆ. ದೇಶದ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಸೇರಿದಂತೆ ಸಾರ್ವಜನಿಕರಿಗೆ ಸಂಗ್ರಹಾಲಯ ಮುಕ್ತವಾದ ಮೊದಲ ಎರಡು ತಿಂಗಳಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದಾರೆ.

2022 ಏಪ್ರಿಲ್ 24ರಂದು, ಪ್ರಧಾನಮಂತ್ರಿ ಸಂಗ್ರಹಾಲಯವು ಹೆಚ್ಚಿನ ಜನರಿಗೆ ತಿಳಿದಿಲ್ಲದ ಅಂತಹ ಅನೇಕ ಸಂಗತಿಗಳನ್ನು ಒಳಗೊಂಡಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೇಳಿದರು. ಮ್ಯೂಸಿಯಂ ದಿನದಂದು (ಮೇ 18) ಪ್ರಧಾನಮಂತ್ರಿಯವರು ಯುವಕರಿಗೆ ಮಿತ್ರವೃಂದದೊಂದಿಗೆ ಸ್ಥಳೀಯ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿ ಅನುಭವವನ್ನು ಹಂಚಿಕೊಳ್ಳುವಂತೆ ಉತ್ತೇಜಿಸಿದರು. ನಮ್ಮ ಯುವ ಪೀಳಿಗೆಯು ಈ ಜೀವಂತ ಸಂಕೇತವನ್ನು ನೋಡಿದಾಗ, ಅವರು ಸತ್ಯ ಮತ್ತು ಸತ್ಯದ ಪ್ರಜ್ಞೆಯನ್ನು ಪಡೆಯುತ್ತಾರೆ. ಈ ಕರೆ ಅಥವಾ ಪ್ರಯತ್ನದ ಬಗ್ಗೆ ಪ್ರಧಾನಮಂತ್ರಿ ಮೋದಿ ಈಗಾಗಲೇ ಹೇಳಿದ್ದಾರೆ. ಪ್ರಧಾನಮಂತ್ರಿ ಸಂಗ್ರಹಾಲಯವು ನಮ್ಮ ಪ್ರಧಾನಮಂತ್ರಿಗಳು ಹಲವಾರು ಸವಾಲುಗಳನ್ನು ಎದುರಿಸಿ ದೇಶಕ್ಕೆ ಹೇಗೆ ಹೊಸ ಮಾರ್ಗವನ್ನು ರೂಪಿಸಿದರು ಮತ್ತು ದೇಶದ ಒಟ್ಟಾರೆ ಪ್ರಗತಿಯನ್ನು ಹೇಗೆ ಖಾತ್ರಿಪಡಿಸಿದರು ಎಂಬುದರ ವಿವರಣಾತ್ಮಕ ದಾಖಲೆಗಳನ್ನು ಒಳಗೊಂಡಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸದಾ ಭಾರತದ ಗತಕಾಲ, ಪರಂಪರೆ ಮತ್ತು ವರ್ತಮಾನದ ನೈಜ ಚಿತ್ರಣದ ಮಹತ್ವವನ್ನು ಒತ್ತಿಹೇಳಿದ್ದಾರೆ. ಇದರ ಪರಿಣಾಮವಾಗಿ, ಪ್ರಸ್ತುತ ಸರ್ಕಾರವು ಪರಂಪರೆಯನ್ನು ಸಂರಕ್ಷಿಸಲು, ವಿದೇಶದಿಂದ ಪರಂಪರೆಯನ್ನು ಮರಳಿ ತರಲು ಮತ್ತು ವಿಶ್ವ ವೇದಿಕೆಯಲ್ಲಿ ವೈಭವೋಪೇತ ಪರಂಪರೆಯನ್ನು ಪ್ರದರ್ಶಿಸಲು ಕೆಲಸ ಮಾಡುತ್ತಿದೆ. ಇದರ ಭಾಗವಾಗಿ ವಸ್ತುಸಂಗ್ರಹಾಲಯಗಳನ್ನು ನಿರ್ಮಿಸಲಾಗುತ್ತಿದೆ. ಜಲಿಯನ್ ವಾಲಾಬಾಗ್ ಸ್ಮಾರಕ, ಅಂಬೇಡ್ಕರ್ ರಾಷ್ಟ್ರೀಯ ಸ್ಮಾರಕ, ನೇತಾಜಿ ಸುಭಾಷ್ ಚಂದ್ರ ಬೋಸ್ ಸ್ಮಾರಕ, ಭಾರತೀಯ ರಾಷ್ಟ್ರೀಯ ಸೇನಾ ವಸ್ತುಸಂಗ್ರಹಾಲಯ ಮತ್ತು ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯ ಇವೆಲ್ಲವೂ ಇದರ ಭಾಗವಾಗಿವೆ. ಪ್ರಧಾನಮಂತ್ರಿ ಸಂಗ್ರಹಾಲಯವು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಭಾರತದ ಪ್ರಗತಿ ಮತ್ತು ಅದು ಹೊಂದಿರುವ ವೈವಿಧ್ಯವನ್ನು ವೀಕ್ಷಿಸಲು ಅತ್ಯುತ್ತಮ ಸ್ಥಳವಾಗಿದೆ. ಹೀಗಾಗಿಯೇ, ಮೊದಲ ಎರಡು ತಿಂಗಳಲ್ಲಿ, ಸಂಗ್ರಹಾಲಯಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಮತ್ತು ಹೆಚ್ಚಿನ ಸಂಖ್ಯೆಯ ಗಣ್ಯರು ಸೇರಿದಂತೆ 50 ಸಾವಿರಕ್ಕೂ ಹೆಚ್ಚು ಸಂದರ್ಶಕರು ಆಗಮಿಸಿದ್ದರು. ಈ ವಸ್ತುಸಂಗ್ರಹಾಲಯವು ಕೇವಲ ಮೂಲ ಛಾಯಾಚಿತ್ರಗಳು ಮತ್ತು ವೀಡಿಯೊಗಳನ್ನು ಮಾತ್ರ ಬಳಸುತ್ತದೆ, ಇದು ಹೇಳಿದ ಕಥೆಗಳ ಸತ್ಯಾಸತ್ಯತೆಯನ್ನು ಹೆಚ್ಚಿಸುತ್ತದೆ. ನೀವು ಪ್ರಧಾನ ಮಂತ್ರಿ ಸಂಗ್ರಹಾಲಯಕ್ಕೆ ಇನ್ನೂ ಭೇಟಿ ನೀಡದಿದ್ದರೆ, ನಿಮ್ಮ ನೆಚ್ಚಿನ ಪ್ರಧಾನಮಂತ್ರಿಗಳೊಂದಿಗೆ ಫೋಟೋಗಳನ್ನು ತೆಗೆದುಕೊಳ್ಳುವ ಯೋಜನೆಯನ್ನು ಮಾಡಿ, ಅಥವಾ ಅವರೊಂದಿಗೆ ನೀವು ನಡೆದಾಡುವ ವೀಡಿಯೊವನ್ನು ರೆಕಾರ್ಡ್ ಮಾಡಿ.

ಈ ಪ್ರಧಾನ ಮಂತ್ರಿ ಸಂಗ್ರಹಾಲಯವು ನಮಗೆ ಸ್ಫೂರ್ತಿ ನೀಡುತ್ತಲೇ ಇರುತ್ತದೆ. ಈ ವಸ್ತುಸಂಗ್ರಹಾಲಯವು ನಮ್ಮಲ್ಲಿನ ಸುಪ್ತವಾದ ಭಾರತದ ದೊಡ್ಡ ಸಂಕಲ್ಪದ ಬೀಜಗಳನ್ನು ಬಿತ್ತುವ ಸಾಮರ್ಥ್ಯವನ್ನು ಹೊಂದಿದೆ. ಈ ವಸ್ತುಸಂಗ್ರಹಾಲಯವು ಭಾರತದ ಭವಿಷ್ಯವನ್ನು ರೂಪಿಸುತ್ತಿರುವ ಯುವಕರಲ್ಲಿ ಸಾಧನೆಯ ಪ್ರಜ್ಞೆಯನ್ನು ಮೂಡಿಸುತ್ತದೆ.

ನರೇಂದ್ರ ಮೋದಿ,
ಪ್ರಧಾನ ಮಂತ್ರಿ



## ಆಧುನಿಕ ತಂತ್ರಜ್ಞಾನ ದೊಂದಿಗೆ ಸಜ್ಜು

- ನವದೆಹಲಿಯ ಅಪ್ರತಿಮ ತೀನ್ ಮೂರ್ತಿ ಸಂಕೀರ್ಣದಲ್ಲಿರುವ ಈ ವಿಶ್ವದರ್ಜೆಯ ವಸ್ತುಸಂಗ್ರಹಾಲಯವು ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿದೆ ಮತ್ತು ಇದು ಭಾರತದ ಅತ್ಯಂತ ಆಧುನಿಕ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿದೆ.
- ಪ್ರಧಾನಮಂತ್ರಿ ಸಂಗ್ರಹಾಲಯಕ್ಕಾಗಿ ತೀನ್ ಮೂರ್ತಿ ಭವನವನ್ನು ಒಟ್ಟು 15,600 ಚದರ ಮೀಟರ್ ಗಿಂತ ಹೆಚ್ಚು ವಿಸ್ತೀರ್ಣ ಹೊಂದಿರುವ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. 43 ಗ್ಯಾಲರಿಗಳಿದ್ದು, ಪ್ರತಿಯೊಂದರಲ್ಲೂ ಪ್ರತಿಯೊಬ್ಬ ಪ್ರಧಾನಮಂತ್ರಿಯ ಕೊಡುಗೆಯ ವಿವರವಿದೆ. ಸುಮಾರು 4,000 ಜನರ ಪ್ರವಾಸಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ.
- ಈ ವಸ್ತುಸಂಗ್ರಹಾಲಯವು 18ನೇ ಶತಮಾನದಲ್ಲಿ ದೇಶದ ಸಮೃದ್ಧಿ ಮತ್ತು ಅದರ ನಂತರದ ಬ್ರಿಟಿಷ್ ಪರಂಪರೆಯಂತಹ ಸ್ವಾತಂತ್ರ್ಯ ಪೂರ್ವದ ಪ್ರಮುಖ ಘಟನೆಗಳನ್ನು ಬಿಂಬಿಸುತ್ತದೆ; ಸಂವಿಧಾನ ರಚನೆ; ಪಂಡಿತ್ ಜವಾಹರಲಾಲ್ ನೆಹರೂ ಅವರಿಂದ ಹಿಡಿದು ಡಾ. ಮನಮೋಹನ್ ಸಿಂಗ್ ವರೆಗಿನ 14 ಪ್ರಧಾನಮಂತ್ರಿಗಳ


## ಪ್ರಧಾನಮಂತ್ರಿ ಸಂಗ್ರಹಾಲಯದಲ್ಲಿ ಈ ಅನುಭವಗಳನ್ನು ನೀವು ಪಡೆಯುತ್ತೀರಿ.

ಈ ವಸ್ತುಸಂಗ್ರಹಾಲಯವನ್ನು ಸುಧಾರಿತ ಡಿಜಿಟಲ್ ಮೂಲಸೌಕರ್ಯ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಸಂಯೋಜನೆಯೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಅಸಾಧಾರಣ ಭಾವನೆಯನ್ನು ಉಂಟುಮಾಡುವ ಕೆಲವು ಪ್ರಮುಖ ಅಂಶಗಳನ್ನು ನೀವು ಇಲ್ಲಿ ಅರ್ಥಮಾಡಿಕೊಳ್ಳಬಹುದು.



### ಪ್ರಧಾನಮಂತ್ರಿಯವರೊಂದಿಗೆ ಫೋಟೋಗೆ ಪೋಸ್ ನೀಡಿ


ಇಲ್ಲಿ ನೀವು ವರ್ಧಿತ ವಾಸ್ತವತೆಯ ಅನುಭವ (ಅಗ್ಯುಮೆಂಟೆಡ್ ರಿಯಾಲಿಟಿ)ದೊಂದಿಗೆ ನಿಮ್ಮ ನೆಚ್ಚಿನ ಪ್ರಧಾನಮಂತ್ರಿಯೊಂದಿಗೆ ಚಿತ್ರ ಕ್ಲಿಕ್ಕಿಸುವ ಅವಕಾಶವನ್ನೂ ಪಡೆಯುತ್ತೀರಿ.



### ಪ್ರಧಾನಮಂತ್ರಿ ಅವರೊಂದಿಗೆ ಸಂಸತ್ತಿನ ಮುಂದೆ

ಇಲ್ಲಿ ನೀವು ವರ್ಧಿತ ವಾಸ್ತವತೆಯ ಅನುಭವದೊಂದಿಗೆ ಸಂಸತ್ತಿನ ಮುಂದೆ ಪ್ರಧಾನಮಂತ್ರಿಯವರೊಂದಿಗೆ ಹೆಜ್ಜೆ ಹಾಕುತ್ತಿರುವಂತಹ ಅವಕಾಶವನ್ನು ಪಡೆಯುತ್ತೀರಿ, ಅದರ ವೀಡಿಯೊವನ್ನು ನೀವು ಸಹ ತೆಗೆದುಕೊಳ್ಳಬಹುದು.

### ಏಕತಾ ಗೋಡೆ




ವಿವಿಧತೆಯಲ್ಲಿ ಏಕತೆಯೇ ನಮ್ಮ ಶಕ್ತಿ. ಇದನ್ನು ಪ್ರದರ್ಶಿಸಲು ಮತ್ತು ನಮ್ಮ ಏಕತೆಯನ್ನು ಆಚರಿಸಲು ಏಕತಾ ಗೋಡೆ ಬಳಿ ದೇಶವಾಸಿಗಳೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲಬೇಕು.




**ನಿಮಗೆ ಬೇಸರವಾಗುವುದಿಲ್ಲ ಬದಲಾಗಿ ಗಂಟೆಗಳ ಕಾಲ ಅಲ್ಲಿರುವಂತೆ ಮಾಡುತ್ತದೆ**
ನೀವು ನಿಮ್ಮ ಪೋಷಕರೊಂದಿಗೆ ಸಂಗ್ರಹಾಲಯಕ್ಕೆ ಹೋಗಿರಬೇಕು ಅಥವಾ ನಿಮ್ಮ ಬಾಲ್ಯದಲ್ಲಿ ಶಾಲೆಯಿಂದ ಭೇಟಿ ನೀಡಿರಬೇಕು. ವಸ್ತುಸಂಗ್ರಹಾಲಯಗಳು ಹೇಗೆಂದರೆ, ಬೇಗ ಯಾರಾದರೂ ಬೇಸರಗೊಳ್ಳುತ್ತಾರೆ, ಮನೆಗೆ ಮರಳಲು ಬಯಸುತ್ತಾರೆ. ಆದರೆ ಪ್ರಧಾನಮಂತ್ರಿ ಸಂಗ್ರಹಾಲಯವು ವಿಭಿನ್ನವಾಗಿದೆ. ಮಾಹಿತಿಯನ್ನು ಪ್ರಭಾವಶಾಲಿ ರೀತಿಯಲ್ಲಿ ಪ್ರಸ್ತುತಪಡಿಸುತ್ತದೆ. ಸಂಗ್ರಹಾಲಯಕ್ಕೆ ಭೇಟಿ ನೀಡುವ ಮಕ್ಕಳು ಮತ್ತು ಯುವಕರು ಇದನ್ನು ನೋಡಿ ಆನಂದಿಸುತ್ತಾರೆ. ನಿಮಗೆ ಅಹಿತಕರವೆನಿಸುವುದಿಲ್ಲ.

ಅಧಿಕಾರಾವಧಿಯಲ್ಲಿ ಎದುರಿಸಿದ ಸವಾಲುಗಳು ಮತ್ತು ಸಾಧನೆಗಳ ಸಂವಾದ ರೂಪದಲ್ಲಿ ಲಭ್ಯ.

- ಸಂಗ್ರಹಾಲಯದ ಲಾಂಛನವು ರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವದ ಸಂಕೇತವಾದ ಧರ್ಮಚಕ್ರವನ್ನು ಹಿಡಿದಿರುವ ಭಾರತೀಯ ನಾಗರಿಕರ ಕೈಗಳನ್ನು ಬಿಂಬಿಸುತ್ತದೆ. ಸುಸ್ಥಿರ ಇಂಧನ ಸಂರಕ್ಷಣಾ ವಿಧಾನದೊಂದಿಗೆ ನಿರ್ಮಿಸಲಾದ ವಸ್ತುಸಂಗ್ರಹಾಲಯಕ್ಕಾಗಿ, ಯಾವುದೇ ಮರಗಳನ್ನು ಕಡಿಯಲಾಗಿಲ್ಲ ಅಥವಾ ನಾಶಮಾಡಲಾಗಿಲ್ಲ.



**ನಿಮ್ಮ ನೆಚ್ಚಿನ ಪ್ರಧಾನಮಂತ್ರಿ ಸಹಿ ಮಾಡಿದ ಪತ್ರ**
ನಿಮ್ಮ ನೆಚ್ಚಿನ ಪ್ರಧಾನಮಂತ್ರಿಗಳು ಸಹಿ ಮಾಡಿದ ನಿಮ್ಮ ಹೆಸರಿನಲ್ಲಿ ಒಂದು ಪತ್ರವನ್ನು ನೀವು ಪಡೆಯಬಹುದು.



**ಭವಿಷ್ಯದಲ್ಲಿ ಭಾರತ**
ವರ್ಚುವಲ್ ಹೆಲಿಕಾಪ್ಟರ್ ನ ಪಾಡ್ ನಲ್ಲಿ ಕುಳಿತು 180 ಡಿಗ್ರಿ ಪ್ರೊಜೆಕ್ಷನ್ ನಲ್ಲಿ ದೇಶದಲ್ಲಿ ನಿರ್ಮಿಸಲಾದ ಅತಿ ಎತ್ತರದ ಸೇತುವೆಗಳು, ಸುರಂಗಗಳು ಮತ್ತು ಸೋಲಾರ್ ಪಾರ್ಕ್ ಗಳೊಂದಿಗೆ ದೇಶದ ರೋಮಾಂಚಕ ಭವಿಷ್ಯದ ಅಭಿವೃದ್ಧಿಯ ಪಯಣವನ್ನು ಅನುಭವಿಸಬಹುದು.

**ಕಾಲದ ಯಂತ್ರ**
ಹೇಳಿ ಮಾಡಿಸಿದಂತಿರುವ ಕಾಲದ ಯಂತ್ರದೊಂದಿಗೆ ಇತಿಹಾಸವನ್ನು ಪುನಶ್ಚೇತನಗೊಳಿಸಬಹುದು.

**ಪ್ರಧಾನಮಂತ್ರಿಯವರ ಸ್ಮರಣೀಯ ಭಾಷಣಗಳನ್ನು ಆಲಿಸಿ**
ಇಲ್ಲಿ ನೀವು ಕೆಂಪು ಕೋಟೆಯಿಂದ ಮಾಡಿದ ಸ್ಮರಣೀಯ ಭಾಷಣಗಳನ್ನು ಆಲಿಸಬಹುದು.

**ಮಕ್ಕಳ ವಲಯ**
ಇಸ್ರೋದ ಅಭಿಯಾನ ಮಂಗಳಯಾನ ಮತ್ತಿತರೆ ಸಾಧನೆಯನ್ನು ಇಲ್ಲಿನ ಪರದೆಗಳ ಮೂಲಕ ನೋಡಿ ಅನುಭವಿಸಬಹುದು. ನೀವೇ ಹೊಸದಾಗಿ ರಚಿಸಿದ ರೇಖಾಚಿತ್ರಗಳು ಡಿಜಿಟಲ್ ಪರದೆಯಲ್ಲಿ ಲೈವ್ ಆಗುವುದನ್ನೂ ನೋಡಬಹುದು..

## ಪ್ರಧಾನಮಂತ್ರಿಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನಿಮಗೆ ಸಹಾಯ ಮಾಡುವ ಅಂಶಗಳು

- ಪ್ರಧಾನಮಂತ್ರಿ ಸಂಗ್ರಹಾಲಯದಲ್ಲಿ, ಆಡಳಿತ ಮತ್ತು ಸವಾಲುಗಳನ್ನು ನಿಭಾಯಿಸಿದ ಬಗ್ಗೆ ಮತ್ತು ಪ್ರಧಾನಮಂತ್ರಿಗಳ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಮಾಹಿತಿಯಿದೆ. ವಿಶೇಷ ಸಂದರ್ಭಗಳ ವಸ್ತುಗಳಿಗೆ ಸಹ ಸ್ಥಾನವನ್ನು ನೀಡಲಾಗಿದೆ. ಇಲ್ಲಿ ಕೆಲವನ್ನು ಓದಿ...
- ಲಾಲ್ ಬಹದ್ದೂರ್ ಶಾಸ್ತ್ರಿ ತಮ್ಮ ಅತ್ತೆ ಮಾವನಿಂದ ಮದುವೆಯ ಉಡುಗೊರೆಯಾಗಿ ಚರಕವನ್ನು ಮಾತ್ರ ಸ್ವೀಕರಿಸಿದರು. ಆ ಚರಕವನ್ನು ಮ್ಯೂಸಿಯಂನಲ್ಲಿ ಇಡಲಾಗಿದೆ, ಅದೇ ರೀತಿ ಅವರ ಅಂಚೆ ಕಚೇರಿಯ ಪಾಸ್ ಬುಕ್ ಇದೆ, ಇದು ಅವರ ಅತ್ಯಲ್ಪ ಉಳಿತಾಯ, ಪ್ರಾಮಾಣಿಕತೆ ಮತ್ತು ಸರಳತೆಯನ್ನು ತೋರಿಸುತ್ತದೆ.
- ಮೊರಾರ್ಜಿ ದೇಸಾಯಿ ಅವರು ಸ್ವಾತಂತ್ರ್ಯ ಚಳವಳಿಗೆ ಸೇರುವ ಮೊದಲು ಅನೇಕ ವರ್ಷಗಳ ಕಾಲ ಗುಜರಾತಿನಲ್ಲಿ ಡೆಪ್ಯುಟಿ ಕಲೆಕ್ಟರ್ ಆಗಿ ಕೆಲಸ ಮಾಡಿದ್ದರು.
- ಚೌಧರಿ ಚರಣ್ ಸಿಂಗ್ ಜಮೀನ್ದಾರಿ ಪದ್ಧತಿ ನಿರ್ಮೂಲನೆಗೆ ಬದ್ಧರಾಗಿದ್ದರು. ಜಮೀನ್ದಾರಿ ನಿರ್ಮೂಲನೆಯ ಬಗ್ಗೆ ಅವರು ಒಂದು ಮಹತ್ವದ ಪುಸ್ತಕವನ್ನು ಬರೆದಿದ್ದು ಅದನ್ನು ಸಂಗ್ರಹಾಲಯದಲ್ಲಿ ಇರಿಸಲಾಗಿದೆ.
- ಪ್ರಧಾನಮಂತ್ರಿ ಚಂದ್ರಶೇಖರ್ ಕನ್ಯಾಕುಮಾರಿಯಿಂದ ದೆಹಲಿಯವರೆಗೆ "ಭಾರತ ಯಾತ್ರೆ" ಎಂದು ಕರೆಯಲಾಗುವ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು ಎಂಬುದು ಅನೇಕರಿಗೆ ತಿಳಿದಿಲ್ಲ. ಜನವರಿ 6 ರಿಂದ ಜೂನ್ 25, 1983 ರವರೆಗೆ ಅವರು ಸುಮಾರು 4,260 ಕಿಲೋಮೀಟರ್ ನಡೆದಿದ್ದರು.


## ಈ ಸಂಗ್ರಹಾಲಯಗಳಿಗೂ ಭೇಟಿ ನೀಡಿ

- ಭಾರತೀಯ ವಸ್ತುಸಂಗ್ರಹಾಲಯ (ಇಂಡಿಯನ್ ಮ್ಯೂಸಿಯಂ): ಕೋಲ್ಕತಾದಲ್ಲಿರುವ ಈ ವಸ್ತುಸಂಗ್ರಹಾಲಯವನ್ನು 1814 ರಲ್ಲಿ ಸ್ಥಾಪಿಸಲಾಯಿತು. ಇದು ಭಾರತದ ಅತ್ಯಂತ ಹಳೆಯ ಮತ್ತು ದೊಡ್ಡ ಸಂಗ್ರಹಾಲಯ ಮಾತ್ರವಲ್ಲ, ವಿಶ್ವದ, ಏಷ್ಯಾ ಪೆಸಿಫಿಕ್ ಪ್ರದೇಶದ ದೊಡ್ಡ ಸಂಗ್ರಹಾಲಯವಾಗಿದೆ. ಈ ವಸ್ತುಸಂಗ್ರಹಾಲಯದಲ್ಲಿ ಪ್ರಾಚೀನ ವಸ್ತುಗಳು, ಆಯುಧಗಳು ಮತ್ತು ಆಭರಣಗಳು, ಪಳೆಯುಳಿಕೆಗಳು, ಅಸ್ಥಿಪಂಜರಗಳು, ಹಳೆಯ ಸಂರಕ್ಷಿತ ಶವಗಳು ಮತ್ತು ಮೊಘಲ್ ವರ್ಣಚಿತ್ರಗಳ ಅಪರೂಪದ ಸಂಗ್ರಹವಿದೆ.
- ರಾಷ್ಟ್ರೀಯ ರೈಲ್ವೆ ಸಂಗ್ರಹಾಲಯ, ನವದೆಹಲಿ: ಭಾರತೀಯ ರೈಲ್ವೆಯ 140 ವರ್ಷಗಳ ಇತಿಹಾಸವನ್ನು ನೋಡಲು ಮತ್ತು ಅದರ ಬಗ್ಗೆ ಕಲಿಯಲು ಒಂದು ಅವಕಾಶವಿದೆ. ಇಲ್ಲಿ ಫೇರಿ ಕ್ವೀನ್, ಉಗಿ ಎಂಜಿನ್ ಗಳು, ಕಲ್ಲಿದ್ದಲು-ಚಾಲಿತ ವಾಹನಗಳ ಮಾದರಿಗಳು ಮತ್ತು ಮಹಾರಾಜರ ರೋಲಿಂಗ್ ಸಲೂನ್ ಅನ್ನು ನೋಡಬಹುದು. ಈ ವಸ್ತುಸಂಗ್ರಹಾಲಯವು ವಿಶ್ವದ ಅತ್ಯಂತ ಹಳೆಯ ನಿರಂತರ ಚಲಿಸುವ ರೈಲನ್ನು ಸಹ ಹೊಂದಿದೆ, ಅದರ ಎಂಜಿನ್ ಅನ್ನು 1855 ರಲ್ಲಿ ನಿರ್ಮಿಸಲಾಗಿತ್ತು.
- ಆರ್.ಬಿ.ಐ ವಿತ್ತೀಯ ವಸ್ತುಸಂಗ್ರಹಾಲಯ, ಮುಂಬೈ: ನಾಣ್ಯಗಳು ಮತ್ತು ರೂಪಾಯಿಗಳ ಅಭಿವೃದ್ಧಿಯ ಇತಿಹಾಸವನ್ನು ಈ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು. 6ನೇ ಶತಮಾನದ ನಾಣ್ಯಗಳಿಂದ ಇಂದಿನ ಇ-ಮನಿಯವರೆಗೆ ಎಲ್ಲವೂ ಇದೆ.
- ವಿರಾಸತ್-ಎ-ಖಾಲ್ಸಾ ಪಂಜಾಬ್ ನ ಆನಂದಪುರ ಸಾಹಿಬ್ ನಲ್ಲಿರುವ ಸಿಖ್ ಧರ್ಮದ ವಸ್ತುಸಂಗ್ರಹಾಲಯದೊಂದಿಗೆ ಸಂಬಂಧ ಹೊಂದಿದೆ. ಸಿಖ್ ಇತಿಹಾಸದ 500 ವರ್ಷಗಳು ಮತ್ತು ಖಾಲ್ಸಾದ 300ನೇ ವಾರ್ಷಿಕೋತ್ಸವದ ಆಚರಣೆಯಲ್ಲಿ ಈ ವಸ್ತುಸಂಗ್ರಹಾಲಯವನ್ನು ನಿರ್ಮಿಸಲಾಗಿದೆ. ಇದು ಹತ್ತನೇ ಮತ್ತು ಕೊನೆಯ ಗುರು ಗೋವಿಂದ್ ಸಿಂಗ್ ಅವರ ಧರ್ಮಗ್ರಂಥಗಳನ್ನು ಆಧರಿಸಿದ್ದು, ಏಷ್ಯಾದಲ್ಲೇ ಅತಿ ಹೆಚ್ಚು ಭೇಟಿ ನೀಡುವ ವಸ್ತುಸಂಗ್ರಹಾಲಯ ಎಂಬ ದಾಖಲೆ ಹೊಂದಿದೆ.
- ಕೈಟ್ ಮ್ಯೂಸಿಯಂ: ಇದು ಅಹ್ಮದಾಬಾದ್ ನಲ್ಲಿದೆ. ಈ ಗಾಳಿಪಟ ವಸ್ತುಸಂಗ್ರಹಾಲಯವು ದೇಶದ ಮೊದಲ ಮತ್ತು ಏಕೈಕ ಗಾಳಿಪಟ ವಸ್ತುಸಂಗ್ರಹಾಲಯವಾಗಿದೆ ಮತ್ತು ವಿಶ್ವದ ಎರಡನೆಯದಾಗಿದೆ. 1975 ಫೆಬ್ರವರಿ 26ರಂದು ಪ್ರಾರಂಭವಾಗಿ ಸಂಸ್ಕಾರ ಕೇಂದ್ರ ಎಂದು ಕರೆಯಲಾಗುವ ಈ ವಸ್ತುಸಂಗ್ರಹಾಲಯವು 22 × 16 ಅಡಿಗಳ ಅತಿದೊಡ್ಡ ಗಾಳಿಪಟದ ಜೊತೆಗೆ, ಗಾಳಿಪಟಗಳ ಇತಿಹಾಸದ ಬಗ್ಗೆ ಮಾಹಿತಿಯನ್ನು ಒದಗಿಸುವುದಲ್ಲದೆ, ವಿಶ್ವದಾದ್ಯಂತದ ಅಪರೂಪದ ಗಾಳಿಪಟಗಳನ್ನು ಪ್ರದರ್ಶಿಸುತ್ತದೆ.
- ಭಾರತೀಯ ಸಿನೆಮಾದ ರಾಷ್ಟ್ರೀಯ ವಸ್ತುಸಂಗ್ರಹಾಲಯವು ಮುಂಬೈನ ಗುಲ್ಶನ್ ಮಹಲ್ ಕಟ್ಟಡದಲ್ಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2019ರ ಜನವರಿ 19ರಂದು ಈ ವಸ್ತುಸಂಗ್ರಹಾಲಯವನ್ನು ಲೋಕಾರ್ಪಣೆ ಮಾಡಿದರು. ಈ ವಸ್ತುಸಂಗ್ರಹಾಲಯವು ವಿವಿಧ ಚಲನಚಿತ್ರ ವ್ಯಕ್ತಿಗಳ ಹೋರಾಟಗಳು ಮತ್ತು ಭಾರತೀಯ ಮನರಂಜನಾ ಉದ್ಯಮದ ಇತಿಹಾಸದ ಬಗ್ಗೆ ಅರ್ಥಗರ್ಭಿತ ಒಳನೋಟ ಒದಗಿಸುತ್ತದೆ.
- ಅಹ್ಮದಾಬಾದ್ ನಲ್ಲಿರುವ ಕ್ಯಾಲಿಕೋ ಜವಳಿ ವಸ್ತುಸಂಗ್ರಹಾಲಯವು ಭಾರತದ ಜವಳಿ ಪರಂಪರೆಯನ್ನು ಸಂರಕ್ಷಿಸುತ್ತದೆ. 1949ರಲ್ಲಿ ಪ್ರಾರಂಭವಾದ ಈ ವಸ್ತುಸಂಗ್ರಹಾಲಯವು ಮೊಘಲರ ಕಾಲದ ವಸ್ತ್ರಗಳನ್ನು ಪ್ರದರ್ಶಿಸುವುದಲ್ಲದೆ, ದೇಶದ ವಿವಿಧ ಭಾಗಗಳಲ್ಲಿ ಜವಳಿ ಉದ್ಯಮದ ಬೆಳವಣಿಗೆಯ ಬಗ್ಗೆ ಮಾಹಿತಿಯನ್ನೂ ನೀಡುತ್ತದೆ. ■

- ರಾಷ್ಟ್ರೀಯ ಯುದ್ಧ ಸ್ಮಾರಕವು ನವದೆಹಲಿಯಲ್ಲಿದೆ. ಪ್ರಾಣ ತ್ಯಾಗ ಮಾಡಿದ ಸೈನಿಕರ ನೆನಪಿಗಾಗಿ ಇದನ್ನು ನಿರ್ಮಿಸಲಾಗಿದೆ. ಅಮರ್ ಜವಾನ್ ಜ್ಯೋತಿಯನ್ನು ಈಗ ಇಲ್ಲಿ ಬೆಳಗಿಸಲಾಗುತ್ತಿದೆ.
- ರಾಷ್ಟ್ರೀಯ ಪೊಲೀಸ್ ಸ್ಮಾರಕವು ನವದೆಹಲಿಯಲ್ಲಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಅಕ್ಟೋಬರ್ 21, 2018 ರಂದು ರಾಷ್ಟ್ರೀಯ ಸ್ಮಾರಕವನ್ನು ಪೊಲೀಸ್ ಮತ್ತು ಅರೆಸೈನಿಕ ಪಡೆಗಳಿಗೆ ಸಮರ್ಪಿತವಾಗಿ ಲೋಕಾರ್ಪಣೆ ಮಾಡಿದರು. ಸ್ವಾತಂತ್ರ್ಯದ ದಶಕಗಳ ನಂತರ ದೇಶದಲ್ಲಿ ಯಾವುದೇ ರಾಷ್ಟ್ರೀಯ ಪೊಲೀಸ್ ಸ್ಮಾರಕವಿರಲಿಲ್ಲ.
- ಜಲಿಯನ್ ವಾಲಾಬಾಗ್ ಸ್ಮಾರಕ: ಸಂಕೀರ್ಣದ ಪುನರ್ನಿರ್ಮಾಣ ಮತ್ತು ಸ್ಮಾರಕ ಗ್ಯಾಲರಿಗಳ ಉದ್ಘಾಟನೆಯನ್ನು ಈಗಿನ ಸರ್ಕಾರ ಮಾಡಿದೆ.
- ಬಿಪ್ಲೋಬಿ ಭಾರತ್ ಗ್ಯಾಲರಿ ಕೋಲ್ಕತ್ತಾದಲ್ಲಿದೆ. ಇಲ್ಲಿ, ಆಧುನಿಕ ತಂತ್ರಜ್ಞಾನದ ಮೂಲಕ ಕ್ರಾಂತಿಯ ಸಂಕೇತಗಳನ್ನು ಆಕರ್ಷಕಗೊಳಿಸಲಾಗುತ್ತಿದೆ. ಆಜಾದ್ ಹಿಂದ್ ಫೌಜ್ ನ ಕೊಡುಗೆಯನ್ನು ಇತಿಹಾಸದ ಪುಟಗಳಿಂದ ಹೊರತರುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.
- ಜಾರ್ಖಂಡ್ ನ ಭಗವಾನ್ ಬಿರ್ಸಾ ಮುಂಡಾ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯವನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ದೇಶದ ರಾಷ್ಟ್ರೀಯ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯವನ್ನು ಗುಜರಾತ್ ನ ನರ್ಮದಾ ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿದ್ದು, ಇದರಲ್ಲಿ 16 ಗ್ಯಾಲರಿಗಳನ್ನು ಭಾರತದಾದ್ಯಂತ ಬುಡಕಟ್ಟು ಸ್ವಾತಂತ್ರ್ಯ ಚಳವಳಿಗಳಿಗೆ ಸಮರ್ಪಿಸಲಾಗುವುದು. ಈ ವಸ್ತುಸಂಗ್ರಹಾಲಯವು ಏಕತಾ ಪ್ರತಿಮೆಯಿಂದ ಸುಮಾರು 6 ಕಿ.ಮೀ ದೂರದಲ್ಲಿದೆ.

# ಹೊಸ ಶಿಕ್ಷಣ, ಹೊಸ ನೀತಿ ಮತ್ತು ನವ ಭಾರತದ ನಿರ್ಮಾಣ

ಶಿಶುವಿನ ಆರೋಗ್ಯಕರ ಬೆಳವಣಿಗೆಗೆ ತಾಯಿಯ ಹಾಲು ಪೌಷ್ಟಿಕಾಂಶದ ಏಕೈಕ ಮೂಲವಾಗಿದೆ. ಹುಟ್ಟಿನಿಂದ ಸಾವಿನವರೆಗೆ ಅರ್ಥಪೂರ್ಣ ಜೀವನವನ್ನು ನಡೆಸಲು ಆಹಾರದಂತೆ ಶಿಕ್ಷಣವೂ ಅತ್ಯಗತ್ಯ ಅಂಶವಾಗಿದೆ. ಶಿಕ್ಷಣದ ಗುರಿಯು ದೇಶವನ್ನು ಮುನ್ನಡೆಸಲು ಅಗತ್ಯವಾದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದಾಗಿರಬೇಕೆ ಹೊರತು, ಕೇವಲ ಪದವಿ ಪಡೆದವರನ್ನು ಸಿದ್ಧಪಡಿಸಲು ಅಲ್ಲ. ಇದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಾಥಮಿಕ ಗುರಿಯಾಗಿದೆ. ಜುಲೈ 29 ರಂದು, ಈ ಶಿಕ್ಷಣ ನೀತಿಯ ಎರಡು ವರ್ಷಗಳು ಪೂರ್ಣಗೊಳ್ಳಲಿವೆ. ಶಾಲಾ ಶಿಕ್ಷಣದಿಂದ ಕೌಶಲ್ಯ ಅಭಿವೃದ್ಧಿಯವರೆಗೆ ಹಲವಾರು ಉಪಕ್ರಮಗಳ ಎರಡು ವರ್ಷಗಳ ನಂತರ, ಈಗ ಉನ್ನತ ಶಿಕ್ಷಣ ಮಂಥನದೊಂದಿಗೆ ಮುಂದುವರಿಯುವ ಸಮಯ ಬಂದಿದೆ.. ಜುಲೈ 7 ರಿಂದ 9 ರವರೆಗೆ, ದೇಶದ ಶಿಕ್ಷಣ ಕ್ಷೇತ್ರದ 300 ವ್ಯಕ್ತಿಗಳು ಧರ್ಮ, ಆಧ್ಯಾತ್ಮಿಕತೆ ಮತ್ತು ಜ್ಞಾನದ ನಗರವಾದ ವಾರಾಣಸಿಯಲ್ಲಿ ಈ ಗುರಿಯನ್ನು ಹೇಗೆ ಸಾಧಿಸಬೇಕು ಎಂದು ಚರ್ಚಿಸಲು ಒಟ್ಟುಗೂಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜುಲೈ 7ರಂದು ಈ ಚಿಂತನ ಮಂಥನಕ್ಕೆ ಚಾಲನೆ ನೀಡಿದರು.



ನಮ್ಮ ದೇಶದಲ್ಲಿ ಎಂದಿಗೂ ಪ್ರತಿಭೆ ಮತ್ತು ಬುದ್ಧಿವಂತಿಕೆಗೆ ಕೊರತೆಯಿಲ್ಲ. ದುರದೃಷ್ಟವಶಾತ್, ಗುಲಾಮಗಿರಿಯ ಸಮಯದಲ್ಲಿ ಒಂದು ವ್ಯವಸ್ಥೆಯನ್ನು ರೂಪಿಸಲಾಯಿತು. ಅಲ್ಲಿ ಶಿಕ್ಷಣವು ಕೇವಲ ಉದ್ಯೋಗವನ್ನು ಮಾತ್ರ ಪಡೆಯಲು ಎಂದು ಭಾವಿಸಲಾಗಿತ್ತು. ಆ ಸಮಯದಲ್ಲಿ ಬ್ರಿಟಿಷರ ಗುರಿ ತಮಗಾಗಿ ಒಂದು ಸೇವಕ ವರ್ಗವನ್ನು ರೂಪಿಸುವುದಾಗಿತ್ತು. ಸ್ವಾತಂತ್ರ್ಯಾನಂತರ ಕೆಲವು ಬದಲಾವಣೆಗಳಾಗಿವೆ, ಆದರೆ ಮಾಡಬೇಕಾದದ್ದು ಬಹಳಷ್ಟಿದೆ. ಪರಿಣಾಮವಾಗಿ, ನಿರೀಕ್ಷಿತ ಫಲಿತಾಂಶಗಳು ದೊರೆತಿಲ್ಲ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದೊಂದಿಗೆ 2020ರಲ್ಲಿ ಈ ವ್ಯವಸ್ಥೆಯ ಬದಲಾವಣೆ ಪ್ರಾರಂಭವಾಯಿತು. ಕೇವಲ ಉದ್ಯೋಗಗಳನ್ನು ಪಡೆಯಲು ಮಾತ್ರ ನೆರವಾಗುವ ಬದಲು ಯುವಕರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ನೀತಿ ಸಹಾಯ ಮಾಡುತ್ತದೆ. ಜುಲೈ 7ರಂದು ಅಖಿಲ ಭಾರತೀಯ ಶಿಕ್ಷಣ ಸಮಾಗಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, "ಸಂಕುಚಿತ ಮನೋಭಾವದ ವಲಯಗಳಿಂದ ಶಿಕ್ಷಣವನ್ನು ಹೊರಗಿಡುವುದು ಮತ್ತು ಅದನ್ನು 21 ನೇ ಶತಮಾನದ ಆಧುನಿಕ ವಿಚಾರಗಳೊಂದಿಗೆ ಸಂಯೋಜಿಸುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲ ಆಧಾರವಾಗಿದೆ" ಎಂದು ಹೇಳಿದರು.

**ಪ್ರಧಾನಮಂತ್ರಿ ಮೋದಿ ಅವರ ಭಾಷಣದ ಆರು ಪ್ರಮುಖ ಅಂಶಗಳು**

1. ಸಂಕುಚಿತ ಚಿಂತನೆಯಿಂದ ಶಿಕ್ಷಣವನ್ನು ಮುಕ್ತಗೊಳಿಸುವುದು ಮತ್ತು 21ನೇ ಶತಮಾನದ ಸಮಕಾಲೀನ ವಿಚಾರಗಳೊಂದಿಗೆ ಅದನ್ನು ಸಂಯೋಜಿಸುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲ ಆಧಾರವಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆಯು ಪದವಿ ಪಡೆದ ಯುವಕರನ್ನು ತಯಾರು ಮಾಡುವುದಷ್ಟೇ ಅಲ್ಲದೆ, ದೇಶವು ಮುಂದೆ ಸಾಗಲು ಅಗತ್ಯವಿರುವಷ್ಟು ಮಾನವ ಸಂಪನ್ಮೂಲವನ್ನು ಒದಗಿಸಬೇಕು. ನಮ್ಮ ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳು ಈ ಸಂಕಲ್ಪವನ್ನು ಮುನ್ನಡೆಸಬೇಕು.
2. ಭಾರತವು ಈಗ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕ ರಾಷ್ಟ್ರಗಳಲ್ಲಿ ಒಂದಾಗಿದೆ. ನಾವು ಈಗ ವಿಶ್ವದ ಮೂರನೇ ಅತಿದೊಡ್ಡ ನವೋದ್ಯಮ ಪರಿಸರ ವ್ಯವಸ್ಥೆ ಹೊಂದಿದ್ದೇವೆ. ಬಾಹ್ಯಾಕಾಶ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ, ಸರ್ಕಾರವೇ ಎಲ್ಲವನ್ನೂ ಮಾಡುತ್ತಿರುವಾಗ, ಖಾಸಗಿ ಕಂಪನಿಗಳು ಈಗ ಯುವಕರಿಗೆ ಹೊಸ ಜಗತ್ತನ್ನು ಸೃಷ್ಟಿಸುತ್ತಿವೆ. ದೇಶದ ಹೆಣ್ಣುಮಕ್ಕಳಿಗಾಗಿ, ಈ ಹಿಂದೆ ಮಹಿಳೆಯರಿಗೆ ಪ್ರವೇಶ ಇಲ್ಲದಿದ್ದ ಕ್ಷೇತ್ರಗಳನ್ನು ಮುಕ್ತಗೊಳಿಸಲಾಗಿದ್ದು, ಈಗ ಹೆಣ್ಣುಮಕ್ಕಳು ಪ್ರತಿಭೆಯ ನಿದರ್ಶನಗಳನ್ನು ನೀಡುತ್ತಿದ್ದಾರೆ.

# ದೈವಿಕ, ಬೆರಗುಗೊಳಿಸುವಂತಹ ಹೊಸ ಕಾಶಿ

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೊದಲ ಬಾರಿಗೆ ಕಾಶಿಗೆ ಆಗಮಿಸಿದಾಗ, ಅವರು ಗುಜರಾತ್ ಅಭಿವೃದ್ಧಿ ಮಾದರಿಯನ್ನೂ ತಮ್ಮೊಂದಿಗೆ ತಂದರು. ಆದಾಗ್ಯೂ, ಆಧ್ಯಾತ್ಮಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ನಗರಿ ಕಾಶಿಯಲ್ಲಿ, ಅವರು "ಕಾಶಿ ಮಾದರಿ" ಎಂದು ಕರೆಯಲಾಗುವ ಹೊಸ ಅಭಿವೃದ್ಧಿ ಮಾದರಿಯನ್ನು ಪರಿಚಯಿಸಿದರು. ಈ ಮಾದರಿಯು ಸಂಪ್ರದಾಯ ಮತ್ತು ಆಧುನಿಕತೆಯ ಅತ್ಯುತ್ತಮ ಮಿಶ್ರಣವಾಗಿದೆ. ಪ್ರಧಾನಮಂತ್ರಿ ಮೋದಿ ಅವರು ದೇಶದ ಚುಕ್ಕಾಣಿ ಹಿಡಿದ ನಂತರ ತಮ್ಮ ಸಂಸದೀಯ ಕ್ಷೇತ್ರಕ್ಕೆ ಭೇಟಿ ನೀಡಿದಾಗಲೆಲ್ಲಾ, ಅವರು ಕೋಟ್ಯಂತರ ರೂಪಾಯಿಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ಜುಲೈ 7 ರಂದು ಅವರು ಮತ್ತೆ ಕಾಶಿಗೆ 1800 ಕೋಟಿ ರೂ.ಗಳ ಉಡುಗೊರೆಗಳನ್ನು ನೀಡಿದರು.

ಕಾಶಿಯು ಪರಂಪರೆ ಮತ್ತು ಅಭಿವೃದ್ಧಿ ಎರಡನ್ನೂ ಒಳಗೊಂಡಿರುವ ಅಂತಹ ಚಿತ್ರವನ್ನು ಇಡೀ ದೇಶಕ್ಕೆ ಪ್ರದರ್ಶಿಸಿದೆ. ಸಾವಿರಾರು ಕೋಟಿ ರೂ.ಗಳ ಹಲವಾರು ಯೋಜನೆಗಳು ಮತ್ತು ಆ ಯೋಜನೆಗಳು ಪೂರ್ಣಗೊಂಡಿವೆ, ಹಾಗೂ ಇನ್ನೂ ಅನೇಕ ಕಾಮಗಾರಿಗಳು ಪ್ರಗತಿಯಲ್ಲಿವೆ. ಜುಲೈ 7 ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸುಮಾರು 1800 ಕೋಟಿ ರೂ.ಗಳ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು, "ಕಾಶಿಯ ಆಧುನಿಕ ಮೂಲಸೌಕರ್ಯವು ಚಲನಶೀಲತೆಯನ್ನು ಹೆಚ್ಚಿಸುತ್ತಿದೆ" ಎಂದು ಹೇಳಿದರು. ಶಿಕ್ಷಣ, ಕೌಶಲ್ಯ, ಪರಿಸರ, ಶುಚಿತ್ವ ಮತ್ತು ವ್ಯವಹಾರವನ್ನು ಪ್ರೋತ್ಸಾಹಿಸಿದಾಗ, ಹೊಸ ಸಂಸ್ಥೆಗಳು ರೂಪುಗೊಂಡಾಗ ಹಾಗು ನಂಬಿಕೆ ಮತ್ತು ಆಧ್ಯಾತ್ಮಿಕತೆಗೆ ಸಂಬಂಧಿಸಿದ ಪವಿತ್ರ ಸ್ಥಳಗಳ ದೈವತ್ವವು ಆಧುನಿಕ ವೈಭವದೊಂದಿಗೆ ಸಂಯೋಜಿಸಲ್ಪಟ್ಟಾಗ ಅಭಿವೃದ್ಧಿಯು ಪ್ರಗತಿಪರವಾಗಿರುತ್ತದೆ. ಬಡವರಿಗೆ ವಸತಿ, ವಿದ್ಯುತ್, ನೀರು, ಅನಿಲ ಮತ್ತು ಶೌಚಾಲಯಗಳಂತಹ ಮೂಲಭೂತ ಅವಶ್ಯಕತೆಗಳು ಲಭ್ಯವಿದ್ದಾಗ, ನಾವಿಕರು, ನೇಕಾರರು, ಕರಕುಶಲಕರ್ಮಿಗಳು ಮತ್ತು ಬೀದಿಬದಿ ವ್ಯಾಪಾರಿಗಳಿಂದ ಹಿಡಿದು ವಸತಿ ರಹಿತರವರೆಗೆ ಪ್ರತಿಯೊಬ್ಬರೂ ಅಭಿವೃದ್ಧಿಯಿಂದ ಪ್ರಯೋಜನ ಪಡೆಯುತ್ತಾರೆ.

## 1800 ಕೋಟಿ ರೂ.ಗಳ ಯೋಜನೆಗಳು:

- 590 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಯೋಜನೆಗಳನ್ನು ಉದ್ಘಾಟಿಸಲಾಯಿತು. ಇವುಗಳಲ್ಲಿ ವಾರಾಣಸಿ ಸ್ಮಾರ್ಟ್ ಸಿಟಿ ಮತ್ತು ನಗರ ಯೋಜನೆಗಳ ಅಡಿಯಲ್ಲಿ ಹಲವಾರು ಉಪಕ್ರಮಗಳು ಸೇರಿವೆ.
- ಬಬತ್ಪುರ-ಕಾಪ್ಸೆಥಿ-ಭದೋಹಿ ರಸ್ತೆಯ ಸೇತುವೆಯ ಮೇಲೆ ಚತುಷ್ಪಥ ರಸ್ತೆ, 7 ಪಿಎಂಜಿಎಸ್‌.ವೈ ರಸ್ತೆಗಳ ನಿರ್ಮಾಣ ಮತ್ತು ಧಾರಾಸೌನಾ-ಸಿಂಧೌರಾ ರಸ್ತೆ ಅಗಲೀಕರಣ ಸೇರಿದಂತೆ ಹಲವಾರು ರಸ್ತೆ ಯೋಜನೆಗಳನ್ನು ಉದ್ಘಾಟಿಸಲಾಯಿತು.
- ಒಳಚರಂಡಿ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಹಲವಾರು ಯೋಜನೆಗಳಿಗೂ ಸಹ ಚಾಲನೆ ನೀಡಲಾಯಿತು.
- ಪ್ರಧಾನಮಂತ್ರಿಯವರು 1200 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಅವುಗಳಲ್ಲಿ ಹಲವಾರು ರಸ್ತೆ ಮತ್ತು ಅಗಲೀಕರಣ ಯೋಜನೆಗಳೂ ಸೇರಿವೆ. ಈ ಯೋಜನೆಗಳು ನಗರ ಮತ್ತು ಗ್ರಾಮೀಣ ರಸ್ತೆಗಳಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ನೆರವಾಗುತ್ತವೆ.
- ಈ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ, ಉತ್ತರ ಪ್ರದೇಶದ ಬಡವರ ಪರ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ ಸೇರಿದಂತೆ ವಿಶ್ವಬ್ಯಾಂಕ್ ನಿಂದ ಧನಸಹಾಯ ಪಡೆದ ಹಲವಾರು ಯೋಜನೆಗಳಿಗೆ ಪ್ರಧಾನಮಂತ್ರಿಯವರು ಅಡಿಪಾಯ ಹಾಕಿದರು.
- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸಿಗ್ರಾ ಕ್ರೀಡಾಂಗಣ ಪುನರಭಿವೃದ್ಧಿಯ ಮೊದಲ ಹಂತಕ್ಕೂ ಶಂಕುಸ್ಥಾಪನೆ ನೆರವೇರಿಸಿದರು.



## ಅಕ್ಷಯ ಪಾತ್ರಾ ಅಡುಗೆ ಮನೆಯ ಉಡುಗೊರೆ ಪಡೆದ ವಾರಾಣಸಿ

ವಾರಾಣಸಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಅಕ್ಷಯ ಪಾತ್ರಾ ಅಡುಗೆ ಮನೆಯನ್ನು ಉದ್ಘಾಟಿಸಿದರು. ಇದು ದೇಶದ 62ನೇ ಅಕ್ಷಯ ಪಾತ್ರೆ ಅಡುಗೆ ಮನೆ ಮತ್ತು ಉತ್ತರ ಪ್ರದೇಶದ ನಾಲ್ಕನೇ ಅಡುಗೆ ಮನೆಯಾಗಿದೆ. ಅಕ್ಷಯ ಪಾತ್ರಾ ಒಂದು ಲಾಭರಹಿತ ಸಂಸ್ಥೆಯಾಗಿದೆ. ಇದು ಉತ್ತರ ಪ್ರದೇಶ ಸೇರಿದಂತೆ 12 ರಾಜ್ಯಗಳ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುತ್ತದೆ. ಅಕ್ಷಯ ಪಾತ್ರಾ ಭಾರತದ ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಕೇಂದ್ರ ಸರ್ಕಾರದ ಪ್ರಮುಖ ಪಾಲುದಾರನಾಗಿದೆ. ಈ ಯೋಜನೆಯನ್ನು ಸಾರ್ವಜನಿಕ-ಖಾಸಗಿ ಸಹಯೋಗದ ಮೇಲೆ ರೂಪಿಸಲಾಗಿದೆ. ಈ ಸಂಸ್ಥೆಯು ದೇಶಾದ್ಯಂತ 14702 ಶಾಲೆಗಳ ಸುಮಾರು 17 ಲಕ್ಷ ಶಾಲಾ ವಿದ್ಯಾರ್ಥಿಗಳಿಗೆ ಆಹಾರವನ್ನು ಪೂರೈಸುತ್ತದೆ. ಇಂದು, ವಾರಾಣಸಿಯಲ್ಲಿ 62ನೇ ಅಕ್ಷಯ ಪಾತ್ರಾ ಪಾಕಶಾಲೆ ಕೇಂದ್ರವನ್ನು ತೆರೆಯಲಾಗಿದೆ. ಈ ಅಕ್ಷಯ ಪಾತ್ರೆ ಅಡುಗೆ ಮನೆಯಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ತಯಾರಿಸಲಾಗುವುದು.

3. ಹೊಸ ನೀತಿಯ ಸಂಪೂರ್ಣ ಗಮನವು ಮಕ್ಕಳಿಗೆ ಅವರ ಪ್ರತಿಭೆ ಮತ್ತು ಆದ್ಯತೆಗಳ ಆಧಾರದ ಮೇಲೆ ತರಬೇತಿ ನೀಡುವುದರ ಮೇಲಿದೆ. ನಮ್ಮ ಯುವಕರು ಕೌಶಲ್ಯ ಮತ್ತು ಆತ್ಮವಿಶ್ವಾಸದಿಂದ ತುಂಬಿರಬೇಕು. ಶಿಕ್ಷಣ ನೀತಿಯು ಇದಕ್ಕೆ ಅಡಿಪಾಯ ಹಾಕುತ್ತಿದೆ.
4. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗಾಗಿ, ದೇಶದ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಮೂಲಸೌಕರ್ಯಗಳ ಬಗ್ಗೆಯೂ ಶ್ರಮಿಸಲಾಗುತ್ತಿದೆ. ಇಂದು, ದೇಶದಲ್ಲಿ ಹೆಚ್ಚಿನ ಸಂಖ್ಯೆಯ ಹೊಸ ಕಾಲೇಜುಗಳು ತೆರೆಯುತ್ತಿವೆ; ಹೊಸ ವಿಶ್ವವಿದ್ಯಾಲಯಗಳು ತೆರೆಯುತ್ತಿವೆ; ಹೊಸ ಐಐಟಿಗಳು ಮತ್ತು ಐಐಎಂಗಳನ್ನು ಸ್ಥಾಪಿಸಲಾಗುತ್ತಿದೆ.
5. ರಾಷ್ಟ್ರೀಯ ಶಿಕ್ಷಣ ನೀತಿಯು ಈಗ ಒಬ್ಬರ ಸ್ಥಳೀಯ ಭಾಷೆಯಲ್ಲಿ ಅಧ್ಯಯನ ಮಾಡಲು ಅವಕಾಶ ಒದಗಿಸುತ್ತದೆ. ಸಂಸ್ಕೃತದಂತಹ ಪ್ರಾಚೀನ ಭಾರತೀಯ ಭಾಷೆಗಳನ್ನು ಸಹ ಈ ಅನುಕ್ರಮದಲ್ಲಿ ಮುಂದಕ್ಕೆ ಕೊಂಡೊಯ್ಯಲಾಗಿದೆ.
6. ಮುಂಬರುವ ವರ್ಷಗಳಲ್ಲಿ, ಭಾರತವು ಪ್ರಮುಖ ಜಾಗತಿಕ ಶಿಕ್ಷಣ ಕೇಂದ್ರವಾಗಿ ಹೊರಹೊಮ್ಮಬಹುದು. ಮೊದಲನೆಯದಾಗಿ, ಅಂತಾರಾಷ್ಟ್ರೀಯ ಮಾನದಂಡಗಳನ್ನು ಪೂರೈಸಲು ನಾವು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಸಿದ್ಧಪಡಿಸಬೇಕು. ಈ ದಿಶೆಯಲ್ಲಿ ದೇಶವು ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ. ■

# ಸೇರ್ಪಡೆ: ವಂಚಿತ ಸಮುದಾಯಕ್ಕೆ ಅಭಿವೃದ್ಧಿಯ ಹಾದಿ




ಭಾರತದ ಸನ್ನಿವೇಶದಲ್ಲಿ ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಯ ಪರಿಕಲ್ಪನೆ ಹೊಸದೇನಲ್ಲ. ನೀವು ಪ್ರಾಚೀನ ಧರ್ಮಗ್ರಂಥಗಳನ್ನು ನೋಡಿದರೆ, ಎಲ್ಲರನ್ನೂ ಜೊತೆಯಲ್ಲಿ ಕರೆದೊಯ್ಯುವ ಒತ್ತು ಅದರಲ್ಲಿ ಅಂತರ್ಗತವಾಗಿದೆ. 'ಸರ್ವೇ ಭವಂತು ಸುಖಿನಾಃ' ಎಂಬ ಭಾರತೀಯ ತತ್ತ್ವಶಾಸ್ತ್ರವೂ ಇದೇ ನಂಬಿಕೆಯನ್ನು ಎತ್ತಿ ತೋರಿಸುತ್ತದೆ. ಭಾರತದಲ್ಲಿ, ಆರ್ಥಿಕ ಮಟ್ಟದಿಂದ ಸಾಮಾಜಿಕ ಮಟ್ಟಗಳವರೆಗೆ ಈ ಹಿಂದೆ ಅನೇಕ ಸುಧಾರಣೆಗಳನ್ನು ಪ್ರಾರಂಭಿಸಲಾಗಿದೆ. ಆದರೆ ಒಂದು ವ್ಯತ್ಯಾಸವಿತ್ತು, ಅದು ಸ್ವಭಾವ. ಈ ಹಿಂದೆ, ಹಿಂದಿನ ಸರ್ಕಾರಗಳಿಗೆ ಬೇರೆ ಯಾವುದೇ ಕ್ರಮವಿಲ್ಲದೆ ಇದ್ದಾಗ ಮಾತ್ರ ಭಾರತದಲ್ಲಿ ಪ್ರಮುಖ ಸುಧಾರಣೆಗಳು ನಡೆದವು. ಆದರೆ ಈಗ ಸರ್ಕಾರವು ಸುಧಾರಣೆಗಳನ್ನು ಯಶಸ್ಸಿನ ಮೆಟ್ಟಿಲು ಎಂದು ಪರಿಗಣಿಸುತ್ತದೆ, ಇದು ರಾಷ್ಟ್ರೀಯ ಮತ್ತು ಸಾರ್ವಜನಿಕ ಹಿತಾಸಕ್ತಿಗಾಗಿದೆ. ಜುಲೈ 8ರಂದು ಮಾಜಿ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರ ಸ್ಮರಣಾರ್ಥ ಆಯೋಜಿಸಲಾಗಿದ್ದ ಉಪನ್ಯಾಸದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ ಮುಖ್ಯಾಂಶವೆಂದರೆ ಅಂತರ್ಗತ ಅಭಿವೃದ್ಧಿ.

ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ ಎಂದರೆ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳನ್ನು ಒಳಗೊಂಡ ಅಭಿವೃದ್ಧಿ. ಸರ್ಕಾರದ ಯೋಜನೆಗಳ ಪ್ರಯೋಜನಗಳು ಸಮಾಜದ ಅಂಚಿನಲ್ಲಿರುವ ವರ್ಗವನ್ನು ತಲುಪುತ್ತವೆ. ಸಮಗ್ರ ಅಭಿವೃದ್ಧಿಯು ಜನಸಂಖ್ಯೆಯ ಎಲ್ಲಾ ವರ್ಗಗಳಿಗೆ ಅಂದರೆ ವಸತಿ, ಆಹಾರ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಮತ್ತು ಗೌರವಯುತ ಜೀವನವನ್ನು ನಡೆಸಲು ಜೀವನೋಪಾಯದ ಸಾಧನಗಳನ್ನು ಸೃಷ್ಟಿಸುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಾಗಿದೆ. ಇವೆಲ್ಲದರ ಜೊತೆಗೆ, ಸಮಗ್ರ ಅಭಿವೃದ್ಧಿಗಾಗಿ ಪರಿಸರ ಸಂರಕ್ಷಣೆಯ ಬಗ್ಗೆಯೂ ಕಾಳಜಿ ವಹಿಸುವುದು ಅಗತ್ಯವಾಗಿದೆ, ಏಕೆಂದರೆ ಪರಿಸರ ಕಾಳಜಿ ಇಲ್ಲದೆ ಮಾಡಿದ ಪ್ರಗತಿಯನ್ನು ಸುಸ್ಥಿರ ಅಥವಾ ಅಂತರ್ಗತ ಎಂದು ಕರೆಯಲಾಗುವುದಿಲ್ಲ.

ಒಳಗೊಳ್ಳುವಿಕೆಯಿಲ್ಲದೆ ನಿಜವಾದ ಅಭಿವೃದ್ಧಿ ಸಾಧ್ಯವಿಲ್ಲ ಮತ್ತು ಅಭಿವೃದ್ಧಿಯಿಲ್ಲದೆ, ಒಳಗೊಳ್ಳುವಿಕೆಯ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ. ಅಮೃತ ಕಾಲದ ಸಮಯದಲ್ಲಿ ದೇಶವು ಸ್ವಾತಂತ್ರ್ಯದ 100 ನೇ ವರ್ಷದಲ್ಲಿ ಭಾರತವು ಹೇಗಿರುತ್ತದೆ ಎಂಬುದಕ್ಕೆ ಮಾರ್ಗಸೂಚಿಯನ್ನು ರೂಪಿಸುತ್ತಿದ್ದಂತೆ, ಒಳಗೊಳ್ಳುವಿಕೆಯ ವಿಷಯವು ಹೆಚ್ಚು ಮುಖ್ಯವಾಗುತ್ತದೆ. ಅರುಣ್ ಜೇಟ್ಲಿ ಸ್ಮಾರಕ ಉಪನ್ಯಾಸದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು "ಎಲ್ಲರನ್ನೂ ಒಳಗೊಳ್ಳುವ ಮೂಲಕ ಅಭಿವೃದ್ಧಿ, ಅಭಿವೃದ್ಧಿಯ ಮೂಲಕ ಒಳಗೊಳ್ಳುವಿಕೆ" ಎಂಬ ವಿಷಯದ ಕುರಿತು ಮಾತನಾಡುವಾಗ, ಕೇಂದ್ರ ಸರ್ಕಾರದ ಈ ಸಂಕಲ್ಪವನ್ನು ಜನರ ಮುಂದೆ ಪ್ರಸ್ತುತಪಡಿಸಿದರು.

# ಒಳಗೊಳ್ಳುವಿಕೆಯ ಮೂಲಕ ಭಾರತವು ಅಭಿವೃದ್ಧಿಯ ಪಥದಲ್ಲಿ ಸಾಗಿದ್ದು ಹೀಗೆ

## 45 ಕೋಟಿಗೂ ಹೆಚ್ಚು ಜನ್ ಧನ್ ಖಾತೆ

ಕಳೆದ ಎಂಟು ವರ್ಷಗಳಲ್ಲಿ, ಭಾರತವು 45 ಕೋಟಿಗೂ ಹೆಚ್ಚು ಜನ್ ಧನ್ ಬ್ಯಾಂಕ್ ಖಾತೆಗಳನ್ನು ತೆರೆದಿದೆ. ಈ ಸಂಖ್ಯೆಯು ಜಪಾನ್, ಜರ್ಮನಿ, ಬ್ರಿಟನ್, ಇಟಲಿ ಮತ್ತು ಮೆಕ್ಸಿಕೋದ ಒಟ್ಟು ಜನಸಂಖ್ಯೆಗೆ ಸಮನಾಗಿದೆ.

## 209 ಹೊಸ ವೈದ್ಯಕೀಯ ಕಾಲೇಜುಗಳ ನಿರ್ಮಾಣ

ಆಯುಷ್ಮಾನ್ ಭಾರತ್ ನಂತಹ ಯೋಜನೆಯಿಂದ ದೊಡ್ಡ ಜನಸಂಖ್ಯೆಯು ಆರೋಗ್ಯ ರಕ್ಷಣೆಯನ್ನು ಪಡೆದಾಗ, ಅದು ಆರೋಗ್ಯ ಮೂಲಸೌಕರ್ಯದಲ್ಲಿ ಬಲವಾದ ಸುಧಾರಣೆಯನ್ನು ತರಲು ಕಾರಣವಾಯಿತು. ಕಳೆದ 7-8 ವರ್ಷಗಳಲ್ಲಿ, 4 ಕ್ಕೂ ಹೆಚ್ಚು ಬಾರಿ, ಅಂದರೆ ಭಾರತದಲ್ಲಿ ಸುಮಾರು 209 ಹೊಸ ವೈದ್ಯಕೀಯ ಕಾಲೇಜುಗಳನ್ನು ನಿರ್ಮಿಸಲಾಗಿದೆ. ವೈದ್ಯಕೀಯ ಕಾಲೇಜುಗಳಲ್ಲಿನ ಪ್ರವೇಶ ಸಂಖ್ಯೆ ದುಪ್ಪಟ್ಟಾಗಿದೆ.

## 5 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸೆ

ಆಯುಷ್ಮಾನ್ ಭಾರತ್ ಅಡಿಯಲ್ಲಿ, 50 ಕೋಟಿಗೂ ಹೆಚ್ಚು ಜನರು ಪ್ರತಿ ವರ್ಷ 5 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸಾ ಸೌಲಭ್ಯವನ್ನು ಪಡೆದಿದ್ದಾರೆ. ಕಳೆದ 4 ವರ್ಷಗಳಲ್ಲಿ, 3.5 ಕೋಟಿಗೂ ಹೆಚ್ಚು ಜನರು ಈ ಯೋಜನೆಯಡಿ ಉಚಿತ ಚಿಕಿತ್ಸೆಯನ್ನು ಪಡೆದಿದ್ದಾರೆ. ಜನಸಂಖ್ಯೆಯ ಈ ವರ್ಗ ದೀರ್ಘಕಾಲದಿಂದ ಆರೋಗ್ಯ ಸೌಲಭ್ಯಗಳಿಂದ ವಂಚಿತವಾಗಿತ್ತು.

## ದೇಶಾದ್ಯಂತ 3 ಕೋಟಿ ಪಕ್ಕ ಮನೆಗಳ ನಿರ್ಮಾಣ

ಕಳೆದ 8 ವರ್ಷಗಳಲ್ಲಿ, ಭಾರತವು ಬಡವರಿಗೆ 3 ಕೋಟಿ ಮನೆಗಳನ್ನು ಒದಗಿಸಿದೆ. ಪ್ರಪಂಚದ ಅನೇಕ ದೇಶಗಳ ಜನಸಂಖ್ಯೆಯೂ ಅಷ್ಟಿಲ್ಲ. ಸಾಗಣೆ ಸಮಯದಲ್ಲಿ ಕೊಳೆಯುತ್ತಿದ್ದ ಆಹಾರ ಉತ್ಪನ್ನಗಳು ಈಗ ಕಿಸಾನ್ ರೈಲು ಮತ್ತು ಕೃಷಿ ಉಡಾನ್ ನಂತಹ ಯೋಜನೆಗಳ ಮೂಲಕ ರೈತರು ಈ ಹಿಂದೆ ಊಹಿಸಿಕೊಳ್ಳಲೂ ಆಗದ ಪ್ರದೇಶಗಳಲ್ಲಿ ಹಾಳಾಗದೆ ತಲುಪುತ್ತಿವೆ.

- ಕಳೆದ ಎಂಟು ವರ್ಷಗಳಲ್ಲಿ, ಭಾರತವು 9 ಕೋಟಿಗೂ ಹೆಚ್ಚು ಮಹಿಳೆಯರಿಗೆ ಉಚಿತ ಅನಿಲ ಸಂಪರ್ಕವನ್ನು ನೀಡಿದೆ. ಈ ಸಂಖ್ಯೆಯು ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಸಿಂಗಾಪುರ ಮತ್ತು ನ್ಯೂಜಿಲೆಂಡ್ ನ ಒಟ್ಟು ಜನಸಂಖ್ಯೆಗಿಂತ ಹೆಚ್ಚಾಗಿದೆ.
- ಡಿಜಿಟಲ್ ಇಂಡಿಯಾ ಅಭಿಯಾನವು ಸುಮಾರು 5 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಹಳ್ಳಿಗಳಲ್ಲಿ ವಾಸಿಸುವ ಬಡವರಿಗೆ ಅಂತರ್ಜಾಲದ ಶಕ್ತಿಯನ್ನು ತಂದಿದೆ. ಭಾರತದ ಭೀಮ್-ಯುಪಿಐ ಕೋಟ್ಯಂತರ ಬಡವರನ್ನು ಡಿಜಿಟಲ್ ಪಾವತಿ ಸೌಲಭ್ಯದೊಂದಿಗೆ ಸಂಪರ್ಕಿಸಿದೆ.
- ಸ್ವನಿಧಿ ಯೋಜನೆಯು ಬೀದಿ ಬದಿ ವ್ಯಾಪಾರಿಗಳಿಗೆ ಬ್ಯಾಂಕಿಂಗ್ ವ್ಯವಸ್ಥೆಗೆ ಸೇರಲು ಅವಕಾಶವನ್ನು ನೀಡಿದೆ. ಸಮಾಜದ ಈ ವರ್ಗವು, ಈ ಹಿಂದೆ ಖಾತರಿಯ ಕೊರತೆಯಿಂದಾಗಿ ಅಂತಹ ಸೌಲಭ್ಯವನ್ನು ಎಂದಿಗೂ ಪಡೆದಿರಲಿಲ್ಲ.
- ಅಭಿವೃದ್ಧಿಯಲ್ಲಿ ಹಿಂದುಳಿದಿರುವ 100 ಜಿಲ್ಲೆಗಳನ್ನು ಮಹತ್ವಾಕಾಂಕ್ಷೆಯ ಜಿಲ್ಲೆಗಳಾಗಿ ಅಭಿವೃದ್ಧಿಯ ದೃಷ್ಟಿಯಿಂದ ಇತರ ಜಿಲ್ಲೆಗಳಿಗೆ ಸರಿಸಮನಾಗಿ ಮಾಡಲು ಅಭಿಯಾನವನ್ನು ಪ್ರಾರಂಭಿಸಲಾಗಿದೆ.
- ಉಡಾನ್ ಯೋಜನೆಯಡಿ, ಅನೇಕ ಏರ್ ಸ್ಟ್ರಿಪ್ ಗಳನ್ನು ಪುನಶ್ಚೇನಗೊಳಿಸಲಾಗಿದೆ, ಮತ್ತು ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗಿದೆ, ಇದು ದೂರದ ಮತ್ತು ವಿಶಾಲವಾದ 2ನೇ ಹಂತ ಮತ್ತು 3 ನೇ ಹಂತದ ನಗರಗಳನ್ನು ತಲುಪಿದೆ. ನಿಗದಿತ ಪ್ರಮಾಣದಲ್ಲಿ ವಿಮಾನದಲ್ಲಿ ಪ್ರಯಾಣಿಸುವುದರಿಂದ ಹವಾಯಿ ಚಪ್ಪಲಿಗಳನ್ನು ಧರಿಸುವವರೂ ವಿಮಾನದಲ್ಲಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.
- ಭಾರತದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಮಾತೃಭಾಷೆಯ ಅಧ್ಯಯನಕ್ಕೆ ಒತ್ತು ನೀಡುತ್ತಿದೆ. ಇಂಗ್ಲಿಷ್ ಗೊತ್ತಿಲ್ಲದವರಿಗೆ ಈಗ ಅವರ ಮಾತೃಭಾಷೆಯಲ್ಲಿ ಅಧ್ಯಯನ ಮಾಡುವ ಅವಕಾಶ ದೊರೆತಿದೆ.
- ಜಲ್ ಜೀವನ್ ಅಭಿಯಾನ ದೇಶದ ಪ್ರತಿಯೊಂದು ಮನೆಯನ್ನು ನಲ್ಲಿಗಳ ಮೂಲಕ ನೀರು ಪೂರೈಕೆಯೊಂದಿಗೆ ಸಂಪರ್ಕಿಸುತ್ತಿದೆ. ಕೇವಲ ಮೂರು ವರ್ಷಗಳಲ್ಲಿ, ಈ ಅಭಿಯಾನ 6 ಕೋಟಿಗೂ ಹೆಚ್ಚು ಕುಟುಂಬಗಳನ್ನು ನೀರಿನ ಸಂಪರ್ಕದೊಂದಿಗೆ ಸಂಪರ್ಕಿಸಿದೆ. ಈ ಒಳಗೊಳ್ಳುವಿಕೆಯು ಇಂದು ಸಾಮಾನ್ಯ ಜನರ ಜೀವನವನ್ನು ಸುಲಭಗೊಳಿಸುತ್ತಿದೆ.
- ಸ್ವಾಮಿತ್ವ ಯೋಜನೆಯ ಮೂಲಕ ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಮನೆಗಳು ಮತ್ತು ಕಟ್ಟಡಗಳ ನಕ್ಷೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇಲ್ಲಿಯವರೆಗೆ ಭಾರತದ 1.5 ಲಕ್ಷ ಹಳ್ಳಿಗಳಲ್ಲಿ ಡ್ರೋನ್ ಗಳ ನೆರವಿನಿಂದ ಈ ಕಾರ್ಯ ಕೈಗೊಳ್ಳಲಾಗಿದೆ. 80 ಲಕ್ಷಕ್ಕೂ ಹೆಚ್ಚು ಜನರಿಗೆ ಸ್ವತ್ತಿನ ಕಾರ್ಡ್ ಗಳನ್ನು ನೀಡಲಾಗಿದೆ.
- ಜನರ ಜೀವನದಲ್ಲಿ ಅನವಶ್ಯಕವಾಗಿ ಹಸ್ತಕ್ಷೇಪ ಮಾಡುತ್ತಿದ್ದ 1500 ಕಾನೂನುಗಳನ್ನು ಸರ್ಕಾರ ರದ್ದುಗೊಳಿಸಿದೆ. ಸುಗಮ ವ್ಯಾಪಾರ ಮತ್ತು ಸುಗಮ ಜೀವನಕ್ಕೆ ಅಡ್ಡಿಯಾಗಿದ್ದ 30,000ಕ್ಕೂ ಹೆಚ್ಚು ಅನುಸರಣೆಗಳನ್ನು ಸರ್ಕಾರ ರದ್ದುಗೊಳಿಸಿದೆ.

"ಕಳೆದ ಎಂಟು ವರ್ಷಗಳಲ್ಲಿ ಸಮಗ್ರ ಪ್ರಗತಿಗಾಗಿ ಭಾರತ ಎಷ್ಟು ವೇಗವಾಗಿ ಕೆಲಸ ಮಾಡಿದೆ ಮತ್ತು ಅದು ಯಾವ ಮಟ್ಟದಲ್ಲಿ ಕೆಲಸ ಮಾಡಿದೆ ಎಂಬುದನ್ನು ಜಗತ್ತಿನಲ್ಲಿ ಬೇರೆ ಯಾವುದರೊಂದಿಗೂ ಹೋಲಿಸಲಾಗದು. ಇಂದಿನ ಭಾರತವು, ಬಲವಂತದಿಂದ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುವ ಬದಲು, ದೃಢನಿಶ್ಚಯದಿಂದ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು ಮುಂಬರುವ 25 ವರ್ಷಗಳ ನೀಲನಕ್ಷೆಯನ್ನು ಸಿದ್ಧಪಡಿಸುತ್ತಿದೆ. ನಮ್ಮ ನೀತಿ ನಿರೂಪಣೆಯು ಜನರ ನಾಡಿಮಿಡಿತವನ್ನು ಅವಲಂಬಿಸಿದೆ. ನಾವು ಹೆಚ್ಚು ಹೆಚ್ಚು ಜನರ ಮಾತನ್ನು ಕೇಳುತ್ತೇವೆ. ಅವರ ಅಗತ್ಯಗಳು ಮತ್ತು ಅವರ ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳುತ್ತೇವೆ. ಆದ್ದರಿಂದ ನೀತಿಯು ಜನಪ್ರಿಯ ಭಾವನೆಗಳಿಂದ ಒತ್ತಡಕ್ಕೆ ಒಳಗಾಗಲು ನಾವು ಅವಕಾಶ ನೀಡುವುದಿಲ್ಲ. ■



# ಅಭಿವೃದ್ಧಿಯ ವೇಗದ ಹೆದ್ದಾರಿಗೆ ಮತ್ತೊಂದು ಆಯಾಮದ ಸೇರ್ಪಡೆ


ಎಕ್ಸ್ ಪ್ರೆಸ್ ಹೆದ್ದಾರಿ ಎರಡು ತಾಣಗಳ ನಡುವಿನ ದೂರವನ್ನು ಕಡಿಮೆ ಮಾಡುವುದು ಮಾತ್ರವಲ್ಲದೆ, ಅವುಗಳ ಮೂಲಕ ಅಭಿವೃದ್ಧಿಯ ಹೊಸ ಗಾಥೆಯನ್ನು ಸಹ ಬರೆಯುತ್ತದೆ. ಅದಕ್ಕಾಗಿಯೇ ಎಕ್ಸ್ ಪ್ರೆಸ್ ಮಾರ್ಗ ವಾಹನಗಳ ಚಕ್ರಗಳನ್ನು ವೇಗಗೊಳಿಸುವುದು ಮಾತ್ರವಲ್ಲದೆ, ಸುತ್ತಮುತ್ತಲಿನ ಪ್ರದೇಶದ ಆರ್ಥಿಕ ಅಭಿವೃದ್ಧಿಯನ್ನೂ ವೇಗಗೊಳಿಸುತ್ತದೆ. ಒಂದು ಕಾಲದಲ್ಲಿ ಕೇವಲ ಒಣ ಗದ್ದೆಗಳು, ಕೊಳಗಳು ಮತ್ತು ಕಂದಕಗಳಿಂದಷ್ಟೇ ಗುರುತಿಸಿಕೊಂಡಿದ್ದ ಬುಂದೇಲ್ ಖಂಡದ ಭೂಮಿ ಈಗ ಅಭಿವೃದ್ಧಿಯ ವೇಗವನ್ನು ಕಂಡುಕೊಂಡಿದೆ. ಆದಾಗ್ಯೂ, ಅದು ಕೆನ್-ಬೆಟ್ವಾ ಸಂಪರ್ಕ ಯೋಜನೆಯ ಕನಸಾಗಿರಲಿ ಅಥವಾ ಜುಲೈ 16 ರಂದು ನೀಡಲಾದ ಎಕ್ಸ್ ಪ್ರೆಸ್ ಮಾರ್ಗದ ರೂಪದಲ್ಲಿ ಆರ್ಥಿಕ ಅಭಿವೃದ್ಧಿಗೆ ಹೊಸ ಪ್ರಚೋದನೆಯಾಗಿರಲಿ, ಬುಂದೇಲ್ ಖಂಡ್ ಅನ್ನು ಇನ್ನು ಮುಂದೆ ಸ್ಮೃತಿಯಿಂದ ಹೊರಗುಳಿಯುವುದಿಲ್ಲ ಬದಲಿಗೆ ಅದು ದೇಶದ ಅಭಿವೃದ್ಧಿಯೊಂದಿಗೆ ವೇಗವನ್ನು ಕಾಯ್ದುಕೊಳ್ಳುತ್ತದೆ.

ಭಗವಾನ್ ಶ್ರೀ ರಾಮನು ಬುಂದೇಲ್ ಖಂಡದ ಮೂಲಕ ಹಾದು ಹೋದನು ಎಂದು ಹೇಳಲಾಗುತ್ತದೆ. ಬುಂದೇಲ್ ಖಂಡ್ ಅಲ್ಹಾ-ಉಡಾಲ್, ಮಹಾರಾಜ್ ಛತ್ರಸಾಲ್ ಮತ್ತು ಲಕ್ಷ್ಮಿಬಾಯಿ ಸೇರಿದಂತೆ ಅನೇಕ ಯೋಧರಿಗೆ ಜನ್ಮ ನೀಡಿದ ಭೂಮಿ, ಅವರು ದೇಶಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಇಸುರಿ, ಕವಿ ಪದ್ಮಾಕರ್, ತುಳಸೀದಾಸ್, ಮೈಥಿಲಿ ಶರಣ್ ಗುಪ್ತಾ, ಡಾ. ಹರಿಸಿಂಗ್ ಗೌರ್ ರಂತಹ ಮಹಾನ್ ವ್ಯಕ್ತಿಗಳು ಗುರುತಿಸಿದ ಭೂಮಿ, ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಅವರನ್ನು ಈ ದೇಶಕ್ಕೆ ಕರೆ ತಂದಿತು. ಆದಾಗ್ಯೂ, ಬುಂದೇಲ್ ಖಂಡವು ದೀರ್ಘಕಾಲದಿಂದ ದೇಶದಲ್ಲಿ ಹಿಂದುಳಿದಿರುವಿಕೆಯ ಸಂಕೇತವಾಗಿ ಪರಿಚಿತವಾಗಿದೆ.

ಆದರೀಗ, ಈ ಪರಿಚಯ ಬದಲಾಗುತ್ತಿದೆ, ಮತ್ತು ಅದರ ಶ್ರೇಯಸ್ಸು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಬದ್ಧತೆಗೆ ಸಲ್ಲುತ್ತದೆ. ನೀರಾವರಿ ಯೋಜನೆಗಳು, ಹರ್ ಘರ್ ನಲ್ ಸೆ ಜಲ್, ರಕ್ಷಣಾ ಕಾರಿಡಾರ್ ಮತ್ತು ಕೆನ್-ಬೆಟ್ವಾ ಸಂಪರ್ಕವನ್ನು ಅನುಮೋದಿಸಿದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬುಂದೇಲ್ ಖಂಡ್ ಎಕ್ಸ್ ಪ್ರೆಸ್ ಮಾರ್ಗ ರೂಪದಲ್ಲಿ ಹೊಸ ಉಡುಗೊರೆಯನ್ನು ನೀಡಿದರು, ಇದನ್ನು ಅವರು ಜುಲೈ 16 ರಂದು ಜಲೌನ್ ಕೈಥೇರಿ ಗ್ರಾಮದಲ್ಲಿ ಉದ್ಘಾಟಿಸಿದರು. ಈ ಚತುಷ್ಪಥ ಹೆದ್ದಾರಿಯು ಚಿತ್ರಕೂಟ (ರಾ.ಹೆ.-35), ಬಾಂಡಾ, ಮಹೋಬಾ, ಹಮೀರ್ಪುರ, ಜಲೌನ್, ಔರೈಯಾ ಮತ್ತು ಇಟಾವಾವನ್ನು ಸಂಪರ್ಕಿಸುತ್ತದೆ.

ಇಟಾವಾದ ಎಕ್ಸ್ ಪ್ರೆಸ್ ಮಾರ್ಗ ಕುದ್ರೈಲ್ ಬಳಿಯ ಲಕ್ನೋ-ಆಗ್ರಾ ಎಕ್ಸ್ ಪ್ರೆಸ್ ಮಾರ್ಗಕ್ಕೆ ಸಂಪರ್ಕ ಕಲ್ಪಿಸುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಫೆಬ್ರವರಿ 29, 2020 ರಂದು ಈ ಎಕ್ಸ್ ಪ್ರೆಸ್ ಮಾರ್ಗಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. 28 ತಿಂಗಳ ದಾಖಲೆಯ ಅವಧಿಯಲ್ಲಿ ಪೂರ್ಣಗೊಂಡ ಈ ಎಕ್ಸ್ ಪ್ರೆಸ್ ಮಾರ್ಗವನ್ನು ಉದ್ಘಾಟಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, "ಬುಂದೇಲ್ಖಂಡ್ ಎಕ್ಸ್ ಪ್ರೆಸ್ ಮಾರ್ಗವು ಚಿತ್ರಕೂಟದಿಂದ ದೆಹಲಿಯ ನಡುವಿನ ದೂರವನ್ನು ಸುಮಾರು 3-4 ಗಂಟೆಗಳಷ್ಟು ಕಡಿಮೆ ಮಾಡಿದೆ, ಆದರೆ ಅದರ ಪ್ರಯೋಜನಗಳು ಅದಕ್ಕಿಂತ ಹೆಚ್ಚು" ಎಂದು ಹೇಳಿದರು. ಈ ಎಕ್ಸ್ ಪ್ರೆಸ್ ಮಾರ್ಗ ವಾಹನಗಳಿಗೆ ವೇಗವನ್ನು ನೀಡುವುದಲ್ಲದೆ, ಇಡೀ ಬುಂದೇಲ್ ಖಂಡದ ಕೈಗಾರಿಕಾ ಪ್ರಗತಿಯನ್ನು ವೇಗಗೊಳಿಸಲಿದೆ. ಈ ಎಕ್ಸ್ ಪ್ರೆಸ್ ಮಾರ್ಗದ ಎರಡೂ ಬದಿಗಳಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪನೆಯಾಗಲಿವೆ. ಶೇಖರಣಾ ಸೌಲಭ್ಯಗಳು ಮತ್ತು ಶೀಥಲೀಕರಣ ಉಗ್ರಾಣ ಸೌಲಭ್ಯಗಳನ್ನು ಇಲ್ಲಿ ನಿರ್ಮಿಸಲಾಗುವುದು.

# ಈಗ ದೇಶದಲ್ಲೇ ಅತಿ ಹೆಚ್ಚು ಎಕ್ಸ್ ಪ್ರೆಸ್ ಮಾರ್ಗಗಳನ್ನು ಹೊಂದಿರುವ ರಾಜ್ಯ ಉತ್ತರ ಪ್ರದೇಶ




## ಆಧುನಿಕ ಸೌಲಭ್ಯಗಳಿಂದ ಕೂಡಿದ ಬುಂದೇಲ್ ಖಂಡ್ ಎಕ್ಸ್ ಪ್ರೆಸ್ ಮಾರ್ಗ

- ಈ ಎಕ್ಸ್ ಪ್ರೆಸ್ ಮಾರ್ಗ ಎರಡೂ ಬದಿಗಳಲ್ಲಿ, 110 ಮೀಟರ್ ಅಗಲದ ರೈಟ್-ಆಫ್-ವೇ ಅನ್ನು ನಿರ್ಮಿಸಲಾಗಿದೆ, ಅಲ್ಲಿ ಸೌರ ಶಕ್ತಿ ಲಭ್ಯವಿರುತ್ತದೆ. ಈ ಎಕ್ಸ್ ಪ್ರೆಸ್ ಮಾರ್ಗ ಪ್ರವೇಶ ಮತ್ತು ನಿರ್ಗಮನಕ್ಕಾಗಿ 13 ಪಾಯಿಂಟ್ ಗಳಲ್ಲಿ ಇಂಟರ್ ಚೇಂಜ್ ಗಳನ್ನು ಸಹ ಹೊಂದಿದೆ.
- ಎಕ್ಸ್ ಪ್ರೆಸ್ ಮಾರ್ಗ ಉದ್ದಕ್ಕೂ ಆಯಕಟ್ಟಿನ ಸ್ಥಳಗಳಲ್ಲಿ ನಾಲ್ಕು ರೈಲ್ವೆ ಮೇಲ್ಸೇತುವೆಗಳು, 19 ಮೇಲ್ಸೇತುವೆಗಳು ಮತ್ತು 224 ಕೆಳಸೇತುವೆಗಳನ್ನು ನಿರ್ಮಿಸಲಾಗಿದೆ. ಪೆಟ್ರೋಲ್ ಬಂಕ್ ಗಳು ಮತ್ತು ಸಾರ್ವಜನಿಕ ಸೌಲಭ್ಯಗಳನ್ನು ನಾಲ್ಕು ಸ್ಥಳಗಳಲ್ಲಿ ನಿರ್ಮಿಸಲಾಗುತ್ತಿದೆ. ಇದರೊಂದಿಗೆ, ಸ್ಥಳೀಯರಿಗೆ ಸರ್ವಿಸ್ ರಸ್ತೆಗಳನ್ನೂ ನಿರ್ಮಿಸಲಾಗಿದೆ.
- ಎಕ್ಸ್ ಪ್ರೆಸ್ ಮಾರ್ಗದ ಸುತ್ತಲೂ ದಟ್ಟವಾದ ನೆಡುತೋಪುಗಳನ್ನು ಮಾಡಲಾಗುವುದು, ಹಾಗೆಯೇ ಹೂಡಿಕೆ ಪಾರ್ಕ್ ಗಳು ಮತ್ತು ಕಾರ್ಖಾನೆಗಳ ಸ್ಥಾಪನೆಯನ್ನು ಸಹ ಮಾಡಲಾಗುವುದು. ಬುಂದೇಲ್ ಖಂಡ್ ಎಕ್ಸ್ ಪ್ರೆಸ್ ಮಾರ್ಗ ಇಡೀ ಉತ್ತರ ಪ್ರದೇಶ ಮತ್ತು ಇಡೀ ದೇಶದ ಆಶೋತ್ತರಗಳಿಗೆ ಹೆಚ್ಚಿನ ವೇಗ ನೀಡುತ್ತದೆ. ಎಕ್ಸ್ ಪ್ರೆಸ್ ಮಾರ್ಗದ ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ.

## ಸಂಪರ್ಕ ಸುಧಾರಣೆ ಜೊತೆಗೆ, ಆರ್ಥಿಕ ಅಭಿವೃದ್ಧಿಗೆ ಉತ್ತೇಜನ

● ಸುಮಾರು 14,850 ಕೋಟಿ ರೂ.ಗಳ ವೆಚ್ಚದಲ್ಲಿ 296 ಕಿ.ಮೀ ಉದ್ದದ ಚತುಷ್ಪಥ ಬುಂದೇಲ್ಖಂಡ್ ಎಕ್ಸ್ ಪ್ರೆಸ್ ಮಾರ್ಗವನ್ನು ನಿರ್ಮಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2020 ರ ಫೆಬ್ರವರಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದರು. ನಂತರ ಇದನ್ನು ಆರು ಪಥಗಳಿಗೆ ವಿಸ್ತರಿಸಬಹುದು. ● 36 ತಿಂಗಳ ಗುರಿಗಿಂತ ಮೊದಲೇ 28 ತಿಂಗಳಲ್ಲಿ ಎಕ್ಸ್ ಪ್ರೆಸ್ ಮಾರ್ಗ ನಿರ್ಮಾಣ ಪೂರ್ಣಗೊಂಡಿದೆ. ಬಂಡಾ ಮತ್ತು ಜಲೌನ್ ಜಿಲ್ಲೆಗಳಲ್ಲಿ ಎಕ್ಸ್ ಪ್ರೆಸ್ ಮಾರ್ಗ ಪಕ್ಕದಲ್ಲಿ ಕೈಗಾರಿಕಾ ಕಾರಿಡಾರ್ಗಳ ನಿರ್ಮಾಣವೂ ಪ್ರಾರಂಭವಾಗಿದೆ.

**1225 ಕಿ.ಮೀ. ಕಾರ್ಯಾಚರಣೆಯ ಎಕ್ಸ್ ಪ್ರೆಸ್ ಮಾರ್ಗ**

ಪೂರ್ವಾಂಚಲದ ಚಿತ್ರಣವನ್ನು ಬದಲಾಯಿಸಿರುವ ಪೂರ್ವಾಂಚಲ ಎಕ್ಸ್ ಪ್ರೆಸ್ ಮಾರ್ಗ 341 ಕಿ.ಮೀ ಉದ್ದದ ರಾಜ್ಯದ ಅತಿ ಉದ್ದದ ಎಕ್ಸ್ ಪ್ರೆಸ್ ಮಾರ್ಗವಾಗಿದೆ. ● ಆಗ್ರಾ-ಲಖನೌ ಎಕ್ಸ್ ಪ್ರೆಸ್ ಮಾರ್ಗ 302 ಕಿ.ಮೀ., ●ಯಮುನಾ ಎಕ್ಸ್ ಪ್ರೆಸ್ ಮಾರ್ಗ -165 ಕಿ.ಮೀ. ● ದೆಹಲಿ-ಮೀರತ್ ಎಕ್ಸ್ ಪ್ರೆಸ್ ಮಾರ್ಗ -96 ಕಿ.ಮೀ. ● ನೋಯ್ಡಾ-ಗ್ರೇಟರ್ ನೋಯ್ಡಾ ಎಕ್ಸ್ ಪ್ರೆಸ್ ಮಾರ್ಗ -25 ಕಿ.ಮೀ.

**ನಿರ್ಮಾಣ ಹಂತದಲ್ಲಿರುವ ಎಕ್ಸ್ ಪ್ರೆಸ್ ಮಾರ್ಗ, 1974 ಕಿ.ಮೀ.**

● ಗೋರಖ್ಪುರ ಲಿಂಕ್ ಎಕ್ಸ್ ಪ್ರೆಸ್ ಮಾರ್ಗ -91 ಕಿ.ಮೀ. ● ಗಂಗಾ ಎಕ್ಸ್ ಪ್ರೆಸ್ ಮಾರ್ಗ 594 ಕಿ.ಮೀ. ● ಲಖನೌ-ಕಾನ್ಪುರ ಎಕ್ಸ್ ಪ್ರೆಸ್ ಮಾರ್ಗ -63 ಕಿ.ಮೀ. ● ಗಾಜಿಯಾಬಾದ್-ಕಾನ್ಪುರ ಎಕ್ಸ್ ಪ್ರೆಸ್ ಮಾರ್ಗ -380 ಕಿ.ಮೀ. ● ಗೋರಖ್ಪುರ-ಸಿಲಿಗುರಿ ಎಕ್ಸ್ ಪ್ರೆಸ್ ಮಾರ್ಗ, 519 ಕಿ.ಮೀ. ● ದೆಹಲಿ-ಸಹರಾನ್ಪುರ-ಡೆಹ್ರಾಡೂನ್ ಎಕ್ಸ್ ಪ್ರೆಸ್ ಮಾರ್ಗ 210 ಕಿ.ಮೀ ● ಗಾಜಿಪುರ-ಬಲ್ಲಿಯಾ-ಮಾಂಝಿಘಾಟ್ ಎಕ್ಸ್ ಪ್ರೆಸ್ ಮಾರ್ಗ, 117 ಕಿ.ಮೀ.

## ಸಾರಿಗೆ ವಿಧಾನಗಳಲ್ಲಿ ದೊಡ್ಡ ನಗರದ ಹಕ್ಕುಗಳ ಬಗೆಗಿನ ಮನೋಭಾವದಲ್ಲಿ ಬದಲಾವಣೆ

ಒಂದು ಕಾಲದಲ್ಲಿ ದೊಡ್ಡ ನಗರಗಳಿಗೆ ಮಾತ್ರ ಆಧುನಿಕ ಸಾರಿಗೆ ಸಾಧನಗಳ ಮೊದಲ ಹಕ್ಕು ಇದೆ ಎಂದು ನಂಬಲಾಗಿತ್ತು. ಮುಂಬೈ ಆಗಿರಲಿ, ಚೆನ್ನೈ ಇರಲಿ, ಕೊಲ್ಕತ್ತಾ ಆಗಿರಲಿ, ಬೆಂಗಳೂರೇ ಆಗಿರಲಿ, ಹೈದರಾಬಾದ್ ಅಥವಾ ದೆಹಲಿ ಯಾವುದೇ ಆಗಿರಲಿ, ಅದಕ್ಕೆ ಎಲ್ಲವೂ ಸಿಗುತ್ತಿತ್ತು. ಆದರೆ, ಕಳೆದ ಎಂಟು ವರ್ಷಗಳಲ್ಲಿ, ಸರ್ಕಾರದ ಆಲೋಚನೆ ಬದಲಾಗಿದೆ. ಉತ್ತರ ಪ್ರದೇಶವು ಇದಕ್ಕೆ ಒಂದು ಪ್ರಮುಖ ಉದಾಹರಣೆಯಾಗಿದೆ. ಬುಂದೇಲ್ ಖಂಡ್ ಎಕ್ಸ್ ಪ್ರೆಸ್ ಮಾರ್ಗ ಚಿತ್ರಕೂಟ, ಬಾಂಡಾ, ಹಮೀರ್ಪುರ್, ಮಹೋಬಾ, ಜಲೌನ್, ಔರೈಯಾ ಮತ್ತು ಇಟಾವಾಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಆದರೆ ಪೂರ್ವಾಂಚಲ ಎಕ್ಸ್ ಪ್ರೆಸ್ ಮಾರ್ಗ ಲಖನೌವನ್ನು ಬಾರಾಬಂಕಿ, ಅಮೇಥಿ, ಸುಲ್ತಾನ್ಪುರ, ಅಯೋಧ್ಯೆ, ಅಂಬೇಡ್ಕರ್ ನಗರ, ಅಜಂಗಢ, ಮೌ ಮತ್ತು ಘಾಜಿಪುರಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಅಂಬೇಡ್ಕರ್ ನಗರ, ಸಂತ ಕಬೀರ್ ನಗರ್ ಮತ್ತು ಅಜಮ್ ಘರ್ ಇವೆಲ್ಲವೂ ಗೋರಖ್ ಪುರ ಲಿಂಕ್ ಎಕ್ಸ್ ಪ್ರೆಸ್ ಮಾರ್ಗ ಮೂಲಕ ಸಂಪರ್ಕ ಹೊಂದಿವೆ. ಮೀರತ್, ಹಾಪುರ್, ಬುಲಂದ್ಶಹರ್, ಅಮ್ರೋಹಾ, ಬದೌನ್, ಶಹಜಹಾನ್ಪುರ, ಹರ್ದೋಯಿ, ಉನ್ನಾವೋ, ರಾಯ್ ಬರೇಲಿ, ಪ್ರತಾಪಗಢ ಮತ್ತು ಪ್ರಯಾಗ್ ರಾಜ್ ಗಳನ್ನು ಹೊಸದಾಗಿ ನಿರ್ಮಿಸಲಾದ ಗಂಗಾ ಎಕ್ಸ್ ಪ್ರೆಸ್ ಮಾರ್ಗ ಮೂಲಕ ಸಂಪರ್ಕ ಕಲ್ಪಿಸಲಾಗುವುದು.

ಬುಂದೇಲ್ ಖಂಡ್ ಎಕ್ಸ್ ಪ್ರೆಸ್ ಮಾರ್ಗ ಈ ಪ್ರದೇಶದಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಲು ಹೆಚ್ಚು ನೆರವಾಗುತ್ತದೆ. ಕೃಷಿ ಉತ್ಪನ್ನಗಳನ್ನು ಹೊಸ ಮಾರುಕಟ್ಟೆಗಳಿಗೆ ಸಾಗಿಸಲು ಸಹ ಸುಲಭವಾಗುತ್ತದೆ. ಬುಂದೇಲ್ ಖಂಡ್ ನಲ್ಲಿ ನಿರ್ಮಿಸಲಾಗುತ್ತಿರುವ ರಕ್ಷಣಾ ಕಾರಿಡಾರ್ ಗೆ ಇದು ಸಾಕಷ್ಟು ಸಹಾಯ ಮಾಡುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ಎಕ್ ಪ್ರೆಸ್ ಮಾರ್ಗ ಬುಂದೇಲ್ ಖಂಡ್ ನ ಪ್ರತಿಯೊಂದು ಮೂಲೆಯನ್ನು ಅಭಿವೃದ್ಧಿ, ಸ್ವ-ಉದ್ಯೋಗ ಮತ್ತು ಹೊಸ ಅವಕಾಶಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ■




## ಪಿಎಂ ದಕ್ಷ ಯೋಜನೆ

# ಕೌಶಲ್ಯದಿಂದ ಉದ್ಯೋಗದವರೆಗೆ...

**ಸಮಾನತೆಯು ಒಂದು ಮೌಲ್ಯ ಮತ್ತು ಹಕ್ಕು ಎರಡೂ ಆಗಿದೆ. ಇದರ ಹೊರತಾಗಿಯೂ, ಸ್ವಾತಂತ್ರ್ಯಾನಂತರ ಸಮಾಜದ ದೊಡ್ಡ ವರ್ಗ ಸಮಾನತೆಯ ಪ್ರಯೋಜನದಿಂದ ವಂಚಿತವಾಗಿದೆ. ಕೇಂದ್ರ ಸರ್ಕಾರದ ಎಲ್ಲಾ ಯೋಜನೆಗಳು, ಅದರ ಪ್ರಯೋಜನಗಳು ಈ ವಿಭಾಗವನ್ನು ತಲುಪಬೇಕಾಗಿತ್ತು, ಆದರೆ ಅದು ಸಾಧ್ಯವಾಗಲಿಲ್ಲ. 2014 ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಂತ್ಯೋದಯ ತತ್ವವನ್ನು ಅನುಸರಿಸಿ ದೇಶದ ಉಸ್ತುವಾರಿ ವಹಿಸಿಕೊಂಡಾಗ, ಪ್ರತಿಯೊಂದು ಯೋಜನೆಯ ಪ್ರಯೋಜನಗಳು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪಲು ಪ್ರಾರಂಭಿಸಿದವು. ಪ್ರಧಾನಮಂತ್ರಿ ದಕ್ಷ ಯೋಜನೆಯು ಆಗಸ್ಟ್ 7, 2021 ರಂದು ಹೊಸ ಆರಂಭಕ್ಕೆ ನಾಂದಿಯಾಯಿತು. ಚಿಂದಿ ಆಯುವವರು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು, ಅಧಿಸೂಚನೆಯಿಂದ ಕೈಬಿಟ್ಟ ಬುಡಕಟ್ಟುಗಳು ಮತ್ತು ಆರ್ಥಿಕವಾಗಿ ಹಿಂದುಳಿದ ನಿರ್ದಿಷ್ಟ ಗುಂಪುಗಳನ್ನು ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುವ ಮೂಲಕ ಸಬಲೀಕರಣಗೊಳಿಸುವುದು ಇದರ ಗುರಿಯಾಗಿತ್ತು. ಈ ಯೋಜನೆಯು ಐದು ವರ್ಷಗಳ ಅವಧಿಯಲ್ಲಿ 2.7 ಲಕ್ಷ ಯುವಕರಿಗೆ ಪ್ರಯೋಜನವನ್ನು ನೀಡುವ ಗುರಿಯನ್ನು ಹೊಂದಿದೆ.**

ಇಂದು ತೀವ್ರ ಗಮನದ ಅಗತ್ಯವಿರುವ ಅಂತಹ ಒಂದು ವಿಷಯವೆಂದರೆ ಕೌಶಲ್ಯ ಅಭಿವೃದ್ಧಿ. ಕೌಶಲ್ಯ ಅಭಿವೃದ್ಧಿ ಮತ್ತು ಯುವ ಶಿಕ್ಷಣವನ್ನು ಉತ್ತೇಜಿಸುವ ಗುರಿಯೊಂದಿಗೆ ಕೌಶಲ್ಯ ಅಭಿವೃದ್ಧಿ ಅಭಿಯಾನ ಮತ್ತು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಾರಂಭಿಸಲಾಯಿತು. ಆದರೆ, ಕೌಶಲ್ಯ ಅಭಿವೃದ್ಧಿಗೆ ಅವಕಾಶ ದೊರೆಯದ ಸಮಾಜದ ಒಂದು ವರ್ಗವು ಇನ್ನೂ ಇತ್ತು. ಈ ವಿಭಾಗದ ಆರ್ಥಿಕ ಪ್ರಗತಿಯ ಕನಸನ್ನು ನನಸು ಮಾಡಲು ಪ್ರಧಾನಮಂತ್ರಿ ದಕ್ಷ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ವರ್ಗಗಳ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ.

**ಮೊದಲನೆಯದು:** ಗ್ರಾಮೀಣ ಕುಶಲಕರ್ಮಿಗಳು, ಜಾಡಮಾಲಿಗಳು, ಮೊದಲಾದವರಿಗೆ ಕೌಶಲ್ಯವರ್ಧನೆ ಮತ್ತು ಮರು-ಕೌಶಲ್ಯದ ಮೂಲಕ ಆರ್ಥಿಕ ಮತ್ತು ಡಿಜಿಟಲ್ ಸಾಕ್ಷರತೆಯನ್ನು ಒದಗಿಸುವುದು. ಇದಲ್ಲದೆ, ಅವರಿಗೆ ಕುಂಬಾರಿಕೆ, ನೇಯ್ಗೆ, ಮರಗೆಲಸ, ಮನೆಗೆಲಸ ಇತ್ಯಾದಿಗಳಲ್ಲಿ ತರಬೇತಿ ನೀಡಲಾಗುತ್ತದೆ. ಈ ತರಬೇತಿ ಕಾರ್ಯಕ್ರಮವು 32 ರಿಂದ 80 ಗಂಟೆಗಳದ್ದಾಗಿದೆ.

**ಎರಡನೆಯದು:** ಅಲ್ಪಾವಧಿಯ ತರಬೇತಿಯ ಅಡಿಯಲ್ಲಿ, ಟೈಲರಿಂಗ್, ಪಿಂಗಾಣಿ ಪರಿಕರಣಗಳ ಉತ್ಪಾದನೆ ಮತ್ತು ಆಹಾರ ಸಂಸ್ಕರಣೆಯಂತಹ ಸ್ವ-ಉದ್ಯೋಗ ಕ್ಷೇತ್ರಗಳಲ್ಲಿ 200 ಗಂಟೆಗಳಿಂದ 600 ಗಂಟೆಗಳು ಮತ್ತು 6 ತಿಂಗಳವರೆಗೆ ತರಬೇತಿಯನ್ನು ನೀಡಲಾಗುತ್ತದೆ.

**ಮೂರನೆಯದು:** ಉದ್ಯಮಶೀಲತೆಯ ಅಭಿವೃದ್ಧಿ ಕಾರ್ಯಕ್ರಮದ ಮೂಲಕ, ಉದ್ಯಮಶೀಲತೆಯ ಚಿಂತನೆಯನ್ನು ಹೊಂದಿರುವ

# ಪ್ರಧಾನಮಂತ್ರಿ ದಕ್ಷ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಉಪಕ್ರಮಗಳು

- ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಪ್ರಧಾನಮಂತ್ರಿ-ದಕ್ಷ ಪೋರ್ಟಲ್ ಮತ್ತು ಪ್ರಧಾನಮಂತ್ರಿ-ದಕ್ಷ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದೆ. ಯೋಜನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳೊಂದಿಗೆ, ಆಸಕ್ತ ಅಭ್ಯರ್ಥಿಗಳು pmdaksh.dosje.gov.in ಅಥವಾ ಗೂಗಲ್ ಪ್ಲೇ ಸ್ಟೋರ್ ನಿಂದ ಮೊಬೈಲ್ ಅಪ್ಲಿಕೇಶನ್ "ಪಿಎಂ-ದಕ್ಷ್" ಅನ್ನು ಡೌನ್ ಲೋಡ್ ಮಾಡುವ ಮೂಲಕ ತಮ್ಮನ್ನು ನೋಂದಾಯಿಸಿಕೊಳ್ಳಬಹುದು.
- ಅರ್ಜಿದಾರರು ಭಾರತದ ಕಾಯಂ ನಿವಾಸಿಯಾಗಿರಬೇಕು. ಅವರ ವಯಸ್ಸು 18 ರಿಂದ 45 ವರ್ಷಗಳ ನಡುವೆ ಇರಬೇಕು.
- ಅರ್ಜಿದಾರರು ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ, ಇತರ ಹಿಂದುಳಿದ ವರ್ಗ, ಆರ್ಥಿಕವಾಗಿ ಹಿಂದುಳಿದ ವರ್ಗ, ಸಫಾಯಿ ಕರ್ಮಚಾರಿ, ಅಲೆಮಾರಿ, ಅರೆ ಅಲೆಮಾರಿ ಇತ್ಯಾದಿ ಸಮುದಾಯಗಳಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಇತರ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದರೆ, ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು 3 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.
- ಅರ್ಜಿದಾರರು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದರೆ, ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು 1 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.
- ಈ ಯೋಜನೆಯ ಲಾಭವನ್ನು ಪಡೆಯಲು ಫಲಾನುಭವಿಗಳು ಯಾವುದೇ ರೀತಿಯ ಶುಲ್ಕವನ್ನು ಪಾವತಿಸುವ ಅಗತ್ಯವಿಲ್ಲ. ಈ ಯೋಜನೆಯ ಪ್ರಯೋಜನವನ್ನು ಒಮ್ಮೆ ಮಾತ್ರ ಪಡೆಯಬಹುದು.
- ತರಬೇತಿ ಪಡೆಯುವವರಿಗೆ ಪ್ರಮಾಣೀಕರಣದೊಂದಿಗೆ ಉದ್ಯೋಗಾವಕಾಶಗಳನ್ನು ಒದಗಿಸಲು ಇದು ಸಹಾಯ ಮಾಡುತ್ತದೆ.

## ಪಿಎಂ-ದಕ್ಷ ಪೋರ್ಟಲ್: ಮಾಹಿತಿ ಮತ್ತು ಮೇಲ್ವಿಚಾರಣೆ ಎರಡೂ ಜೊತೆಜೊತೆಗೆ

- ಪರಿಶಿಷ್ಟ ಜಾತಿಗಳು, ಹಿಂದುಳಿದ ವರ್ಗಗಳು ಮತ್ತು ಸಫಾಯಿ ಕರ್ಮಚಾರಿಗಳ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಪಿಎಂ-ದಕ್ಷ ಪೋರ್ಟಲ್ ಮೂಲಕ ಒಂದೇ ಸ್ಥಳದಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ.
- ಇದಲ್ಲದೆ, ಯಾವುದೇ ಫಲಾನುಭವಿಯು ಈಗ ಅವನ / ಅವಳ ಬಳಿ ನಡೆಯುತ್ತಿರುವ ಕೌಶಲ್ಯ ಅಭಿವೃದ್ಧಿ ತರಬೇತಿಯ ಬಗ್ಗೆ ಒಂದೇ ಕ್ಲಿಕ್ ನಲ್ಲಿ ಮಾಹಿತಿಯನ್ನು ಪಡೆಯಬಹುದು ಮತ್ತು ಕೌಶಲ್ಯ ತರಬೇತಿಗಾಗಿ ಅವನ / ಅವಳ ಹೆಸರನ್ನು ಸುಲಭವಾಗಿ ನೋಂದಾಯಿಸಬಹುದು. ವೈಯಕ್ತಿಕ ಮಾಹಿತಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಅಪ್ಲೋಡ್ ಮಾಡುವ ಸೌಲಭ್ಯವೂ ಇಲ್ಲಿ ಲಭ್ಯವಿದೆ.
- ತರಬೇತಿಯ ಅವಧಿಯಲ್ಲಿ ಮುಖ ಮತ್ತು ಕಣ್ಣಿನ ಸ್ಕ್ಯಾನಿಂಗ್ ಮೂಲಕ ಪ್ರಶಿಕ್ಷಣಾರ್ಥಿಗಳ ಹಾಜರಾತಿಯನ್ನು ದಾಖಲಿಸಲು ಅನುಕೂಲ ಕಲ್ಪಿಸುವುದು.
- ತರಬೇತಿ ಕಾರ್ಯಕ್ರಮದ ಅವಧಿಯಲ್ಲಿ, ಮೇಲ್ವಿಚಾರಣೆಯನ್ನು ಸುಗಮಗೊಳಿಸಲು ಫೋಟೋಗಳು ಮತ್ತು ವೀಡಿಯೊ ತುಣುಕುಗಳನ್ನು ಬಳಸಲಾಗುತ್ತದೆ.
- ಈ ಯೋಜನೆಯನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ಬರುವ ಮೂರು ನಿಗಮಗಳು ಜಾರಿಗೆ ತರುತ್ತವೆ. ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮಗಳು ಈ ಸಂಸ್ಥೆಗಳ ಹೆಸರುಗಳಾಗಿವೆ.

## ಪ್ರಧಾನ ಮಂತ್ರಿ ದಕ್ಷ ಯೋಜನೆಯ ಪ್ರಯೋಜನಗಳು



**ಕುಶಲಕರ್ಮಿಗಳು:** ತಮ್ಮ ವ್ಯವಹಾರದಲ್ಲಿ ತರಬೇತಿ ಪಡೆಯುವ ಮೂಲಕ, ಅವರು ಹೆಚ್ಚಿನ ಆದಾಯವನ್ನು ಗಳಿಸಲು ಸಾಧ್ಯವಾಗುತ್ತದೆ.
**ಮಹಿಳೆಯರು:** ಸ್ವಯಂ ಉದ್ಯೋಗ ಕೈಗೊಳ್ಳಬಹುದು. ಇದು ಅವರನ್ನು ಆರ್ಥಿಕವಾಗಿ ಸದೃಢಗೊಳಿಸುತ್ತದೆ.
**ನಿರ್ದಿಷ್ಟ ಗುಂಪಿನ ಯುವಕರು:** ಉತ್ತಮ ಉದ್ಯೋಗಗಳಿಗೆ ಕಾರಣವಾಗಬಹುದಾದ ಉದ್ಯೋಗಗಳಲ್ಲಿ ದೀರ್ಘಕಾಲೀನ ತರಬೇತಿ ಮತ್ತು ಪರಿಣತಿಯನ್ನು ಪಡೆಯಬಹುದು.

ಪರಿಶಿಷ್ಟ ಜಾತಿಗಳು ಮತ್ತು ಇತರ ಹಿಂದುಳಿದ ವರ್ಗಗಳ ಯುವಕರಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮದ ಅವಧಿ 80 ರಿಂದ 90 ಗಂಟೆಗಳು, ಅಥವಾ 10 ರಿಂದ 15 ದಿನಗಳು.
**ನಾಲ್ಕನೆಯದಾಗಿ:** ದೀರ್ಘಕಾಲೀನ ಕಾರ್ಯಕ್ರಮದ ಮೂಲಕ, ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯನ್ನು ಹೊಂದಿರುವ ಕ್ಷೇತ್ರಗಳಲ್ಲಿ ತರಬೇತಿಯನ್ನು ಒದಗಿಸಲಾಗುತ್ತದೆ: ಉತ್ಪಾದನಾ ತಂತ್ರಜ್ಞಾನ, ಪ್ಲಾಸ್ಟಿಕ್ ಸಂಸ್ಕರಣೆ, ಉಡುಪು ತಂತ್ರಜ್ಞಾನ, ಆರೋಗ್ಯ ರಕ್ಷಣಾ ವಲಯ, ಇತ್ಯಾದಿ. ಈ ಕಾರ್ಯಕ್ರಮದ ಅವಧಿಯು 5 ತಿಂಗಳುಗಳು ಅಥವಾ ಅದಕ್ಕಿಂತ ಹೆಚ್ಚು ಅಥವಾ 1 ವರ್ಷ (1000 ಗಂಟೆಗಳು) ಆಗಿರುತ್ತದೆ. ಈ ಯೋಜನೆಯಡಿ ಪ್ರಶಿಕ್ಷಣಾರ್ಥಿಗಳಿಗೆ ಸ್ಟೈಪೆಂಡ್ ಸಹ ನೀಡಲಾಗುತ್ತದೆ. ಮರು ಕೌಶಲ್ಯ ಮತ್ತು ಕೌಶಲ್ಯವರ್ಧನೆ ತರಬೇತಿ ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಯ ಹಾಜರಾತಿ ಶೇ.80 ಆಗಿದ್ದರೆ, 2500 ರೂ.ಗಳನ್ನು ನೀಡಲಾಗುತ್ತದೆ. ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮದಡಿ, ಹಾಜರಾತಿ ಕನಿಷ್ಠ ಶೇ.80 ಆಗಿದ್ದರೆ, ದಿನಕ್ಕೆ 100 ರೂ.ಗಳನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿಯ ಪ್ರಶಿಕ್ಷಣಾರ್ಥಿಯು ಅಲ್ಪಾವಧಿ ಮತ್ತು ದೀರ್ಘಕಾಲೀನ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ತಿಂಗಳಿಗೆ 1500 ರೂ.ಗಳನ್ನು ಪಡೆಯುತ್ತಾನೆ. ■



# ನನ್ನ ಸ್ನೇಹಿತ, ಶಿಂಜೊ ಅಬೆ

**ಭಾರತದ ನಾಗರಿಕ ಪ್ರಶಸ್ತಿಯಾದ "ಪದ್ಮ ವಿಭೂಷಣ" ದಿಂದ ಗೌರವಿಸಲಾಗಿದ್ದ ಜಪಾನಿನ ಮಾಜಿ ಪ್ರಧಾನಮಂತ್ರಿ ಶಿಂಜೊ ಅಬೆ ಅವರ ಅಕಾಲಿಕ ನಿಧನದೊಂದಿಗೆ, ಜಗತ್ತು ಒಬ್ಬ ಜಾಗತಿಕ ರಾಜಕಾರಣಿ, ಅಸಾಧಾರಣ ನಾಯಕ ಮತ್ತು ಜಪಾನ್ ಮತ್ತು ಜಗತ್ತನ್ನು ಉತ್ತಮ ತಾಣವನ್ನಾಗಿ ಮಾಡಲು ತಮ್ಮ ಜೀವನವನ್ನು ಮುಡಿಪಾಗಿಟ್ಟ ಸಮರ್ಥ ಆಡಳಿತಗಾರನನ್ನು ಕಳೆದುಕೊಂಡಿದೆ. ಶಿಂಜೋ ಅಬೆ ಅವರ ಬಗ್ಗೆ ಆಳವಾದ ಗೌರವದ ಸಂಕೇತವಾಗಿ, ಭಾರತ ಸರ್ಕಾರವು ಜುಲೈ 9 ರಂದು ಅವರು ನಿಧನರಾದ ಮರುದಿನ ರಾಷ್ಟ್ರೀಯ ಶೋಕಾಚರಣೆ ದಿನವನ್ನು ಆಚರಿಸಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶಿಂಜೋ ಅಬೆ ಅವರೊಂದಿಗಿನ ಸ್ನೇಹವು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಪ್ರಾರಂಭವಾಯಿತು ಮತ್ತು ಕಾಲಾನಂತರದಲ್ಲಿ ಬಲಗೊಂಡಿತು. ಪ್ರಧಾನಮಂತ್ರಿ ಮೋದಿ ತಮ್ಮ ಸ್ನೇಹಿತ ಶಿಂಜೊ ಅಬೆ ಅವರ ದುರಂತ ಸಾವಿನ ಬಗ್ಗೆ ಭಾವನಾತ್ಮಕ ಬ್ಲಾಗ್ ಅನ್ನು ಪೋಸ್ಟ್ ಮಾಡಿದ್ದಾರೆ.**

ಶಿಂಜೊ ಅಬೆ - ಜಪಾನಿನ ಅಸಾಧಾರಣ ನಾಯಕ, ಉನ್ನತ ಜಾಗತಿಕ ಮುತ್ಸದ್ದಿ ಮತ್ತು ಭಾರತ-ಜಪಾನ್ ಸ್ನೇಹದ ಮಹಾನ್ ಚಾಂಪಿಯನ್ - ಇನ್ನು ಮುಂದೆ ನಮ್ಮ ನಡುವೆ ಇಲ್ಲ. ಜಪಾನ್ ಮತ್ತು ಜಗತ್ತು ಮಹಾನ್ ದಾರ್ಶನಿಕನನ್ನು ಕಳೆದುಕೊಂಡಿದೆ. ಮತ್ತು, ನಾನು ಪ್ರೀತಿಯ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ.

ನಾನು 2007ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿ ಜಪಾನ್ ಗೆ ಭೇಟಿ ನೀಡಿದ್ದಾಗ ಅವರನ್ನು ಮೊದಲ ಬಾರಿಗೆ ಭೇಟಿಯಾಗಿದ್ದೆ. ಆ ಮೊದಲ ಭೇಟಿಯಿಂದ, ನಮ್ಮ ಸ್ನೇಹವು ಕಚೇರಿ ಮತ್ತು ಅಧಿಕೃತ ಶಿಷ್ಟಾಚಾರದ ಸಂಕೋಲೆಗಳನ್ನು ಮೀರಿ ಬೆಳೆಯಿತು.

ಕ್ಯೋಟೋದ ತೋಜಿ ದೇವಾಲಯಕ್ಕೆ ನಮ್ಮ ಭೇಟಿ, ಶಿಂಕನ್ಸೆನ್ ನಲ್ಲಿ ನಮ್ಮ ರೈಲು ಪ್ರಯಾಣ, ಅಹ್ಮದಾಬಾದ್‌ನ ಸಾಬರಮತಿ ಆಶ್ರಮಕ್ಕೆ ನಮ್ಮ ಭೇಟಿ, ಕಾಶಿಯ ಗಂಗಾ ಆರತಿ, ಟೋಕಿಯೋದಲ್ಲಿ ವಿಸ್ತೃತವಾದ ಚಹಾ ಸಮಾರಂಭ, ನಮ್ಮ ಸ್ಮರಣೀಯ ಸಂವಾದಗಳ ಪಟ್ಟಿ ನಿಜವಾಗಿಯೂ ದೀರ್ಘವಾಗಿದೆ. ಮೌಂಟ್ ಫುಜಿಯ ತಪ್ಪಲಿನಲ್ಲಿ ನೆಲೆಗೊಂಡಿರುವ ಯಾಮಾನಾಶೀ ಪ್ರಾಂತ್ಯದ ಅವರ ಮನೆಗೆ ಆಹ್ವಾನಿತಗೊಂಡ ಏಕೈಕ ಗೌರವವನ್ನು ನಾನು ಯಾವಾಗಲೂ ಅಮೂಲ್ಯ ನೆನಪಾಗಿ ಕಾಪಿಡುತ್ತೇನೆ.

2007 ಮತ್ತು 2012 ರ ನಡುವೆ ಅವರು ಜಪಾನ್ ಪ್ರಧಾನಮಂತ್ರಿಯಾಗಿರದಿದ್ದಾಗ ಹಾಗು ಇತ್ತೀಚೆಗೆ 2020ರ ನಂತರ, ನಮ್ಮ ವೈಯಕ್ತಿಕ ಬಂಧವು ಮೊದಲಿನಂತೆ ಬಲವಾಗಿತ್ತು.

ಅಬೆ ಸಾನ್ ಅವರೊಂದಿಗಿನ ಪ್ರತಿಯೊಂದು ಭೇಟಿಯೂ ಬೌದ್ಧಿಕವಾಗಿ ಉತ್ತೇಜಕವಾಗಿತ್ತು. ಅವರು ಯಾವಾಗಲೂ ಆಡಳಿತ, ಆರ್ಥಿಕತೆ, ಸಂಸ್ಕೃತಿ, ವಿದೇಶಾಂಗ ನೀತಿ ಮತ್ತು ಇತರ ವಿವಿಧ ವಿಷಯಗಳ ಬಗ್ಗೆ ಹೊಸ ಆಲೋಚನೆಗಳು ಮತ್ತು ಅಮೂಲ್ಯ ಒಳನೋಟಗಳಿಂದ ತುಂಬಿದ್ದರು. ಅವರ ಸಲಹೆಯು ಗುಜರಾತ್ ಗಾಗಿ ನನ್ನ ಆರ್ಥಿಕ ಆಯ್ಕೆಗಳಲ್ಲಿ ನನಗೆ ಸ್ಫೂರ್ತಿ ನೀಡಿತು. ಮತ್ತು, ಅವರ ಬೆಂಬಲವು ಜಪಾನ್ ನೊಂದಿಗೆ ಗುಜರಾತ್‌ನ ಅದ್ಭುತ ಸಹಭಾಗಿತ್ವ ಪ್ರಮುಖ ಪಾತ್ರ ವಹಿಸಿತು.

ತರುವಾಯ, ಭಾರತ ಮತ್ತು ಜಪಾನ್ ನಡುವಿನ ಕಾರ್ಯತಂತ್ರಾತ್ಮಕ ಸಹಭಾಗಿತ್ವದಲ್ಲಿ ಅಭೂತಪೂರ್ವ ಪರಿವರ್ತನೆಯನ್ನು ತರಲು ಅವರೊಂದಿಗೆ ಕೆಲಸ ಮಾಡುವುದು ನನ್ನ ಸುಯೋಗವಾಗಿತ್ತು. ಬಹುಮಟ್ಟಿಗೆ ಸಂಕುಚಿತ, ದ್ವಿಪಕ್ಷೀಯ ಆರ್ಥಿಕ ಸಂಬಂಧದಿಂದ, ಅಬೆ ಸಾನ್ ಅದನ್ನು ವಿಶಾಲವಾದ, ಸಮಗ್ರವಾದ ಆರ್ಥಿಕ ಸಂಬಂಧವಾಗಿ ಪರಿವರ್ತಿಸಲು ಸಹಾಯ ಮಾಡಿದರು, ಇದು ರಾಷ್ಟ್ರೀಯ ಪ್ರಯತ್ನದ ಪ್ರತಿಯೊಂದು ಕ್ಷೇತ್ರವನ್ನು ಒಳಗೊಂಡಿದ್ದಲ್ಲದೆ, ನಮ್ಮ ಎರಡೂ ದೇಶಗಳು ಮತ್ತು ಪ್ರದೇಶದ ಭದ್ರತೆಗೆ ನಿರ್ಣಾಯಕವಾಯಿತು. ಅವರ ದೃಷ್ಟಿಯಲ್ಲಿ, ಇದು ನಮ್ಮ ಎರಡು ದೇಶಗಳು ಮತ್ತು ವಿಶ್ವದ ಜನರಿಗೆ ಅತ್ಯಂತ ಪರಿಣಾಮಾತ್ಮಕ ಸಂಬಂಧಗಳಲ್ಲಿ ಒಂದಾಗಿತ್ತು. ಅವರು ಭಾರತದೊಂದಿಗೆ ನಾಗರಿಕ ಪರಮಾಣು ಒಪ್ಪಂದವನ್ನು ಮುಂದುವರಿಸುವಲ್ಲಿ ದೃಢ ನಿಶ್ಚಯವನ್ನು ಹೊಂದಿದ್ದರು - ಇದು ಅವರ ದೇಶಕ್ಕೆ ಅತ್ಯಂತ ಕಷ್ಟಕರವಾಗಿತ್ತು - ಮತ್ತು ಭಾರತದಲ್ಲಿ ಹೈಸ್ಪೀಡ್ ರೈಲಿಗೆ ಅತ್ಯಂತ ಉದಾರವಾದ ಷರತ್ತುಗಳನ್ನು ನೀಡುವಲ್ಲಿ ನಿರ್ಣಾಯಕರಾಗಿದ್ದರು. ಸ್ವತಂತ್ರ ಭಾರತದ ಪಯಣದಲ್ಲಿ ಅತ್ಯಂತ ಪ್ರಮುಖ ಮೈಲಿಗಲ್ಲುಗಳಂತೆ, ನವ ಭಾರತವು ತನ್ನ ಬೆಳವಣಿಗೆಯನ್ನು ಚುರುಕುಗೊಳಿಸುತ್ತಿದ್ದಂತೆ ಜಪಾನ್ ಜೊತೆ ಜೊತೆಯಲ್ಲಿ ಇರುವುದನ್ನು ಅವರು ಖಚಿತಪಡಿಸಿದ್ದರು.

ಭಾರತ-ಜಪಾನ್ ಸಂಬಂಧಗಳಿಗೆ ಅವರು ನೀಡಿದ ಕೊಡುಗೆಯನ್ನು ಗುರುತಿಸಲಾಗಿದ್ದು, 2021ರಲ್ಲಿ ಅವರಿಗೆ ಪ್ರತಿಷ್ಠಿತ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಗತ್ತಿನಲ್ಲಿ ನಡೆಯುತ್ತಿರುವ ಸಂಕೀರ್ಣ ಮತ್ತು ಬಹು ಸ್ಥಿತ್ಯಂತರಗಳ ಬಗ್ಗೆ ಅಬೆ ಸಾನ್ ಆಳವಾದ ಒಳನೋಟವನ್ನು ಹೊಂದಿದ್ದರು, ರಾಜಕೀಯ, ಸಮಾಜ, ಆರ್ಥಿಕತೆ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ಮೇಲೆ ಅದರ ಪರಿಣಾಮವನ್ನು ನೋಡುವ ಅವರ ದೃಷ್ಟಿಕೋನ ಸಮಕಾಲೀನ ಸಮಯಕ್ಕಿಂತ ಮುಂದಿರುತ್ತಿತ್ತು. ಮಾಡಬೇಕಾದ ಆಯ್ಕೆಗಳನ್ನು ತಿಳಿದುಕೊಳ್ಳುವ ಬುದ್ಧಿವಂತಿಕೆ, ಸಂಪ್ರದಾಯಗಳ ನಡುವೆಯೂ ಸ್ಪಷ್ಟ ಮತ್ತು ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ತನ್ನ ಜನರನ್ನು ಮತ್ತು ಜಗತ್ತನ್ನು ತನ್ನೊಂದಿಗೆ ತೆಗೆದುಕೊಂಡು ಹೋಗುವ ಅಪರೂಪದ ಸಾಮರ್ಥ್ಯದ ಬಗ್ಗೆ ಅಬೆ ಸಾನ್ ಗೆ ಆಳವಾದ ಒಳನೋಟವಿತ್ತು. ಅವರ ದೂರಗಾಮಿ ನೀತಿಗಳಾದ ಅಬೆನಾಮಿಕ್ಸ್ ಜಪಾನಿನ ಅರ್ಥವ್ಯವಸ್ಥೆಗೆ ಚೈತನ್ಯ ತುಂಬಿತು ಮತ್ತು ಅವರ ಜನರ ಹೊಸ ಶೋಧನೆ ಮತ್ತು ಉದ್ಯಮಶೀಲತೆಯ ಮನೋಭಾವವನ್ನು ಪುನಶ್ಚೇತನಗೊಳಿಸಿತು.

ನಮಗೆ ಅವರು ನೀಡಿದ ಅತ್ಯಂತ ದೊಡ್ಡ ಕೊಡುಗೆಗಳಲ್ಲಿ ಮತ್ತು ಅವರ ಅತ್ಯಂತ ಶಾಶ್ವತ ಪರಂಪರೆ ಹಾಗೂ ಜಗತ್ತು ಸದಾ ಋಣಿಯಾಗಿರುವ ಒಂದು ಅಂಶವೆಂದರೆ, ದೊಡ್ಡ ಬದಲಾವಣೆಗಳನ್ನು ಗುರುತಿಸುವ ಮತ್ತು ನಮ್ಮ ಸಮಯದ ಸಮಸ್ಯೆಗಳನ್ನು ಕ್ರೋಡೀಕರಿಸಿ ಅದಕ್ಕೆ ಪ್ರತಿಕ್ರಿಯಿಸುವಲ್ಲಿ ಅವರ ನಾಯಕತ್ವ. 2007ರಲ್ಲಿ ಅವರು ಭಾರತೀಯ ಸಂಸತ್ತನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಇಂಡೋ ಪೆಸಿಫಿಕ್ ಪ್ರದೇಶವು ಸಮಕಾಲೀನ ರಾಜಕೀಯ, ವ್ಯೂಹಾತ್ಮಕ ಮತ್ತು ಆರ್ಥಿಕ ವಾಸ್ತವತೆಯಾಗಿ ಹೊರಹೊಮ್ಮಲು ಅಡಿಪಾಯ ಹಾಕಿದರು - ಇದು ಈ ಶತಮಾನದಲ್ಲಿ ಜಗತ್ತನ್ನು ರೂಪಿಸುವ ಪ್ರದೇಶವೂ ಆಗಿದೆ.

ಅವರು ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯ ಗೌರವ, ಅಂತಾರಾಷ್ಟ್ರೀಯ ಕಾನೂನು ಮತ್ತು ನಿಯಮಗಳ ಅನುಸರಣೆ, ಸಮಾನತೆಯ ಮನೋಭಾವದಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳ ಶಾಂತಿಯುತ ನಡವಳಿಕೆ ಮತ್ತು ಆಳವಾದ ಆರ್ಥಿಕ ತೊಡಗಿಸಿಕೊಳ್ಳುವಿಕೆಯ ಮೂಲಕ ಹಂಚಿಕೆಯ ಸಮೃದ್ಧಿಯ ಮನೋಭಾವದಿಂದ ಅಂತಾರಾಷ್ಟ್ರೀಯ ಸಂಬಂಧಗಳ ಶಾಂತಿಯುತ ನಡವಳಿಕೆಗೆ - ಅವರು ಆಳವಾಗಿ ಗೌರವಿಸಲಾದ ಮೌಲ್ಯಗಳ ಆಧಾರದ ಮೇಲೆ ಅದರ ಸ್ಥಿರ ಮತ್ತು ಸುಭದ್ರ, ಶಾಂತಿಯುತ ಮತ್ತು ಸಮೃದ್ಧ ಭವಿಷ್ಯಕ್ಕಾಗಿ ಚೌಕಟ್ಟು ಮತ್ತು ವಾಸ್ತುಶಿಲ್ಪವನ್ನು ನಿರ್ಮಿಸುವಲ್ಲಿ ಮುಂಚೂಣಿಯಲ್ಲಿ ನಿಂತು ಮುನ್ನಡೆಸಿದರು.

ಕ್ವಾಡ್, ಆಸಿಯಾನ್ ನೇತೃತ್ವದ ವೇದಿಕೆಗಳು, ಇಂಡೋ ಪೆಸಿಫಿಕ್ ಸಾಗರಗಳ ಉಪಕ್ರಮ, ಏಷ್ಯಾ-ಆಫ್ರಿಕಾ ಬೆಳವಣಿಗೆ ಕಾರಿಡಾರ್ ಮತ್ತು ವಿಪತ್ತು ತಾಳಿಕೊಳ್ಳುವ ಮೂಲಸೌಕರ್ಯಕ್ಕಾಗಿ ಒಕ್ಕೂಟ ಇವೆಲ್ಲವೂ ಅವರ ಕೊಡುಗೆಗಳಿಂದ ಪ್ರಯೋಜನ ಪಡೆದಿವೆ. ಸದ್ದಿಲ್ಲದೆ ಮತ್ತು ಯಾವುದೇ ಅಬ್ಬರವಿಲ್ಲದೆ, ಸ್ವದೇಶದಲ್ಲಿ ಹಿಂಜರಿಕೆ ಮತ್ತು ವಿದೇಶಗಳಲ್ಲಿನ ಸಂದೇಹಗಳನ್ನು ನಿವಾರಿಸಿ, ಭಾರತ ಪೆಸಿಫಿಕ್ ಪ್ರದೇಶದಾದ್ಯಂತ ರಕ್ಷಣೆ, ಸಂಪರ್ಕ, ಮೂಲಸೌಕರ್ಯ ಮತ್ತು ಸುಸ್ಥಿರತೆ ಸೇರಿದಂತೆ ಜಪಾನಿನ ವ್ಯೂಹಾತ್ಮಕ ಪಾಲ್ಗೊಳ್ಳುವಿಕೆಯನ್ನು ಅವರು ಪರಿವರ್ತಿಸಿದರು. ಅದಕ್ಕಾಗಿ, ಆ ದೇಶವು ತನ್ನ ಭವಿಷ್ಯದ ಬಗ್ಗೆ ಹೆಚ್ಚು ಆಶಾವಾದಿಯಾಗಿದೆ ಮತ್ತು ಜಗತ್ತು ತನ್ನ ಭವಿಷ್ಯದ ಬಗ್ಗೆ ಹೆಚ್ಚು ಆತ್ಮವಿಶ್ವಾಸ ಹೊಂದಿದೆ.

ಈ ವರ್ಷದ ಮೇ ತಿಂಗಳಲ್ಲಿ ನಾನು ಜಪಾನ್ ಗೆ ಭೇಟಿ ನೀಡಿದ್ದಾಗ, ಆಗ ತಾನೆ ಜಪಾನ್-ಭಾರತ ಸಂಘಟನೆಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದ ಅಬೆ ಸಾನ್ ಅವರನ್ನು ಭೇಟಿಯಾಗುವ ಅವಕಾಶ ನನಗೆ ಸಿಕ್ಕಿತು. ಅವರು ತಮ್ಮ ಎಂದಿನ ಸ್ಫೂರ್ತಿ-ಶಕ್ತಿಯುತ, ಮನಮೋಹಕ, ವರ್ಚಸ್ವಿ ಮತ್ತು ತುಂಬಾ ಹಾಸ್ಯಭರಿತ ಮನೋಭಾವದಲ್ಲಿದ್ದರು. ಭಾರತ-ಜಪಾನ್ ಸ್ನೇಹವನ್ನು ಮತ್ತಷ್ಟು ಬಲಪಡಿಸುವುದು ಹೇಗೆ ಎಂಬುದರ ಬಗ್ಗೆ ಅವರು ನಾವೀನ್ಯಪೂರ್ಣ ಆಲೋಚನೆಗಳನ್ನು ಹೊಂದಿದ್ದರು. ಆ ದಿನ ನಾನು ಅವರಿಗೆ ಶುಭವಿದಾಯ ಹೇಳಿದಾಗ, ಅದು ನಮ್ಮ ಅಂತಿಮ ಭೇಟಿಯಾಗುತ್ತದೆ ಎಂದು ನಾನು ಊಹಿಸಿರಲಿಲ್ಲ.

ಅವರ ಆತ್ಮೀಯತೆ ಮತ್ತು ಬುದ್ಧಿವಂತಿಕೆ, ಕೃಪೆ ಮತ್ತು ಔದಾರ್ಯ, ಸ್ನೇಹ ಮತ್ತು ಮಾರ್ಗದರ್ಶನಕ್ಕಾಗಿ ನಾನು ಸದಾ ಋಣಿಯಾಗಿರುತ್ತೇನೆ ಮತ್ತು ನಾನು ಅವರನ್ನು ಕಳೆದುಕೊಂಡಿದ್ದೇನೆ.

ಅವರು ನಮ್ಮನ್ನು ಮುಕ್ತ ಹೃದಯದಿಂದ ಆಲಂಗಿಸಿ ಕೊಂಡಿದ್ದಂತೆಯೇ, ಅವರ ನಿಧನಕ್ಕೆ ಭಾರತದಲ್ಲಿರುವ ನಾವು ಶೋಕಿಸುತ್ತೇವೆ. ಅವರು ತನ್ನ ಜನರನ್ನು ಪ್ರೇರೇಪಿಸುತ್ತಾ- ತಾವು ಹೆಚ್ಚು ಪ್ರೀತಿಸಿದ ಕೆಲಸವನ್ನು ಮಾಡಿ ಅಗಲಿದ್ದಾರೆ. ಅವರ ಜೀವನವು ದುರಂತದಲ್ಲಿ ಕೊನೆಗೊಂಡಿರಬಹುದು, ಆದರೆ ಅವರ ಪರಂಪರೆಯು ಶಾಶ್ವತವಾಗಿ ಉಳಿಯುತ್ತದೆ.

ನಾನು ಭಾರತದ ಜನತೆಯ ಪರವಾಗಿ ಜಪಾನಿನ ಜನತೆಗೆ, ವಿಶೇಷವಾಗಿ ಶ್ರೀಮತಿ ಅಕಿ ಅಬೆ ಮತ್ತು ಅವರ ಕುಟುಂಬಕ್ಕೆ ನನ್ನ ಪರವಾಗಿ ಹೃದಯಾಂತರಾಳದ ಸಂತಾಪಗಳನ್ನು ಸಲ್ಲಿಸುತ್ತೇನೆ. ಓಂ ಶಾಂತಿ. ■



**PMO India** @PMOIndia · 2d


दुनिया के लिए 21वीं सदी भारत की सदी है।

और भारत के लिए ये सदी कर्तव्यों की सदी है।

हमें इसी सदी में, अगले 25 सालों में नए भारत के स्वर्णिम लक्ष्य तक पहुँचना है।

इन लक्ष्यों तक हमें हमारे कर्तव्य ही लेकर जाएंगे।

इसलिए, ये 25 साल देश के लिए कर्तव्य पथ पर चलने के साल हैं: PM



**Rajnath Singh** @rajnathsin...

The 'Dunagiri' will be a world class stealth frigate with multidimensional capabilities to destroy enemies from sea, sky, and underwater.

The successful launch of 'Dunagiri' has helped in realizing the Nation's quest for self-reliance with regard to warship



**Amit Shah** @AmitShah

Matter of immense pride for every Indian, especially the people of Gujarat that India's first UNESCO World Heritage City, Ahmedabad has now been included in the list of "World's 50 Greatest Places of 2022" by Time Magazine.

Congratulations to everyone!

Since 2001, @NarendraModi Ji's visionary ideas laid the foundation for creating the world-class infrastructure in Gujarat.

Be it Sabarmati riverfront or Science city, Ahmedabad, Modi Ji has always stressed upon creating next-gen infrastructure and making India future ready.



**Nitin Gadkari** @nitin_gadkari

GoI under the visionary leadership of Hon'ble PM Shri @narendramodi Ji is bringing the connectivity gap in the country each day and transforming #NewIndia by building excellent infrastructure capacities.

#PragatiKaHighway #GatiShakti



**Ashwini Vaishnaw** @Ashwini...

गुजरात में श्री अंबाजी माताजी शक्तिपीठ और जैन समाज के तीर्थ स्थल तारंगा के श्रद्धालुओं एवं आबू, राजस्थान के पर्यटकों को अब रेल सुविधाओं का लाभ मिलेगा।

इस महत्वपूर्ण निर्णय के लिए पीएम @narendramodi जी का हार्दिक आभार।



**G Kishan Reddy** @kishanred...

Commemorating India's 75 years of Independence & as part of Azadi ka Amrit Kaal, #Cabinet chaired by PM Sh @NarendraModi decided that for next 75 days starting 15th July 2022, citizens above 18 years of age will be given booster doses free of cost

#AmritMahotsav

#CabinetDecisions

# I2U2 agenda is progressive, practical: Modi



Prime Minister Narendra Modi addressing the I2U2 virtual Summit in New Delhi on Thursday

**Tackling challenges**

**Renewable energy**

**SHINZO ABE 1954-2022** Prime Minister Narendra Modi on the passing of Japan's outstanding leader

# MY DEAR FRIEND, ABE SAN

Narendra Modi



REST IN PEACE: Abe and Modi, Gandhi Ashram, Ahmedabad, 2017

**Vibhushan to the World**

**The Light Lives On**

His far-reaching policies – Abenomics – reinvigorated the Japanese economy and reignited the spirit of innovation and entrepreneurship of his people

## Modi pushes for natural farming


# Our Policy is Driven by Conviction Not by Populist Compulsion: Modi

PM says India's recovery from the pandemic is reflective of people-centric policy



## Prime Minister Narendra Modi inaugurates Deoghar Airport and other development projects worth over ₹16,800 crore





## Varanasi: PM to launch projects worth ₹558 cr

## Blessings of Goddess Kali always with India: PM Modi



## Cabinet approves rail line linking Rajasthan, Gujarat

## PM greets Islamic bloc nations on Id

RNI No. :
DELKAN/2020/78828
August: 1-15, 2022


ನ್ಯೂ ಇಂಡಿಯಾ
ಸಮಾಚಾರ
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 26-30 advance Fortnightly (Publishing Date July 19, 2022, Pages - 56)

# ವಿಭಜನ್ ವಿಭೀಷಿಕಾ ಸ್ಮೃತಿ ದಿವಸ

## ಆಗಸ್ಟ್ 14

ಪ್ರೀತಿ ಪಾತ್ರರಿಂದ ಬೇರ್ಪಡುವುದು ಪ್ರಪಂಚದ ಅತಿದೊಡ್ಡ ನೋವು. ಸುಮಾರು ಏಳು ದಶಕಗಳ ಹಿಂದೆ ದೇಶವು ಸ್ವಾತಂತ್ರ್ಯವನ್ನು ಪಡೆದಾಗ, ಅದು ಅನೇಕ ಪ್ರೀತಿಪಾತ್ರರಿಂದ ದೂರವಾಗುವಂತೆ ಮಾಡಿದ ಅದೇ ಯಾತನೆಯನ್ನು ತನ್ನೊಂದಿಗೆ ತಂದಿತು. ಈ ಸಮಯದಲ್ಲಿ, ಭಾರತ ಮತ್ತು ಪಾಕಿಸ್ತಾನದ ಎರಡೂ ಬದಿಗಳಲ್ಲಿ ಭುಗಿಲೆದ್ದ ಹಿಂಸಾಚಾರದಲ್ಲಿ ಲಕ್ಷಾಂತರ ಜನರು ಪ್ರಾಣ ಕಳೆದುಕೊಂಡರು ಮತ್ತು ಲಕ್ಷಾಂತರ ಜನರು ತಮ್ಮ ಮನೆಗಳನ್ನು ಕಳೆದುಕೊಂಡರು ಎಂದು ಹೇಳಲಾಗುತ್ತದೆ. ಅವರ ಗೌರವಾರ್ಥವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಗಸ್ಟ್ 14 ರಂದು ವಿಭಜನೆ ಸ್ಮೃತಿ ಸ್ಮಾರಕ ದಿನವೆಂದು ಘೋಷಿಸಿದ್ದಾರೆ, ಇದರಿಂದಾಗಿ ನಮ್ಮ ಮುಂದಿನ ಪೀಳಿಗೆ ತಾರತಮ್ಯ, ದ್ವೇಷ ಮತ್ತು ದುರುದ್ದೇಶದ ವಿಷವನ್ನು ತೊಡೆದುಹಾಕಲು ಈ ದಿನವನ್ನು ಆಚರಿಸಬಹುದು.



“ 'ವಿಭಜನ್ ವಿಭೀಷಿಕ ಸ್ಮೃತಿ ದಿವಸ' ಸಾಮಾಜಿಕ ತಾರತಮ್ಯ ಮತ್ತು ಅಸಮತೋಲನವನ್ನು ತೊಡೆದುಹಾಕುವ ಮತ್ತು ಏಕತೆ, ಸಾಮಾಜಿಕ ಸಾಮರಸ್ಯ ಮತ್ತು ಮಾನವ ಸಂವೇದನೆಗಳನ್ನು ಬಲಪಡಿಸುವ ಪ್ರಾಮುಖ್ಯತೆಯನ್ನು ನಮಗೆ ನೆನಪಿಸುವುದನ್ನು ಮುಂದುವರಿಸುತ್ತದೆ. ”

ನರೇಂದ್ರ ಮೋದಿ, ಪ್ರಧಾನಮಂತ್ರಿ

ಸಂಪಾದಕರು
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು,
ಪಿಐಬಿ ನವದೆಹಲಿ

ಮುದ್ರಕರು ಮತ್ತು ಪ್ರಕಾಶಕರು
**ಸತ್ಯೇಂದ್ರ ಪ್ರಕಾಶ್**
ಪ್ರಧಾನ ಮಹಾನಿರ್ದೇಶಕರು,
ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್ ಪರವಾಗಿ

ಪ್ರಕಾಶಕರು
**ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್**
ಕೊಠಡಿ ಸಂ. 278, 2ನೇ ಮಹಡಿ, ಸೂಚನಾ ಭವನ,
ನವದೆಹಲಿ - 110003

ಮುದ್ರಣ:
**ಇನ್‌ಫಿನಿಟಿ ಅಡ್ವಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್**
ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ
ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003

Kannada Vol. 3
Issue 3